ಶುಕ್ರವಾರ, ಮೇ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 127 | ಪುಟ 10
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಂಕಷ್ಟದ ಈ ಕಾಲದಲ್ಲಿ ಚಂದನವನದ ಕೆಲ ನಟ, ನಟಿಯರು ಜನರ ನೆರವಿಗೆ ಧಾವಿಸುತ್ತಿದ್ದಾರೆ. ಔಷಧಿ, ಬೆಡ್ ಮುಂತಾದ ವ್ಯವಸ್ಥೆ ಕಲ್ಪಿಸಿ ತಮ್ಮ ಹೊಣೆಗಾರಿಕೆ ಪ್ರದರ್ಶಿಸುತ್ತಿದ್ದಾರೆ.



ಆಳ-ಅಗಲ
5ಜಿ : ಅಂಗೈಯಲ್ಲಿ ಅತಿ ವೇಗದ ಅಂತರ್ಜಾಲ

ಲಸಿಕೆ ಕೊರತೆ: ಹೈಕೋರ್ಟ್ ಕಳವಳ 8
ಲಾಕ್‌ಡೌನ್ ಚಿಂತನೆ: ಸುಧಾಕರ್ 4

ಸೆನ್ಸೆಕ್ಸ್	ನಿಫ್ಟಿ	₹/$
48,949 ▲	14,724 ▲	73.78 ▲

ಪಾಲು ಹೆಚ್ಚಳ: ಕೇಂದ್ರ ಹಿಂದೇಟು

1,200 ಟನ್ ಆಮ್ಲಜನಕ ಪೂರೈಸುವಂತೆ ಹೈಕೋರ್ಟ್ ನೀಡಿದ ಆದೇಶದ ವಿರುದ್ಧ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕಕ್ಕೆ ಹಂಚಿಕೆ ಮಾಡಿರುವ ವೈದ್ಯಕೀಯ ಆಮ್ಲಜನಕವನ್ನು 965 ಟನ್‌ನಿಂದ 1,200 ಟನ್‌ಗೆ ಹೆಚ್ಚಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಬುಧವಾರ ನೀಡಿದ ಆದೇಶಕ್ಕೆ ತಕ್ಷಣವೇ ತಡೆ ಕೊಡಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಗುರುವಾರ ಅರ್ಜಿ ಸಲ್ಲಿಸಿದೆ. ರಾಜ್ಯದ ಆಮ್ಲಜನಕ ಪಾಲನ್ನು ಹೆಚ್ಚಿಸಲು ಸಾಧ್ಯವಿಲ್ಲ ಎಂಬ ಪರೋಕ್ಷ ಸಂದೇಶವನ್ನು ಈ ಮೂಲಕ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರ ಪೀಠದ ಮುಂದೆ ಈ ವಿಷಯವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪ್ರಸ್ತಾಪಿಸಿದರು. ಕರ್ನಾಟಕ ಹೈಕೋರ್ಟ್ ಆದೇಶಕ್ಕೆ ತುರ್ತಾಗಿ ತಡೆಯಾಜ್ಞೆ ನೀಡಬೇಕು ಎಂದು ಕೋರಿದರು.

ಕರ್ನಾಟಕ ಸರ್ಕಾರದ ಜತೆಗೆ ಮಾತುಕತೆ ನಡೆಸಿ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದಾಗಿ ಮೆಹ್ತಾ ಅವರು ಪೀಠಕ್ಕೆ ತಿಳಿಸಿದರು.

ಆದರೆ, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ನ್ಯಾಯಾಲಯದ ಮುಂದೆ ಇಲ್ಲ. ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಓದದೇ ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ. ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠದ ಮುಂದೆ ಇರಿಸಲಾಗುವುದು ಎಂದು ಪೀಠವು ಹೇಳಿತು.

8ನೇ ಪುಟ ನೋಡಿ


ಹಾಸಿಗೆ ಸಿಗದ ಕಾರಣ ಕೋವಿಡ್ ರೋಗಿಯೊಬ್ಬರು ಆಮ್ಲಜನಕ ವ್ಯವಸ್ಥೆಯೊಂದಿಗೆ ಗುರುವಾರ ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ ಎದುರು ಕಾರಿನಲ್ಲಿಯೇ ಮಲಗಿದ್ದರು ಪ್ರಜಾವಾಣಿ ಚಿತ್ರ/ ಜನಾರ್ದನ್ ಬಿ.ಕೆ.

'ಮೂರನೇ ಅಲೆಗೆ ಸಿದ್ಧತೆ ಏನು?'



ಕೋವಿಡ್-19 ಸಾಂಕ್ರಾಮಿಕದ ಮೂರನೇ ಅಲೆಯನ್ನು ಎದುರಿಸಲು ತಯಾರಿಸಿರುವ ಯೋಜನೆ ಏನು ಮತ್ತು ಮಾಡಿಕೊಂಡಿರುವ ಸಿದ್ಧತೆ ಏನು ಎಂಬುದನ್ನು ತಿಳಿಸುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ವೈದ್ಯಕೀಯ ಆಮ್ಲಜನಕದ ಮೀಸಲು ಸಂಗ್ರಹ ಇರಿಸಿಕೊಳ್ಳಬೇಕು ಮತ್ತು ಲಸಿಕೆ ನೀಡಿಕೆ ವ್ಯಾಪಕಗೊಳ್ಳಬೇಕು ಎಂದು ಹೇಳಿದೆ.

'ಮೂರನೇ ಅಲೆಯು ಹತ್ತಿರದಲ್ಲಿಯೇ ಇದೆ. ಇದು ಮಕ್ಕಳನ್ನೂ ಬಾಧಿಸಲಿದೆ ಎಂದು ತಜ್ಞರು ಹೇಳಿದ್ದಾರೆ. ಹಾಗಿರುವಾಗ ಅಗತ್ಯವಾಗಿ ಬೇಕಾಗಿರುವ ವಸ್ತುಗಳ ಪೂರೈಕೆ ಹೆಚ್ಚಿಸಲು ಏನು ಸಮಸ್ಯೆ? ಪೂರೈಕೆ ಹೆಚ್ಚಳ ಮಾಡಿದರೆ, ಮೀಸಲು ಸಂಗ್ರಹ ಇರಿಸಿಕೊಂಡರೆ ಕೊನೆಯ ಕ್ಷಣದಲ್ಲಿ ದಿಗಿಲಾಗುವುದು ತಪ್ಪುತ್ತದೆ' ಎಂದು ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ.

ಮೂರನೇ ಅಲೆಯನ್ನು ನಿಭಾಯಿಸಲು ವೈಜ್ಞಾನಿಕವಾಗಿ ಸಜ್ಜಾಗಬೇಕು. ಮೂರನೇ ಅಲೆಯು ಸಂಪೂರ್ಣವಾಗಿ ಭಿನ್ನವಾಗಿರುವ ಸಾಧ್ಯತೆ ಇದೆ. ಇದು ಮಕ್ಕಳನ್ನು ಬಾಧಿಸಿದರೆ ಸಮಸ್ಯೆ ಸಂಕೀರ್ಣವಾಗುತ್ತದೆ. ಮಗುವನ್ನು ಆಸ್ಪತ್ರೆಗೆ ಒಯ್ಯುವಾಗ ಜತೆಗೆ ಅಪ್ಪ–ಅಮ್ಮ ಹೋಗುತ್ತಾರೆ. ಅದಕ್ಕಾಗಿಯೇ ಮೂರನೇ ಅಲೆಯ ಹೊತ್ತಿಗೆ ಈ ವರ್ಗಕ್ಕೆ ಲಸಿಕೆ ನೀಡಿರಬೇಕು. ಇದನ್ನು ವೈಜ್ಞಾನಿಕವಾಗಿ ಯೋಜಿಸಬೇಕು. ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಪೀಠ ತಿಳಿಸಿದೆ.

ಆಸ್ಪತ್ರೆಗಳಲ್ಲಿ ಆಮ್ಲಜನಕ ಸಹಾಯವಾಣಿ ಮಾಹಿತಿ

ಬೆಂಗಳೂರು: ವೈದ್ಯಕೀಯ ಆಮ್ಲಜನಕದ ನಿರ್ವಹಣೆಗೆ ಸಂಬಂಧಿಸಿದಂತೆ ಕೇಂದ್ರೀಕೃತ ವ್ಯವಸ್ಥೆಯೇ ಇಲ್ಲದಿರುವುದನ್ನು ಗಮನಿಸಿದ ಹೈಕೋರ್ಟ್, ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಎಲ್ಲ ಆಸ್ಪತ್ರೆಗಳಲ್ಲೂ ಆಮ್ಲಜನಕದ ಸಹಾಯವಾಣಿ ಮಾಹಿತಿ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಗುರುವಾರ ನಿರ್ದೇಶನ ನೀಡಿದೆ. ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ವಿಶೇಷ ಪೀಠ, ಈ ನಿರ್ದೇಶನ ನೀಡಿತು.

'ರಾಜ್ಯ ಸರ್ಕಾರವು ಇ-ಮೇಲ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಬಳಸಿ ಮಾಹಿತಿ ರವಾನಿಸುವ ಕ್ರಮ ಅನುಸರಿಸಲು ಅವಕಾಶವಿದೆ. ಆಮ್ಲಜನಕ ಪೂರೈಕೆ ಸಹಾಯವಾಣಿಗೆ ಸಂಬಂಧಿಸಿದ ಮಾಹಿತಿ ಪ್ರಚಾರಕ್ಕೆ ತಕ್ಷಣವೇ ಎಲ್ಲ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳಿಗೆ ನಿರ್ದೇಶಿಸಬೇಕು. ತ್ವರಿತವಾಗಿ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಪೀಠ ಆದೇಶಿಸಿತು.

8ನೇ ಪುಟ ನೋಡಿ

ಜಂಬೋ ಸಿಲಿಂಡರ್ ಕೊಡಿ: ಫಾನಾ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿದ್ದಂತೆ ವೈದ್ಯಕೀಯ ಆಮ್ಲಜನಕಕ್ಕೆ ಖಾಸಗಿ ಆಸ್ಪತ್ರೆಗಳಿಂದ ಬೇಡಿಕೆ ಹೆಚ್ಚುತ್ತಿದ್ದು, ಸಿಲಿಂಡರ್‌ಗಳನ್ನು ಒದಗಿಸುವಂತೆ ಆಸ್ಪತ್ರೆಗಳ ಮುಖ್ಯಸ್ಥರು ಸಾಮಾಜಿಕ ಜಾಲತಾಣಗಳಲ್ಲಿ ಮನವಿ ಮಾಡಲಾರಂಭಿಸಿದ್ದಾರೆ. ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಮತ್ತೊಮ್ಮೆ ಆಮ್ಲಜನಕದ ಕೊರತೆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು, ಸಿಲಿಂಡರ್‌ಗಳ ಲಭ್ಯತೆಗೆ ಅಗತ್ಯ ವ್ಯವಸ್ಥೆ ಮಾಡಲು ಕೋರಿದೆ. 'ಆಸ್ಪತ್ರೆಗಳು ಮೂರು ದಿನಗಳಿಗೆ ಆಗುವಷ್ಟು ಆಮ್ಲಜನಕದ ದಾಸ್ತಾನು ಹೊಂದಿರಬೇಕು' ಎಂಬ ಸರ್ಕಾರದ ಆದೇಶಕ್ಕೆ ಫಾನಾ ಆಕ್ಷೇಪ ವ್ಯಕ್ತಪಡಿಸಿದೆ. 'ಮೇ 3ರಂದು ಹೊರಡಿಸಿದ ಆದೇಶದ ಪ್ರಕಾರ ಪ್ರತಿ ಹಾಸಿಗೆಗೆ 7 ಜಂಬೋ ಸಿಲಿಂಡರ್‌ಗಳು ಅಗತ್ಯವಿದೆ. ಆದರೆ, ಅದೇ ಆದೇಶದಲ್ಲಿ ಇನ್ನೊಂದೆಡೆ ಪ್ರತಿ ಹಾಸಿಗೆಗೆ 4 ಜಂಬೋ ಸಿಲಿಂಡರ್‌ಗಳು ಹೊಂದಿರಬೇಕು ಎಂದು ಹೇಳಲಾಗಿದೆ. ಇದು ಗೊಂದಲಕ್ಕೆ ಎಡೆಮಾಡಿಕೊಟ್ಟಿದೆ' ಎಂದು ಅಸೋಸಿಯೇಷನ್ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ಬೇಸರ ವ್ಯಕ್ತಪಡಿಸಿದ್ದಾರೆ.

ಬದಲಾಗದ ಆಮ್ಲಜನಕ ಹಂಚಿಕೆ 'ಸೂತ್ರ'

ರಾಜ್ಯದ ಕೂಗಿಗೆ ಸಿಗದ ಮನ್ನಣೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಅಗತ್ಯಕ್ಕೆ ತಕ್ಕಂತೆ ಆಮ್ಲಜನಕ ಪೂರೈಸಲು ಮನಸ್ಸು ಮಾಡದ ಕೇಂದ್ರ ಸರ್ಕಾರ, ಇಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಸ್ಥಳೀಯವಾಗಿ ಬಳಸಲು ಅವಕಾಶ ಮಾಡಿಕೊಡಬೇಕೆಂಬ ಕೋರಿಕೆಗೂ ಕಿವಿಗೊಟ್ಟಿಲ್ಲ.

ಹೈಕೋರ್ಟ್‌ಗೆ ಮೇ 5ರ ಸಂಜೆ ನೀಡಿದ್ದ ಮಾತಿನಂತೆ ರಾತ್ರಿ ವೇಳೆಗೇ ರಾಜ್ಯಕ್ಕೆ ಪ್ರತಿದಿನದ ಆಮ್ಲಜನಕ ಹಂಚಿಕೆ ಪಾಲು 865 ಟನ್‌ನಿಂದ 965 ಟನ್‌ಗೆ ಕೇಂದ್ರ ಸರ್ಕಾರ ಹೆಚ್ಚಿಸಿದೆ. ಆದರೆ,ಹೆಚ್ಚಿಸಿರುವ 100 ಟನ್‌ನಲ್ಲಿ 40 ಟನ್ ಒಡಿಶಾದಿಂದ ಬರಬೇಕಿದೆ.

ರಾಜ್ಯದಲ್ಲಿ ಉತ್ಪಾದನೆಯಾಗುವ ಆಮ್ಲಜನಕವನ್ನು ಸ್ಥಳೀಯವಾಗಿಯೇ ಬಳಸಲು ಕೇಂದ್ರ ಸರ್ಕಾರ ಅವಕಾಶ ನೀಡುವ ವಿಶ್ವಾಸವನ್ನು ಮುಖ್ಯಮಂತ್ರಿ ವ್ಯಕ್ತಪಡಿಸಿದ್ದರು.

'ನಮ್ಮ ಬೇಡಿಕೆಗೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಮತ್ತು ಪ್ರಲ್ಹಾದ ಜೋಶಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಬುಧವಾರ ಹೇಳಿದ್ದರು.

ರಾಜ್ಯದಲ್ಲಿರುವ ಪ್ರಮುಖ ಏಳು ಕಂಪನಿಗಳು ಉತ್ಪಾದಿಸುವ ಒಟ್ಟು ಆಮ್ಲಜನಕದಲ್ಲಿ 903 ಟನ್ ಅನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ.

8ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಕಾಳಸಂತೆಯಲ್ಲಿ 'ಪ್ರಾಣವಾಯು'!

ಉತ್ಪಾದಕ ಕಂಪನಿಗಳು, ಮರು ಭರ್ತಿ (ರೀ ಫಿಲ್ಲಿಂಗ್) ಏಜೆನ್ಸಿಗಳು ಆಮ್ಲಜನಕ ಪ್ರಮಾಣದ ಸುಳ್ಳು ಲೆಕ್ಕ ತೋರಿಸಿ, ಭಾರಿ ಮೊತ್ತಕ್ಕೆ ಕಾಳಸಂತೆಯಲ್ಲಿ ಮಾರುತ್ತಿರುವುದು ಬಹಿರಂಗವಾಗಿದೆ. ರಾಜ್ಯದಲ್ಲಿ ನಿತ್ಯ 2,400 ಟನ್‌ಗೂ ಹೆಚ್ಚು ಆಮ್ಲಜನಕ ಉತ್ಪಾದನೆಯಾಗುತ್ತಿದೆ ಎನ್ನಲಾಗಿದೆ. ಆದರೆ, ಸರ್ಕಾರದ ಮಾಹಿತಿ ಪ್ರಕಾರ 1,043 ಟನ್ ಮಾತ್ರ!. ಆದರೆ ನಿತ್ಯವು ಉತ್ಪಾದನೆ ಪ್ರಮಾಣ ಬದಲಾಗುತ್ತಿರುತ್ತದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ತುರ್ತು ಅಗತ್ಯಕ್ಕೆ 4–5 ಪಟ್ಟು ಹೆಚ್ಚು ಹಣ ಕೊಟ್ಟು ಮರು ಭರ್ತಿ ಏಜೆನ್ಸಿಗಳಿಂದ ಖರೀದಿಸಲೇ ಬೇಕಾಗಿದೆ. ಈ ಏಜೆನ್ಸಿಗಳು ಆಮ್ಲಜನಕ ಸಿಲಿಂಡರ್‌ಗಳನ್ನು ಸಾರ್ವಜನಿಕರಿಗೆ ಮಾರಲು ಅವಕಾಶವಿಲ್ಲ. ಆದರೆ, ಬೆಂಗಳೂರಿನ ಹಲವು ಅಪಾರ್ಟ್‌ಮೆಂಟ್‌ಗಳು, ಮನೆಗಳಲ್ಲಿ ಆಮ್ಲಜನಕ ಸಿಲಿಂಡರ್ ಸಂಗ್ರಹವಿದೆ. ಹೀಗಾಗಿ, ಸಿಲಿಂಡರ್‌ಗಳ ಕೊರತೆ ಆಗಿದೆ' ಎಂದು ಖಾಸಗಿ ಆಸ್ಪತ್ರೆಯೊಂದರ ಮಾಲೀಕರು ವಸ್ತುಸ್ಥಿತಿ ಹಂಚಿಕೊಂಡರು. 'ಕಲಬುರ್ಗಿ ಜಿಲ್ಲೆಯ ನಂದೂರು ಕೈಗಾರಿಕಾ ಪ್ರದೇಶದಿಂದ ಆಮ್ಲಜನಕ ಸಿಲಿಂಡರ್‌ಗಳನ್ನು ಮಹಾರಾಷ್ಟ್ರ, ತೆಲಂಗಾಣ ರಾಜ್ಯಕ್ಕೆ ಕಾಳಸಂತೆಯಲ್ಲಿ ಮಾರಿದ ಬಗ್ಗೆ ಪ್ರಕರಣ ದಾಖಲಾಗಿದೆ. ಪೀಣ್ಯದ ಮರು ಭರ್ತಿ ಕೇಂದ್ರವೊಂದರ ಮೇಲೂ ಎಫ್‌ಐಆರ್ ದಾಖಲಾಗಿದೆ' ಎಂದು ಔಷಧ ನಿಯಂತ್ರಕರ ಕಚೇರಿಯ ಅಧಿಕಾರಿಯೊಬ್ಬರು ಹೇಳಿದರು.

ರಾಜ್ಯದಲ್ಲಿರುವ ಆಮ್ಲಜನಕ ಉತ್ಪಾದಕ ಕಂಪನಿಗಳಿಂದ ಮೇ 5ರಂದು ಹಂಚಿಕೆ (ಟನ್‌ಗಳಲ್ಲಿ)

ಉತ್ಪಾದಕ ಕಂಪನಿ	ಕೇಂದ್ರದಿಂದ ಹಂಚಿಕೆ	ರಾಜ್ಯಕ್ಕೆ	ಹೊರ ರಾಜ್ಯಕ್ಕೆ
ಜೆಎಸ್‌ಡಬ್ಲ್ಯೂ ಇಂಡಸ್ಟ್ರೀಸ್	165	130	35
ಯುನಿವರ್ಸಲ್ ಏರ್ ಪ್ರಾಡಕ್ಟ್ಸ್	45	45	0
ಭರೂಕಾ ಗ್ಯಾಸ್	75	65	10
ಏರ್ ವಾಟರ್ ಬಳ್ಳಾರಿ	115	105	10
ಇನ್ನೋಕ್ಸ್ ಬೆಲ್ಲೋಕ್ಸಿ ಬಳ್ಳಾರಿ	30	0	30
ಲಿಂಡೆ ಬೆಲ್ಲೋಕ್ಸಿ ಬಳ್ಳಾರಿ	40	25	15
ಲಿಂಡೆ ಬಳ್ಳಾರಿ–1	168	100	68
ಲಿಂಡೆ ಬಳ್ಳಾರಿ–2	115	115	0
ಲಿಂಡೆ ಹೊಸಪೇಟೆ	150	150	0
ರಾಜ್ಯದ ಎಂಎಸ್‌ಎಂಇ ಘಟಕಗಳಿಂದ	60	60	0
ಒಟ್ಟು	963	795	168

ಜೂನ್ 1ಕ್ಕೆ ಮುಂಗಾರು ಕೇರಳ ಪ್ರವೇಶ

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಜೂನ್ 1ರಂದು ಕೇರಳ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರಾಜೀವನ್ ಗುರುವಾರ ಹೇಳಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

17,90,104 ▲	ಒಟ್ಟು ಸೋಂಕಿತರು (16,46,303 ನಿನ್ನೆಯ ವಿವರ)
5,17,075 ▲	ಸಕ್ರಿಯ ಪ್ರಕರಣಗಳು
12,55,797 ▲	ಗುಣಮುಖರಾದವರು
17,212 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	49,058 ▼
ಗುಣಮುಖ	18,943 ▼
ಸಾವು	328 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಬೆಂಗಾವಲು ವಾಹನದ ಮೇಲೆ ದಾಳಿ ಸಚಿವ ಮುರಳೀಧರನ್ ಆರೋಪ

ಪಶ್ಚಿಮ ಬಂಗಾಳ: ಅಪರಿಚಿತ ವ್ಯಕ್ತಿಗಳ ಗುಂಪಿನ ಕೃತ್ಯ

ಕೋಲ್ಕತ್ತ (ಪಿಟಿಐ): ತಮ್ಮ ಬೆಂಗಾವಲು ವಾಹನಗಳ ಮೇಲೆ ಪಶ್ಚಿಮ ಬಂಗಾಳದ ಪಶ್ಚಿಮ ಮೇದಿನಿಪುರ ಜಿಲ್ಲೆಯ ಪಂಚಕುರಿ ಗ್ರಾಮದ ಹಲವೆಡೆ ಅಪರಿಚಿತ ವ್ಯಕ್ತಿಗಳ ಗುಂಪುಗಳು ಗುರುವಾರ ದಾಳಿ ನಡೆಸಿವೆ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು ಆರೋಪಿಸಿದ್ದಾರೆ.

'ಹಲ್ಲೆಗೆ ಒಳಗಾಗಿದ್ದ ನಮ್ಮ ಪಕ್ಷದ ಕಾರ್ಯಕರ್ತರನ್ನು ಭೇಟಿಮಾಡಲು ನಾನು ಪಶ್ಚಿಮ ಮೇದಿನಿಪುರ ಜಿಲ್ಲೆಗೆ ಭೇಟಿನೀಡಿದ್ದೆ. ಒಬ್ಬ ಕಾರ್ಯಕರ್ತರ ಮನೆಯಿಂದ ಇನ್ನೊಬ್ಬ ಕಾರ್ಯಕರ್ತರ ಮನೆಗೆ ಹೋಗುತ್ತಿದ್ದಾಗ, ಟಿಎಂಸಿ ಬೆಂಬಲಿತ ಗೂಂಡಾಗಳ ಗುಂಪೊಂದು ನಮ್ಮತ್ತ ಧಾವಿಸಿ ಬಂದು ದಾಳಿ ನಡೆಸಲು ಆರಂಭಿಸಿತು. ನಾನು ಸುರಕ್ಷಿತವಾಗಿದ್ದೇನೆ. ಆದರೆ ನನ್ನ ಕಾರಿನ ಚಾಲಕ ಗಾಯಗೊಂಡಿದ್ದಾರೆ. ಕೆಲವು ಕಾರುಗಳ ಗಾಜುಗಳನ್ನು ಒಡೆಯಲಾಗಿದೆ' ಎಂದು ಮುರಳೀಧರನ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

'ಘಟನೆಯ ನಂತರ ಪ್ರವಾಸವನ್ನು ಮೊಟಕುಗೊಳಿಸುವಂತೆ ಪೊಲೀಸರು ನನಗೆ ಸಲಹೆ ನೀಡಿದ್ದರು. ಅದರಂತೆ ನಾನು ವಾಪಸಾಗಿದ್ದೇನೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಮಧ್ಯಾಹ್ನ 12.30ರ ಸುಮಾರಿಗೆ ಅಪರಿಚಿತ ವ್ಯಕ್ತಿಗಳ ಗುಂಪೊಂದು ಸಚಿವರ ಕಾರುಗಳ ಮೇಲೆ ದಾಳಿ ನಡೆಸಿದೆ. ಘಟನೆಗೆ ಸಂಬಂಧಿಸಿದಂತೆ ಎಂಟು ಮಂದಿಯನ್ನು ಬಂಧಿಸಲಾಗಿದೆ. ಸ್ಥಳದಲ್ಲಿದ್ದ ಪೊಲೀಸರಿಗೆ ಸ್ಪಷ್ಟನೆ ಕೇಳಿ ನೋಟಿಸ್ ನೀಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಡ್ಡಾ ಖಂಡನೆ: ಸಚಿವ ಮುರಳೀಧರನ್ ಅವರ ಬೆಂಗಾವಲು ವಾಹನದ ಮೇಲೆ ಹಲ್ಲೆ ನಡೆದಿರುವುದನ್ನು ಖಂಡಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, 'ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಪ್ರಾಯೋಜಿತ ಹಿಂಸಾಚಾರವು ತೀವ್ರಗೊಂಡಿದೆ' ಎಂದಿದ್ದಾರೆ.


ಕೇಂದ್ರದ ಸಚಿವ ವಿ. ಮುರಳೀಧರನ್ ಅವರ ಬೆಂಗಾವಲು ವಾಹನದ ಮೇಲೆ ಅಪರಿಚಿತರ ಗುಂಪು ದಾಳಿ ನಡೆಸುತ್ತಿದ್ದಾಗಿನ ಸಂದರ್ಭದ ಚಿತ್ರ

ಹಾಸಿಗೆ ಮಾರಾಟದ ವಿರುದ್ಧ ಧ್ವನಿ ಎತ್ತಿದ್ದವರೇ ಭಾಗಿ: ಆರೋಪ

ಹಾಸಿಗೆ ಹಂಚಿಕೆ: ಬಿಜೆಪಿ ಶಾಸಕನ ಹಸ್ತಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಕೋಟಾದ ಹಾಸಿಗೆ ಹಂಚಿಕೆ ಮಾಡುವ ಬಿಬಿಎಂಪಿಯ ಕೋವಿಡ್ ವಾರ್ ರೂಂ ಸಿಬ್ಬಂದಿ ಹಾಸಿಗೆ ಮಾರಾಟ ದಂಧೆ ನಡೆಸುತ್ತಿದ್ದಾರೆ' ಎಂದು ಧ್ವನಿ ಎತ್ತಿದ್ದ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ.ಸತೀಶ್ ರೆಡ್ಡಿ ಅವರೇ ಈಗ ಹಾಸಿಗೆ ಹಂಚಿಕೆ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದ ಆರೋಪ ಎದುರಿಸುತ್ತಿದ್ದಾರೆ.

ಸತೀಶ್ ರೆಡ್ಡಿ ತಮ್ಮ ಬೆಂಬಲಿಗ ಬಾಬು ಎಂಬವರನ್ನು ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಬೊಮ್ಮನಹಳ್ಳಿ ವಲಯದ ವಾರ್ ರೂಂಗೆ ಕಳುಹಿಸಿ ಅವರ ಮೂಲಕ ಹಾಸಿಗೆ ಹಂಚಿಕೆ ಪ್ರಕ್ರಿಯೆ ಮೇಲೆ ಪ್ರಭಾವ ಬೀರುತ್ತಿದ್ದರು. ತಮಗೆ ಬೇಕಾದವರಿಗೆ ತಕ್ಷಣವೇ ಹಾಸಿಗೆ ಒದಗಿಸುವಂತೆ ಒತ್ತಾಯಿಸುತ್ತಿದ್ದರು. ಸೋಂಕಿನ ಲಕ್ಷಣವಿಲ್ಲದವರಿಗೆ, ಐಸಿಯುವಿನಲ್ಲಿ ಚಿಕಿತ್ಸೆ ಅಗತ್ಯವಿಲ್ಲದವರಿಗೂ ಹಾಸಿಗೆ ಕಾಯ್ದಿರಿಸಲು ಒತ್ತಡಹೇರುತ್ತಿದ್ದರು. ಇದರಿಂದ ಅಗತ್ಯವಿದ್ದವರಿಗೆ ಸಕಾಲದಲ್ಲಿ ಹಾಸಿಗೆ ಲಭಿಸುತ್ತಿರಲಿಲ್ಲ ಎನ್ನಲಾಗಿದೆ.

ವೈದ್ಯರು, ಸಹಾಯವಾಣಿ ಸಿಬ್ಬಂದಿ, ದೂರವಾಣಿ ಮೂಲಕ ಆರೋಗ್ಯ ಸಲಹೆ ನೀಡುವ ಸಿಬ್ಬಂದಿ, ದತ್ತಾಂಶ ದಾಖಲಿಸುವ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಮಾತ್ರ ವಾರ್ ರೂಂಗೆ ಪ್ರವೇಶವಿದೆ. ನೋಡಲ್ ಅಧಿಕಾರಿ ರಾಜೇಂದ್ರ ಕುಮಾರ್ ಕಟಾರಿಯಾ ನೇತೃತ್ವದ ಹಿರಿಯ ಅಧಿಕಾರಿಗಳ ತಂಡವು ಕಳೆದ ವಾರ ಈ ವಾರ್ ರೂಂಗೆ ದಿಢೀರ್ ಭೇಟಿ ನೀಡಿತ್ತು. ಸಿಬ್ಬಂದಿಯಲ್ಲದ ಬಾಬು ಅಲ್ಲಿದ್ದ ಬಗ್ಗೆ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೇ ಅವರನ್ನು ಹೊರಗೆ ಕಳುಹಿಸಿದ್ದರು. ಅವರನ್ನು ಒಳಗೆ ಬಿಟ್ಟುಕೊಳ್ಳಬಾರದು ಎಂದು ತಾಕೀತು ಮಾಡಿದ್ದರು. ಕೆಲದಿನಗಳ ಬಳಿಕ, 'ಕೋವಿಡ್ ರೋಗಿಗಳಿಗೆ ಹಾಸಿಗೆ ಸಿಗುತ್ತಿಲ್ಲ' ಎಂದು ಆರೋಪಿಸಿ ಶಾಸಕರ ನೇತೃತ್ವದಲ್ಲಿ ಬೆಂಬಲಿಗರು ವಾರ್ ರೂಂ ಬಳಿ ಪ್ರತಿಭಟನೆ ನಡೆಸಿದ್ದರು. ಆರೋಗ್ಯ ವೈದ್ಯಾಧಿಕಾರಿಯನ್ನು ಎಳೆದಾಡಿ ಹಲ್ಲೆಗೂ ಮುಂದಾಗಿದ್ದರು. ಅಧಿಕಾರಿಗೆ ಪೊಲೀಸರು ರಕ್ಷಣೆ ಒದಗಿಸಿದ್ದರು.

ಬಿಬಿಎಂಪಿ ದಕ್ಷಿಣ ವಲಯದ ವಾರ್ ರೂಂಗೆ ಮಂಗಳವಾರ ಭೇಟಿ ನೀಡಿದ್ದ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ಎಲ್.ಎ.ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್ ಅವರ ತಂಡವು ಹಾಸಿಗೆ ಮಾರಾಟ ದಂಧೆ ಬಗ್ಗೆ ಆರೋಪ ಮಾಡಿತ್ತು. 'ಶಾಸಕ, ಸಂಸದ ಹೇಳಿದರೆಂದು ಹಾಸಿಗೆ ಹಂಚಿಕೆ ಮಾಡಬಾರದು. ಸಹಾಯವಾಣಿಗೆ (1912) ಕರೆ ಮಾಡಿದವರಿಗೆ ಮಾತ್ರ ಹಾಸಿಗೆ ಸಿಗಬೇಕು' ಎಂದು ತೇಜಸ್ವಿ ಸೂರ್ಯ ಹೇಳಿದ್ದರು. ಇನ್ನೊಂದೆಡೆ, ಸಂಸದರ ಪಕ್ಕದಲ್ಲೇ ಇದ್ದ ಶಾಸಕ ಸತೀಶ್ ರೆಡ್ಡಿ, 'ಶಾಸಕನಾಗಿ ನಾನು ಶಿಫಾರಸು ಮಾಡಿದವರಿಗೂ ಹಾಸಿಗೆ ಸಿಗುತ್ತಿಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದರು.

ಇನ್ನಷ್ಟು ಸುದ್ದಿಗಳು 3

ಬಂಧುಗಳಿಗಾಗಿ ಹಾಸಿಗೆ ಬ್ಲಾಕ್ ಮಾಡಿದ್ದೇನೆಯೇ: ಸತೀಶ್ ರೆಡ್ಡಿ

'ನಾನೇನು ನನ್ನ ಬಂಧುಗಳಿಗಾಗಿ ಹಾಸಿಗೆ ಬ್ಲಾಕ್ ಮಾಡಿಸಿದ್ದೇನೆಯೇ. ಹಾಸಿಗೆ ಹಂಚಿಕೆಯ ಕೇಂದ್ರೀಕೃತ ವ್ಯವಸ್ಥೆಯ ತಂತ್ರಾಂಶಕ್ಕೆ ಲಾಗಿನ್ ಆಗುವುದು ಶಾಸಕರೋ ಅಥವಾ ಅಧಿಕಾರಿಗಳೋ. ಸಹಾಯವಾಣಿಗೆ ಸೋಂಕಿತರ ಕಡೆಯವರು ಕರೆ ಮಾಡಿದ ತಕ್ಷಣ ಹಾಸಿಗೆ ಒದಗಿಸುವುದು ವಾರ್ ರೂಂನ ಹೊಣೆ ಹೊತ್ತ ಐಎಎಸ್ ಅಧಿಕಾರಿ ಹಾಗೂ ಸಿಬ್ಬಂದಿಯ ಕರ್ತವ್ಯ. ಶಾಸಕನಾಗಿ ನಾನು ಅಧಿಕಾರಿಗೆ ಕರೆ ಮಾಡಿ ಇಂತಹ ರೋಗಿಗೆ ಹಾಸಿಗೆ ಒದಗಿಸಿ ಎಂದು ಕೇಳಬಹುದು ಅಷ್ಟೇ' ಎಂದು ಶಾಸಕ ಸತೀಶ್ ರೆಡ್ಡಿ ತಿಳಿಸಿದರು. 'ಸರ್ಕಾರಿ ಕೋಟಾದ ಹಾಸಿಗೆಗಳನ್ನು ಅಕ್ರಮವಾಗಿ ಹಂಚಿಕೆ ಮಾಡುವ ದಂಧೆಯಿಂದ ಗಮನವನ್ನು ಬೇರೆಡೆ ಸೆಳೆಯಲು ನನ್ನ ವಿರುದ್ಧ ಆರೋಪ ಮಾಡಲಾಗಿದೆ. ನಾನು ಹಾಸಿಗೆ ಬ್ಲಾಕ್ ಮಾಡಿದ ಬಗ್ಗೆ ದಾಖಲೆಗಳಿದ್ದರೆ, ಸಾಬೀತುಪಡಿಸಲಿ' ಎಂದೂ ಹೇಳಿದರು.

ಸತೀಶ್ ಪಿ.ಎ ವಿರುದ್ಧ ಆರೋಪ

ಬೆಂಗಳೂರು: ಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ಸತೀಶ್ ರೆಡ್ಡಿ ಅವರ ಆಪ್ತ ಸಹಾಯಕರೇ ಹಾಸಿಗೆ ಬ್ಲಾಕ್ ಮಾಡಿಸಿದ ಆರೋಪಕ್ಕೆ ಗುರಿಯಾಗಿದ್ದಾರೆ.

ಹಾಸಿಗೆ ಬ್ಲಾಕಿಂಗ್ ಪ್ರಕರಣದಲ್ಲಿ ಬೇಗೂರು ನಿವಾಸಿ ನೇತ್ರಾವತಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗ್ರಾಮೀಣ ಸೇವೆ ವೈದ್ಯರ ವೇತನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡ್ಡಾಯ ಗ್ರಾಮೀಣ ಸೇವೆಗೆ ನಿಯೋಜನೆಯಾಗಿರುವ ಎಂಬಿಬಿಎಸ್ ವೈದ್ಯರು, ಸ್ನಾತಕೋತ್ತರ ಪದವೀಧರರು, ಡಿಪ್ಲೊಮಾ ಪದವಿ ಹೊಂದಿರುವ ವೈದ್ಯರ ವೇತನ ಹೆಚ್ಚಿಸಿ ಆರೋಗ್ಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಎಂಬಿಬಿಎಸ್ ವೈದ್ಯರಿಗೆ 2021ರ ಮಾರ್ಚ್ 31ರವರೆಗಿನ ಅವಧಿಗೆ ಮಾಸಿಕ ₹ 62,666 ವೇತನ ನಿಗದಿಪಡಿಸಲಾಗಿದೆ. ಸ್ನಾತಕೋತ್ತರ ವೈದ್ಯಕೀಯ ಪದವೀಧರರು ಮತ್ತು ಡಿಪ್ಲೊಮಾ ಹೊಂದಿರುವವರಿಗೆ 2021ರ ಮಾರ್ಚ್ 31ರವರೆಗೆ ತಿಂಗಳಿಗೆ ₹ 67,615 ಮತ್ತು ಏಪ್ರಿಲ್ 1ರಿಂದ ತಿಂಗಳಿಗೆ ₹ 70,000 ವೇತನ ನಿಗದಿಪಡಿಸಲಾಗಿದೆ.

ಈ ಹಿಂದೆ ಕಡ್ಡಾಯ ಗ್ರಾಮೀಣ ಸೇವೆಯ ಎಂಬಿಬಿಎಸ್ ವೈದ್ಯರಿಗೆ ಆರೋಗ್ಯ ಇಲಾಖೆಯ ಸಾಮಾನ್ಯ ಕರ್ತವ್ಯದ ವೈದ್ಯರಿಗಿಂತಲೂ ಕಡಿಮೆ ವೇತನವಿತ್ತು. ಸ್ನಾತಕೋತ್ತರ ವೈದ್ಯಕೀಯ ಪದವೀಧರರು ಮತ್ತು ಡಿಪ್ಲೊಮಾ ಹೊಂದಿರುವವರಿಗೆ ತಿಂಗಳಿಗೆ ₹45,000, ಸೂಪರ್ ಸ್ಪೆಷಾಲಿಟಿ ವೈದ್ಯರಿಗೆ ತಿಂಗಳಿಗೆ ₹ 55,000 ವೇತನ ನೀಡಲಾಗುತ್ತಿತ್ತು.

ಮುಖ್ಯಮಂತ್ರಿ ಮನೆ ಮತ್ತು ವಿಧಾನಸೌಧದ ಮುಂದೆ ಸೋಂಕಿತರ ಕುಟುಂಬ

ವೈಫಲ್ಯಕ್ಕೆ ಕನ್ನಡಿ: ಮನಕಲಕುವ ಘಟನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಮತ್ತು ಆಮ್ಲಜನಕ ಸಿಗದೇ ಪರಿಸ್ಥಿತಿ ಬಿಗಡಾಯಿಸಿರುವ ಹೊತ್ತಿನಲ್ಲಿ ರೋಗಿಗಳ ಕುಟುಂಬದ ಆಕ್ರೋಶದ ಬಿಸಿ ನೇರವಾಗಿ ಮುಖ್ಯಮಂತ್ರಿ ಮತ್ತು ಆಡಳಿತದ 'ಶಕ್ತಿ ಕೇಂದ್ರ' ವಿಧಾನಸೌಧಕ್ಕೆ ತಟ್ಟುವ ಎರಡು ಘಟನೆಗಳು ಗುರುವಾರ ನಡೆದವು.

'ಬೆಂಗಳೂರಿನಲ್ಲಿ ಹಾಸಿಗೆ ಬ್ಲಾಕ್ ದಂಧೆ ಬಯಲಿಗೆಳೆದಿದ್ದೇವೆ' ಎಂದು ಬಿಜೆಪಿಯ ಸಂಸದರು, ಶಾಸಕರೇ ಬೀಗುತ್ತಿದ್ದರೂ ಬಡವರಿಗೆ ಹಾಸಿಗೆ ಸಿಗುತ್ತಿಲ್ಲ ಎಂಬುದಕ್ಕೆ ಇವು ಸಾಕ್ಷಿಯಾದವು. ಸರ್ಕಾರದ ವೈಫಲ್ಯಕ್ಕೆ ಇದು ಕನ್ನಡಿ ಎಂಬ ಟೀಕೆಯೂ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಯಿತು.

ಹಾಸಿಗೆ ಸಿಕ್ಕಿತು– ಪ್ರಾಣ ಹೋಯಿತು: ರಾಮೋಹಳ್ಳಿಯ ಸತೀಶ್ ಅವರು ಎರಡು ದಿನಗಳಿಂದ ಯಾವುದೇ ಆಸ್ಪತ್ರೆಯಲ್ಲಿ ಹಾಸಿಗೆ, ವೆಂಟಿಲೇಟರ್ ಸಿಕ್ಕಿರಲಿಲ್ಲ. ಕಂಗಾಲಾದ ಅವರ ಪತ್ನಿ ಆಂಬುಲೆನ್ಸ್ ಸಮೇತ ಗುರುವಾರ ಬೆಳಿಗ್ಗೆ 8 ಗಂಟೆಗೇ ಮುಖ್ಯಮಂತ್ರಿಯವರ ನಿವಾಸ ಕಾವೇರಿ ಮುಂದೆ ಬಂದು ಧರಣಿ ಕುಳಿತರು. ಆಂಬುಲೆನ್ಸ್‌ನಲ್ಲಿ ಪತಿ ಜೀವನ್ಮರಣ ಹೋರಾಟ ನಡೆಸುತ್ತಿದ್ದರೆ, ಪತ್ನಿ ಕಣ್ಣೀರು ಹಾಕುತ್ತಿದ್ದರು.

ಆರಂಭದಲ್ಲಿ ಪೊಲೀಸರು ಮಹಿಳೆಯನ್ನು ಸಾಗ ಹಾಕಲು ಯತ್ನಿಸಿದರು. ಆದರೆ, ಮಾಧ್ಯಮಗಳ ಮಧ್ಯಪ್ರವೇಶದಿಂದ ಮುಖ್ಯಮಂತ್ರಿ ಕಚೇರಿ ಸಿಬ್ಬಂದಿ ಬಳಿ ಅಳಲು ತೋಡಿಕೊಳ್ಳಲು ಅವಕಾಶ ಕಲ್ಪಿಸುವ ಸ್ಥಿತಿ ಪೊಲೀಸರದ್ದಾಯಿತು. ಮುಖ್ಯಮಂತ್ರಿ ಕಚೇರಿ ಸಿಬ್ಬಂದಿ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಹಾಸಿಗೆ ವ್ಯವಸ್ಥೆ ಮಾಡಿದರು.

ಇವರು 'ಕಾವೇರಿ'ಗೆ ಬರುವ ಮೊದಲು ಬಿಜಿಎಸ್ ಮತ್ತು ರಾಜರಾಜೇಶ್ವರಿ ಆಸ್ಪತ್ರೆಗಳ ಕದವನ್ನು ತಟ್ಟಿ ಬಂದಿದ್ದರು. ಆದರೆ, ಆಸ್ಪತ್ರೆಯಲ್ಲಿ ಹಾಸಿಗೆ ಸಿಕ್ಕಿತು ಎಂಬ ನೆಮ್ಮದಿ ಹೆಚ್ಚು ಉಳಿಯಲಿಲ್ಲ. ಆಸ್ಪತ್ರೆಗೆ ತಲುಪುವ ಮೊದಲೇ ರೋಗಿ ಮೃತಪಟ್ಟಿದ್ದರು.

ವಿಧಾನಸೌಧದ ಮುಂದೆಯೇ ಆಂಬುಲೆನ್ಸ್ ನಿಲ್ಲಿಸಿ ಪ್ರತಿಭಟನೆ: ಹೊಸಕೋಟೆಯ ಮಹಿಳೆಯೊಬ್ಬರಿಗೆ ಬೆಂಗಳೂರಿನಲ್ಲಿ ಹಾಸಿಗೆ ಸಿಗದೇ, ಅವರ ಕುಟುಂಬದವರು ಮಹಿಳೆ ಇದ್ದ ಆಂಬುಲೆನ್ಸ್ ಅನ್ನು ವಿಧಾನಸೌಧದ ಎದುರು ನಿಲ್ಲಿಸಿ ಪ್ರತಿಭಟನೆಗೆ ಮುಂದಾದರು.

'ಎರಡು ದಿನ ಅಲೆದಾಡಿದರೂ ಹಾಸಿಗೆ ಸಿಗಲಿಲ್ಲ. ಇಲ್ಲಿಗೆ ತಂದಿದ್ದೇವೆ. ಹಾಸಿಗೆ ಕೊಡಿಸುವ ಜವಾಬ್ದಾರಿ ಸರ್ಕಾರದ್ದು' ಎಂದು ಸೋಂಕಿತ ಮಹಿಳೆಯ ಸಂಬಂಧಿಕರು ಸುದ್ದಿಗಾರರಿಗೆ ಹೇಳಿದರು. 'ಇಲ್ಲಿ ನಿಲ್ಲಿಸಿದರೆ ಪ್ರಯೋಜನ ಇಲ್ಲ, ತಕ್ಷಣ ಆಸ್ಪತ್ರೆಗೆ ಒಯ್ಯಿರಿ, ಅಲ್ಲಿ ಆಮ್ಲಜನಕ ನೀಡುತ್ತಾರೆ. ಇಲ್ಲಿ ನಿಲ್ಲಿಸಿಕೊಂಡರೆ ಪ್ರಾಣಕ್ಕೆ ಅಪಾಯವಾಗಬಹುದು' ಎಂದು ಪೊಲೀಸರು ತಿಳಿಹೇಳಿದರು. ಆದರೆ ಕುಟುಂಬದವರು ಅಲ್ಲಿಂದ ಕದಲಲಿಲ್ಲ.

2ನೇ ಪುಟ ನೋಡಿ

ಸಿ.ಎಂ ಮನೆ ಮುಂದಿನ ರಸ್ತೆ ಬಂದ್

ಕೋವಿಡ್ ರೋಗಿಗಳನ್ನು ಆಂಬುಲೆನ್ಸ್ ಮೂಲಕ ಮುಖ್ಯಮಂತ್ರಿ ನಿವಾಸ 'ಕಾವೇರಿ' ಮತ್ತು ಗೃಹ ಕಚೇರಿ 'ಕೃಷ್ಣಾ'ದ ಮುಂದೆ ತಂದು ನಿಲ್ಲಿಸಿ ಧರಣಿ ಮತ್ತು ಪ್ರತಿಭಟನೆ ನಡೆಸುವ ಪ್ರಕರಣಗಳು ಹೆಚ್ಚಬಹುದು ಎಂಬ ಕಾರಣಕ್ಕೆ ಎರಡೂ ಕಡೆ ರಸ್ತೆಗಳನ್ನು ಬಂದ್ ಮಾಡಲಾಗಿದೆ. ಇನ್ನು ಮುಂದೆ ಈ ರಸ್ತೆಗಳಲ್ಲಿ ವಾಹನಗಳು ಮತ್ತು ಸಾರ್ವಜನಿಕರ ಓಡಾಟಕ್ಕೆ ಅವಕಾಶವಿಲ್ಲ. ಬ್ಯಾರಿಕೇಡ್‌ಗಳನ್ನೂ ಅಳವಡಿಸಲಾಗಿದೆ.

ಕೋವಿಡ್ ಚಿಕಿತ್ಸಾ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೋಟಾದಡಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವ ಕೋವಿಡ್ ರೋಗಿಗಳ ಚಿಕಿತ್ಸಾ ದರದಲ್ಲಿ ಹೆಚ್ಚಳ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಜನರಲ್ ವಾರ್ಡ್‌ನ ಪ್ರತಿದಿನದ ಚಿಕಿತ್ಸಾ ವೆಚ್ಚ ಈ ಹಿಂದೆ ₹ 5,200 ಇದ್ದು, ಅದನ್ನೇ ಮುಂದುವರಿಸಲಾಗಿದೆ. ಎಚ್‌ಡಿಯು ವಾರ್ಡ್‌ನ ಪ್ರತಿ ದಿನದ ದರವನ್ನು ₹ 7,000ದಿಂದ ₹ 8,000ಕ್ಕೆ ಹೆಚ್ಚಿಸಲಾಗಿದೆ.

ವೆಂಟಿಲೇಟರ್ ರಹಿತ ತೀವ್ರ ನಿಗಾ ಘಟಕದ ವೆಚ್ಚವನ್ನು ₹ 8,500ದಿಂದ ₹ 9000ಕ್ಕೆ ಮತ್ತು ವೆಂಟಿಲೇಟರ್ ಸಹಿತ ತೀವ್ರ ನಿಗಾ ಘಟಕದ ಚಿಕಿತ್ಸಾ ವೆಚ್ಚವನ್ನು ₹ 10,000ದಿಂದ ₹ 11,500ಕ್ಕೆ ಏರಿಕೆ ಮಾಡಲಾಗಿದೆ.

'ಪರಿಷ್ಕೃತ ದರವು ಪಿಪಿಇ ಕಿಟ್ ಹಾಗೂ ಪರಿಕರಗಳನ್ನು ಒಳಗೊಂಡಿರುತ್ತದೆ. ಸಾರ್ವಜನಿಕ ಆರೋಗ್ಯ ಪ್ರಾಧಿಕಾರದಿಂದ ಶಿಫಾರಸುಗೊಂಡಿರುವ ಕೋವಿಡ್ ರೋಗಿಗಳ ಚಿಕಿತ್ಸೆಗೆ ಈ ದರವನ್ನೇ ವಿಧಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಸ್ಫೋಟ: ಮಾಲ್ಡೀವ್ಸ್ ಸ್ಪೀಕರ್ ನಶೀದ್‌ಗೆ ಗಾಯ

ಮಾಲೆ, ಮಾಲ್ಡೀವ್ಸ್ (ಎಪಿ): ರಾಜಧಾನಿ ಮಾಲೆಯಲ್ಲಿರುವ ತಮ್ಮ ನಿವಾಸ ಬಳಿ ಗುರುವಾರ ಸಂಭವಿಸಿದ ಸ್ಫೋಟದಲ್ಲಿ ಮಾಲ್ಡೀವ್ಸ್‌ನ ಸ್ಪೀಕರ್ ಮೊಹಮದ್ ನಶೀದ್ ಅವರು ಗಾಯಗೊಂಡಿದ್ದಾರೆ.

ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಫೋಟ ಸಂಭವಿಸಿದ ಸ್ಥಳದಲ್ಲಿದ್ದ ಬೈಕ್‌ವೊಂದು ಛಿದ್ರವಾಗಿದ್ದು, ಈ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

'ಇದು ಅವರನ್ನು ಹತ್ಯೆ ಮಾಡುವ ಪ್ರಯತ್ನವೇ ಎಂಬುದನ್ನು ಸ್ಪಷ್ಟವಿಲ್ಲ. ಘಟನೆ ಕುರಿತು ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಶೀದ್ ಅವರು 2008ರಿಂದ 2012ರ ವರೆಗೆ ಮಾಲ್ಡೀವ್ಸ್ ಅಧ್ಯಕ್ಷರಾಗಿದ್ದರು.

ಲಸಿಕೆಯ ಎರಡನೇ ಡೋಸ್ ಪಡೆಯಲು ಹರಸಾಹಸ

ಊರೂರು ಅಲೆದರೂ ಸಿಗುತ್ತಿಲ್ಲ ಕೋವ್ಯಾಕ್ಸಿನ್

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೋವ್ಯಾಕ್ಸಿನ್ ಲಸಿಕೆ ನಿರೀಕ್ಷಿತ ಪ್ರಮಾಣದಲ್ಲಿ ಪೂರೈಕೆ ಆಗದಿರುವುದು ಸಮಸ್ಯೆ ಸೃಷ್ಟಿಸಿದೆ. ಈಗಾಗಲೇ ಕೋವ್ಯಾಕ್ಸಿನ್ ಲಸಿಕೆ ಪಡೆದವರು ಎರಡನೇ ಡೋಸ್ ಪಡೆಯಲು ಹರಸಾಹಸಪಡುತ್ತಿದ್ದಾರೆ. ಎಲ್ಲಿ ಲಸಿಕೆ ಸಿಗುತ್ತದೆ ಎಂಬುದನ್ನು ಹುಡುಕುತ್ತಾ ಊರೂರು ಅಲೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

'ನಾನು ವಿಜಯನಗರದ ಮಾರುತಿ ಆಸ್ಪತ್ರೆಯಲ್ಲಿ ಕೋವ್ಯಾಕ್ಸಿನ್ ಲಸಿಕೆ ಪಡೆದಿದ್ದೆ. ಇದರ ಎರಡನೇ ಡೋಸ್ ಅನ್ನು 28ರಿಂದ 45 ದಿನಗಳ ಒಳಗೆ ಪಡೆಯಬೇಕಿದೆ. ಆರೆ ಎಲ್ಲೂ ಈ ಲಸಿಕೆ ಸಿಗುತ್ತಿಲ್ಲ. ಈಗಾಗಲೇ 38 ದಿನಗಳು ಕಳೆದಿವೆ' ಎಂದು ವಿಜಯನಿಗರ ನಿವಾಸಿ ಶಿವಯೋಗಿ 'ಪ್ರಜಾವಾಣಿ' ಜೊತೆ ಅಳಲು ತೋಡಿಕೊಂಡರು.

'ಮಣಿಪಾಲ ಆಸ್ಪತ್ರೆ, ಅಪೋಲೊ ಆಸ್ಪತ್ರೆಗಳು ಲಸಿಕೆ ನೀಡಲಾಗುತ್ತಿದೆ ಎನ್ನುತ್ತಿದ್ದಾರೆ. ಆದರೆ, ಅಲ್ಲಿ ಕೋವ್ಯಾಕ್ಸಿನ್ ಎರಡನೇ ಡೋಸ್ ಪಡೆಯಬೇಕಿದ್ದರೆ ಕೋವಿನ್ ಪೋರ್ಟಲ್ ನೋಂದಾಯಿಸಬೇಕು ಎಂದರು. ಈಗ 45 ವರ್ಷ ಮೇಲಿನವರಿಗೆ ನೀಡುವುದಿಲ್ಲ ಎನ್ನುತ್ತಿದ್ದಾರೆ. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೇರವಾಗಿ ಎರಡನೇ ಲಸಿಕೆ ಪಡೆಯಬಹುದು. ಆದರೆ, ನಾಲ್ಕೈದು ಪಿಎಚ್‌ಸಿಗಳಿಗೆ ಹೋದರೂ ಕೋವ್ಯಾಕ್ಸಿನ್ ಲಸಿಕೆ ಸಿಗಲಿಲ್ಲ' ಎಂದರು.

'ಆನೇಕಲ್‌ನ ಆಸ್ಪತ್ರೆಯೊಂದರಲ್ಲಿ ಲಸಿಕೆ ಲಭ್ಯವಿದೆ ಎಂಬ ಮಾಹಿತಿ ಸಿಕ್ಕಿತು. ಅಲ್ಲಿ ನೋಂದಣಿ ಮಾಡಿಸಿಕೊಂಡೆ. ಮೊನ್ನೆ 44 ಕಿ.ಮೀ ದೂರ ಪ್ರಯಾಣಿಸಿ ಅಲ್ಲಿ ತಲುಪಿದೆ. ಅಷ್ಟರಲ್ಲಿ ಅಲ್ಲಿ ದಾಸ್ತಾನು ಮುಗಿದಿತ್ತು. ಬಂದ ದಾರಿಗೆ ಸುಂಕವಿಲ್ಲ ಎಂದು ಬರಿಗೈಯಲ್ಲಿ ಮರಳಬೇಕಾಯಿತು' ಎಂದು ತಮ್ಮ ಅನುಭವ ಹೇಳಿಕೊಂಡರು.

'ಕೋವ್ಯಾಕ್ಸಿನ್ ಲಸಿಕೆಯ ಎರಡನೇ ಡೋಸ್ ಅನ್ನು 45 ದಿನಗಳ ಒಳಗೆ ಪಡೆಯದಿದ್ದರೆ ಮೊದಲ ಡೋಸ್ ಪಡೆದೂ ಪ್ರಯೋಜನವಾಗುವುದಿಲ್ಲ ಎನ್ನುತ್ತಾರೆ. ಇನ್ನು ವಾರದೊಳಗೆ ಲಸಿಕೆ ಪಡೆಯಬೇಕು. ಏನು ಮಾಡಬೇಕೆಂದೇ ತೋಚುತ್ತಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.

ಪಿಎಚ್‌ಸಿಗಳಲ್ಲಿ ಸರದಿ ಸಾಲು: ಕೋವಿಡ್ ಲಸಿಕೆ ಪಡೆಯಲು ಪಿಎಚ್‌ಸಿಗಳ ಬಳಿ ಜನ ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಬೇಡಿಕೆ ಇರುವಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆ ಆಗುತ್ತಿಲ್ಲ. ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡುತ್ತಿರುವ ಲಸಿಕಾ ಕೇಂದ್ರಗಳ ಸಿಬ್ಬಂದಿ ದಾಸ್ತಾನು ಮುಗಿದ ಬಳಿಕ ಉಳಿದವರನ್ನು ವಾಪಸ್ ಕಳುಹಿಸುತ್ತಿದ್ದಾರೆ. ಕೆಲವು ಲಸಿಕಾ ಕೇಂದ್ರಗಳಲ್ಲಿ ಸಿಬ್ಬಂದಿ ದಾಸ್ತಾನು ನೋಡಿಕೊಂಡು ಅಷ್ಟು ಮಂದಿಗೆ ಮಾತ್ರ ಟೋಕನ್ ನೀಡಿ ಉಳಿದವರನ್ನು ಹಿಂದಕ್ಕೆ ಕಳುಹಿಸುತ್ತಿದ್ದಾರೆ.

'ಬಿಬಿಎಂಪಿಯ ಯಾವುದೇ ಪಿಎಚ್‌ಸಿಗಳಲ್ಲೂ ಕೋವ್ಯಾಕ್ಸಿನ್ ಲಸಿಕೆ ನೀಡುತ್ತಿಲ್ಲ. ಸದ್ಯಕ್ಕೆ 45 ವರ್ಷ ಮೀರಿದವರಿಗೆ ಮಾತ್ರ ಕೋವಿಶೀಲ್ಡ್ ಲಸಿಕೆ ನೀಡುತ್ತಿದ್ದೇವೆ. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಗೆ ಬೇಡಿಕೆ ತೀವ್ರ ಹೆಚ್ಚಳ ಕಂಡಿದೆ. ಈ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಕಷ್ಟು ಲಸಿಕೆ ಪೂರೈಕೆಯೂ ಆಗುತ್ತಿಲ್ಲ. ಹಾಗಾಗಿ ಲಸಿಕೆ ಹಾಕಿಸಿಕೊಳ್ಳಲು ಬರುವವರನ್ನು ವಾಪಸ್ ಕಳುಹಿಸಬೇಕಾದ ಸ್ಥಿತಿ ಇದೆ' ಎಂದು ಪ್ರಾಥಮಿಕ ಆರೋಗ್ಯ ಕೇಂದ್ರವೊಂದರ ವೈದ್ಯಾಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.



ಕೋವಿಡ್ ಲಸಿಕೆ ಪಡೆಯಲು ಪ್ಯಾಲೇಸ್ ಗುಟ್ಟಹಳ್ಳಿಯ ಅಂಗನವಾಡಿ ಕೇಂದ್ರದ ಬಳಿ ಗುರುವಾರ ಕಾದು ನಿಂತ ಜನರು – ಪ್ರಜಾವಾಣಿ ಚಿತ್ರ

'ಪಿಎಂಎಸ್‌ಎಸ್‌ವೈ ಆಸ್ಪತ್ರೆಯಲ್ಲಿ ಕೋವ್ಯಾಕ್ಸಿನ್ ಲಭ್ಯ'

ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನಾ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯಲ್ಲಿ 45 ವರ್ಷ ಮೀರಿದವರಿಗೆ ಕೋವ್ಯಾಕ್ಸಿನ್ ಲಸಿಕೆ ಲಭ್ಯ ಇದೆ.

'ನಮ್ಮಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳೆರಡೂ ಲಭ್ಯ ಇವೆ. ಮೊದಲ ಡೋಸ್ ಪಡೆಯಲು ಬರುವ 45 ವರ್ಷ ಮೀರಿದವರಿಗೆ ಕೋವಿಶೀಲ್ಡ್ ಮಾತ್ರ ನೀಡುತ್ತಿದ್ದೇವೆ. ಕೋವ್ಯಾಕ್ಸಿನ್‌ನ ದಾಸ್ತಾನು ತೀರಾ ಕಡಿಮೆ ಇರುವುದರಿಂದ ಅದನ್ನು ಎರಡನೇ ಡೋಸ್ ಪಡೆಯುವ 45 ವರ್ಷ ಮೀರಿದವರಿಗೆ ಮಾತ್ರ ನೀಡುತ್ತಿದ್ದೇವೆ' ಎಂದು ಪಿಎಂಎಸ್‌ಎಸ್‌ವೈ ಆಸ್ಪತ್ರೆಯ ಲಸಿಕೆ ವಿಭಾಗದ ಮುಖ್ಯಸ್ಥ ಡಾ.ರಂಗನಾಥ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಪ್ರಜಾವಾಣಿ ವಿಶೇಷ

> ಸರ್ಕಾರದಿಂದ ಕೋವ್ಯಾಕ್ಸಿನ್ ಲಸಿಕೆ ಪೂರೈಕೆ ಆದ ತಕ್ಷಣವೇ ಬಿಬಿಎಂಪಿಯ ಎಲ್ಲ ವಾರ್ಡ್‌ಗಳಿಗೆ ಸಮಾನವಾಗಿ ಹಂಚಿಕೆ ಮಾಡಲಿದ್ದೇವೆ
>
> **ಗೌರವ್ ಗುಪ್ತ**, ಮುಖ್ಯ ಆಯುಕ್ತ, ಬಿಬಿಎಂಪಿ

ಸುದ್ದಿ 2 ನಿಮಿಷ

ಮಾವು ಬೆಳೆಗಾರರಿಗೆ ಪ್ಯಾಕಿಂಗ್ ಬಾಕ್ಸ್ ಉಚಿತ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘವು ಮಾವಿನ ಹಣ್ಣನ್ನು ವೈಜ್ಞಾನಿಕವಾಗಿ ಕಟಾವು ಮಾಡಿ ಗ್ರಾಹಕರಿಗೆ ನೇರವಾಗಿ ಮಾರುವ ಆಯ್ದ ರೈತರಿಗೆ ಪ್ಯಾಕಿಂಗ್ ಬಾಕ್ಸ್‌ಗಳನ್ನು ಉಚಿತವಾಗಿ ನೀಡಲು ಮುಂದಾಗಿದೆ.

ಮಾವಿನ ಹಣ್ಣನ್ನು ವೈಜ್ಞಾನಿಕವಾಗಿ ಕಟಾವು ಮಾಡುವ ವಿಧಾನ, ಹಣ್ಣು ಮಾಗಿಸುವಿಕೆ, ದರ್ಜೆಗೆ ಅನುಸಾರವಾಗಿ ಹಣ್ಣು ವಿಂಗಡಿಸುವುದು, ಹಣ್ಣನ್ನು ಪ್ಯಾಕ್ ಮಾಡುವ ವಿಧಾನ, ಗ್ರಾಹಕರಿಗೆ ನೇರವಾಗಿ ಮಾರುವ ಕುರಿತು ದೂರವಾಣಿ ಅಥವಾ ವಾಟ್ಸ್‌ಆ್ಯಪ್ ಮೂಲಕ ಮಾಹಿತಿ ನೀಡಲಿದೆ.

ಸರ್ಕಾರ ಅಥವಾ ಬೇರೆ ಯಾವುದೇ ಸಂಸ್ಥೆಗಳಿಂದ ನೆರವು ಪಡೆಯದ ರೈತರು ಅರ್ಜಿ ಸಲ್ಲಿಸಬಹುದು. ಸಹಿ ಮಾಡಿದ ಅರ್ಜಿಯೊಂದಿಗೆ ಜಮೀನಿನ ಪಹಣಿ ಮತ್ತು ಮಾವಿನ ತೋಟದ ಕೆಲವು ಫೋಟೊಗಳನ್ನು ಇದೇ 15ರೊಳಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ವಾಟ್ಸ್‌ಆ್ಯಪ್ ಮಾಡಬಹುದು. alumniuasb83@gmail.com ಗೂ ಕಳುಹಿಸಬಹುದು.

ಪ್ಯಾಕಿಂಗ್ ಬಾಕ್ಸ್‌ಗಳಿಗಾಗಿ ಎಸ್.ಚಂದ್ರಶೇಖರ್ (9880325001), ತಾಂತ್ರಿಕ ಮಾಹಿತಿಗಾಗಿ ಜೆ.ಸರಳಕುಮಾರಿ (9611567094) ಅವರನ್ನು ಸಂಪರ್ಕಿಸಬಹುದು.



ಸರ್ಕಾರಿ ಕಚೇರಿಯ ಶೌಚಾಲಯದಲ್ಲಿ ದಂಪತಿ ಕೊಲೆ

ಬೆಂಗಳೂರು: ಸಾಂಖ್ಯಿಕ ಇಲಾಖೆಯ ಜಿಲ್ಲಾ ಕಚೇರಿಯ ಶೌಚಾಲಯದಲ್ಲಿ ದಂಪತಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹನುಮಂತರಾಯ (41) ಹಾಗೂ ಅವರ ಪತ್ನಿ ಹೊನ್ನಮ್ಮ (34) ಕೊಲೆಯಾದವರು. ಗುರುವಾರ ಬೆಳಿಗ್ಗೆ ಅವರಿಬ್ಬರನ್ನು ಕೊಲೆ ಮಾಡಲಾಗಿದ್ದು, ಶೌಚಾಲಯದಲ್ಲಿ ಮೃತದೇಹಗಳು ಇದ್ದವು. ಅವುಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪೀಣ್ಯ ಬಳಿಯ ಕರಿಹೋಬನಹಳ್ಳಿಯಲ್ಲಿ ಸಾಂಖ್ಯಿಕ ಇಲಾಖೆಯ ಜಿಲ್ಲಾ ಕಚೇರಿ ಇದೆ. ಅದೇ ಕಚೇರಿಯಲ್ಲಿ ಹನುಮಂತರಾಯ ಸೆಕ್ಯುರಿಟಿ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಪತ್ನಿ ಹೊನ್ನಮ್ಮ ಸಹ ಅದೇ ಕಚೇರಿಯ ಸ್ವಚ್ಛತೆ ಸಿಬ್ಬಂದಿಯಾಗಿದ್ದರು.'

'ಗುರುವಾರ ಬೆಳಿಗ್ಗೆ ಅವರಿಬ್ಬರು ಕಚೇರಿಗೆ ಬಂದಿದ್ದರು. ಅದೇ ಸಂದರ್ಭದಲ್ಲೇ ದುಷ್ಕರ್ಮಿಗಳು, ಇಬ್ಬರನ್ನೂ ಕೊಂದು ಶೌಚಾಲಯದಲ್ಲಿ ಮೃತದೇಹವಿಟ್ಟು ಪರಾರಿಯಾಗಿರುವ ಅನುಮಾನವಿದೆ' ಎಂದೂ ಪೊಲೀಸರು ತಿಳಿಸಿದರು.

ಮಗನ ಮೇಲೆ ಶಂಕೆ: 'ಮಗನೇ ಕೊಲೆ ಮಾಡಿರುವ ಶಂಕೆ ಇದೆ. ಆತ ಸದ್ಯ ತಲೆಮರೆಸಿಕೊಂಡಿದ್ದಾನೆ. ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ. ಕೊಲೆಗೆ ನಿಖರ ಕಾರಣ ಗೊತ್ತಾಗಿಲ್ಲ' ಎಂದೂ ಅವರು ವಿವರಿಸಿದರು.

ರೆಮ್‌ಡಿಸಿವಿರ್ ಅಕ್ರಮ ಮಾರಾಟ: 10 ಬಂಧನ

ಬೆಂಗಳೂರು: ಕೊರೊನಾ ಸೋಂಕಿತರಿಗೆ ನೀಡುವ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಜಾಲಗಳನ್ನು ನಗರದ ಪೊಲೀಸರು ಭೇದಿಸಿದ್ದಾರೆ.

ಏಜೆಂಟರು, ಖಾಸಗಿ ಆಸ್ಪತ್ರೆ ಸಿಬ್ಬಂದಿ ಜೊತೆ ಸಂಪರ್ಕವಿಟ್ಟುಕೊಂಡು ಚುಚ್ಚುಮದ್ದು ಮಾರಾಟ ಮಾಡುತ್ತಿದ್ದವರ ಮಳಿಗೆ ಹಾಗೂ ಕಚೇರಿಗಳ ಮೇಲೆ ಉತ್ತರ ವಿಭಾಗದ ಪೊಲೀಸರು ಹಾಗೂ ಸಿಸಿಬಿ ಪೊಲೀಸರು ಪ್ರತ್ಯೇಕವಾಗಿ ಬುಧವಾರ ದಾಳಿ ಮಾಡಿದ್ದಾರೆ.

'ದಾಳಿ ವೇಳೆ ರೆಮ್‌ಡಿಸಿವಿರ್ ಚುಚ್ಚುಮದ್ದಿನ 37 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ. ಅಕ್ರಮದಲ್ಲಿ ಭಾಗಿಯಾಗಿದ್ದ 10 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಔಷಧಿ ವಿತರಣಾ ಏಜೆನ್ಸಿ ಪ್ರತಿನಿಧಿಗಳಾದ ಜನಾರ್ದನ್, ದೀಪಕ್, ಯಲಹಂಕ ಆಸ್ಪತ್ರೆಯೊಂದರ ಸ್ವಾಗತಕಾರ ಲೋಕೇಶ್, ಹೆಸರುಘಟ್ಟ ಮುಖ್ಯರಸ್ತೆಯ ವಿಶ್ವೇಶ್ವರ ಲೇಔಟ್‌ನ 'ಎಸ್‌ಎಲ್‌ವಿ ಔಷಧಿ ಮಳಿಗೆ'ಯ ಎಚ್. ಜಾನಿ, ಮಲತ್ತಹಳ್ಳಿಯ ಎಂ. ದಿನೇಶ್ ಹಾಗೂ ನಾಗರಬಾವಿಯ ಶಂಕರ್ ಬಂಧಿತರು. ನಾಲ್ವರ ಹೆಸರು ಗೊತ್ತಾಗಿಲ್ಲ. ಇವರೆಲ್ಲರ ವಿರುದ್ಧ ಸುಬ್ರಮಣ್ಯನಗರ ಹಾಗೂ ಜೆ.ಸಿ.ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ' ಎಂದೂ ತಿಳಿಸಿದರು.



ಪ್ರತಿಭಟನೆ

ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಹಾಸಿಗೆ ದೊರೆಯದ ಕಾರಣ ಕೊರೊನಾ ಸೋಂಕಿತರ ಸಂಬಂಧಿಕರು ವಿಧಾನ ಸೌಧದ ಮುಂಭಾಗ ರೋಗಿಯನ್ನು ಕರೆದುಕೊಂಡು ಬಂದು ಪ್ರತಿಭಟನೆ ನಡೆಸಿದರು

ವೈಫಲ್ಯಕ್ಕೆ ಕನ್ನಡಿ: ಮನಕಲಕುವ ಘಟನೆಗಳು

ಒಂದನೇ ಪುಟದಿಂದ...

ಆ ವೇಳೆಗೆ ಅಲ್ಲಿಗೆ ಬಂದ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಪೊಲೀಸ್ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. 'ಇಲ್ಲಿ ರೋಗಿಯ ಆಂಬುಲೆನ್ಸ್ ನಿಲ್ಲಿಸಿದರೆ ತಪ್ಪೇನು? ನಿಲ್ಲಿಸಬಾರದು ಎಂಬ ಕಾನೂನು ಇದೆಯೇ' ಎಂದು ಪೊಲೀಸ್ ಅಧಿಕಾರಿಯನ್ನು ಪ್ರಶ್ನಿಸಿದರು.

'ಆಕ್ಸಿಜನ್ ಆಂಬುಲೆನ್ಸ್ ಬರುತ್ತಿದೆ, ಅಲ್ಲಿವರೆಗೆ ರೋಗಿ ಇಲ್ಲೇ ಇರಲಿ' ಎಂದು ಕಾರ್ಯಕರ್ತ ವಾದಿಸಿದರು. 'ನೋಡಿ ನಮ್ಮನ್ನು ಇಲ್ಲಿಂದ ಸಾಗಹಾಕಲು ನೋಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ.

ಕೆಲವೇ ನಿಮಿಷಗಳಲ್ಲಿ 'ಕಾಂಗ್ರೆಸ್ ಕೇರ್ಸ್'ನ ಆಕ್ಸಿಜನ್ ಹೊಂದಿದ ಆಂಬುಲೆನ್ಸ್ ಅಲ್ಲಿಗೆ ಬಂದಿತು. ಮಹಿಳೆಯನ್ನು ಸ್ಥಳಾಂತರಿಸಿ ವಿಕ್ಟೋರಿಯಾ ಆಸ್ಪತ್ರೆಗೆ ಒಯ್ಯಲು ಪೊಲೀಸರು ಸೂಚಿಸಿದರು. 'ಅಲ್ಲಿ ಹಾಸಿಗೆ ಸಿಗದೇ ಮಹಿಳೆ ಸತ್ತರೆ ಸರ್ಕಾರವೇ ಹೊಣೆ' ಎಂದು ಕಾರ್ಯಕರ್ತ ಹೇಳಿದರು. ಯುವ ಕಾಂಗ್ರೆಸ್ ನಾಯಕ ಮೊಹಮ್ಮದ್ ನಳಪಾಡ್ ಭೇಟಿ ಪೊಲೀಸರ ಜತೆ ವಾಗ್ವಾದ ನಡೆಸಿದರು.

ಸಾಲುಮರದ ತಿಮ್ಮಕ್ಕಗೂ ಸಿಗಲಿಲ್ಲ ಹಾಸಿಗೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶತಾಯುಷಿ ಸಾಲುಮರದ ತಿಮ್ಮಕ್ಕ ಅವರು, ಆಸ್ಪತ್ರೆಯಲ್ಲಿ ಹಾಸಿಗೆ ಸಿಗದ ಕಾರಣ ಹಾಸನದ ಬೇಲೂರಿನಲ್ಲಿರುವ ಸಾಕುಮಗನ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'15 ದಿನಗಳ ಹಿಂದೆ ಅಜ್ಜಿ ಬಚ್ಚಲು ಮನೆಯಲ್ಲಿ ಆಯ ತಪ್ಪಿ ಬಿದ್ದಿದ್ದರು. ಹೀಗಾಗಿ ಹಾಸನದ ಮಣಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬೆಂಗಳೂರಿನ ಅಪೊಲೊ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಕೋವಿಡೇತರ ರೋಗಿಗಳಿಗೆ ಹಾಸಿಗೆ ಲಭ್ಯವಾಗಲಿಲ್ಲ. ಸುಮಾರು ಸಮಯದ ನಂತರ ವೈದ್ಯರು ಚಿಕಿತ್ಸೆ ನೀಡಿದರು. ಎಕ್ಸ್‌ರೇ ಕೂಡ ತೆಗೆಸಲಾಯಿತು. ಯಾವುದೇ ಗಂಭೀರ ಸಮಸ್ಯೆ ಇಲ್ಲ ಎಂದು ಹೇಳಿದ ವೈದ್ಯರು, ಹಾಸಿಗೆ ಅಭಾವವಿರುವುದರಿಂದ ಊರಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮುಂದುವರಿಸುವಂತೆ ಸೂಚಿಸಿದರು. ಹೀಗಾಗಿ ಮನೆಯಲ್ಲೇ ಆರೈಕೆ ಮಾಡುತ್ತಿದ್ದೇವೆ. ಆರೋಗ್ಯದಲ್ಲಿ ಅಲ್ಪ ಚೇತರಿಕೆ ಕಂಡುಬಂದಿದೆ. ಎದ್ದು ಕೂರಲು ಕಷ್ಟಪಡುತ್ತಿದ್ದಾರೆ' ಎಂದು ಅವರ ಸಾಕುಮಗ ಉಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಡಾ.ರಜನಿ ಭಟ್ ದಿನದಲ್ಲಿ ಒಮ್ಮೆ ದೂರವಾಣಿ ಕರೆ ಮಾಡಿ ಆರೋಗ್ಯದ ಕುರಿತು ಮಾಹಿತಿ ಪಡೆಯುತ್ತಿದ್ದಾರೆ. ಅವರು ಸೂಚಿಸಿದ ಔಷಧಗಳನ್ನು ತಂದು ನೀಡುತ್ತಿದ್ದೇವೆ. ಅಜ್ಜಿಗೆ ಹುಷಾರಿಲ್ಲದ ವಿಚಾರವನ್ನು ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದೆ. ಅದನ್ನು ನೋಡಿ ಮುಖ್ಯಮಂತ್ರಿ ಯಡಿಯೂರಪ್ಪನವರು ದೂರವಾಣಿ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದರು. ಚಿಕಿತ್ಸೆಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆ ಮಾಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸುವುದಾಗಿ ಹೇಳಿದ್ದರು. ಶಾಸಕ ಜಿ.ಪರಮೇಶ್ವರ ಕೂಡ ನಿರಂತರ ಸಂಪರ್ಕದಲ್ಲಿದ್ದಾರೆ. ಆರೈಕೆಗಾಗಿ ಇಬ್ಬರು ಶುಶ್ರೂಷಕಿಯರನ್ನು ಕಳುಹಿಸುವ ವ್ಯವಸ್ಥೆ ಮಾಡುವುದಾಗಿ ಜಿಲ್ಲಾಧಿಕಾರಿಗಳೇ ಹೇಳಿದ್ದಾರೆ. ಗುರುವಾರ ಅವರು ಬಂದಿದ್ದರು. ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬಳಿಕ ಬನ್ನಿ ಎಂದು ನಾವೇ ಹೇಳಿ ಕಳಿಸಿದ್ದೇವೆ. ಮನೆಯಲ್ಲಿ ಸದ್ಯ ನಾಲ್ಕು ಮಂದಿ ಇದ್ದೇವೆ. ನಾವೆಲ್ಲಾ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದೇವೆ' ಎಂದು ಹೇಳಿದರು.

'ಅಜ್ಜಿಗೆ ಕನಿಷ್ಠ ಒಂದು ವಾರವಾದರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರೆ ಉತ್ತಮ. ಕೋವಿಡೇತರ ಆಸ್ಪತ್ರೆಯಲ್ಲಿ ಹಾಸಿಗೆ ಲಭ್ಯವಾದರೆ ದಾಖಲು ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲೇ ಆರೈಕೆ ಮುಂದುವರಿಸುತ್ತೇವೆ' ಎಂದು ತಿಳಿಸಿದರು.

ಬೆಂಗಳೂರಿನಲ್ಲಿರುವ ಬಾಡಿಗೆ ಮನೆಯನ್ನು ಖಾಲಿ ಮಾಡುವಂತೆ ಮಾಲೀಕರು ಬರೆದಿರುವ ಪತ್ರದ ಬಗ್ಗೆ ಪ್ರತಿಕ್ರಿಯಿಸಿದ ಅವರು 'ಮನೆ ಮಾಳಿಗೆ ಸೋರುತ್ತಿದೆ. ಅದರ ರಿಪೇರಿ ಮಾಡಬೇಕಿದೆ. ಹೀಗಾಗಿ ಮನೆ ಖಾಲಿ ಮಾಡುವಂತೆ ಸೂಚಿಸಿದ್ದಾರೆ. ಕೋವಿಡ್ ಪರಿಸ್ಥಿತಿಯಲ್ಲಿ ಮನೆಯಲ್ಲಿರುವ ವಸ್ತುಗಳನ್ನು ಸ್ಥಳಾಂತರಿಸುವುದು ಕಷ್ಟ ಎಂದು ಅವರಿಗೆ ತಿಳಿಸಿದ್ದೇನೆ' ಎಂದು ಹೇಳಿದರು.

ಜೀವನ ಭದ್ರತೆ ಒದಗಿಸುವಂತೆ ಒತ್ತಾಯಿಸಿ ಪ್ರತಿಭಟನೆ

ಕೋವಿಡ್: ಪೌರಕಾರ್ಮಿಕ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ವಾರ್ಡ್‌ನ ಪೌರ ಕಾರ್ಮಿಕ ಮಹಿಳೆ ಸುಶೀಲಮ್ಮ (52) ಅವರು ಕೋವಿಡ್‌ನಿಂದಾಗಿ ಬುಧವಾರ ರಾತ್ರಿ ಕೊನೆಯುಸಿರೆಳೆದಿದ್ದಾರೆ. ಇದರ ಬೆನ್ನಲ್ಲೇ, ತಮಗೆ ಕೋವಿಡ್‌ನಿಂದ ರಕ್ಷಣೆ ಒದಗಿಸಲು ಹಾಗೂ ಜೀವನ ಭದ್ರತೆಗಾಗಿ ಬಿಬಿಎಂಪಿ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಪೌರಕಾರ್ಮಿಕರು ಬಾಣಸವಾಡಿ ಮುಖ್ಯ ರಸ್ತೆಯಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಕೋವಿಡ್‌ನಿಂದ ರಕ್ಷಿಸಿಕೊಳ್ಳಲು ಮಾಸ್ಕ್, ಮುಖ ರಕ್ಷಾ ಕವಚ, ಕೈಗವಸು, ಸೋಂಕು ನಿವಾರಕ ದ್ರಾವಣ ಮುಂತಾದ ಸುರಕ್ಷತಾ ಸಾಧನಗಳನ್ನು ನೀಡಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಐದಕ್ಕೂ ಅಧಿಕ ಪೌರಕಾರ್ಮಿಕರು ಕೋವಿಡ್‌ಗೆ ಬಲಿಯಾಗಿದ್ದಾರೆ. ಬಿಬಿಎಂಪಿಯು ಕೋವಿಡ್‌ನಿಂದ ರಕ್ಷಣೆ ಒದಗಿಸುವ ಸುರಕ್ಷತಾ ಪರಿಕರಗಳನ್ನು ಒದಗಿಸುವ ಭರವಸೆ ನೀಡಿದೆ. ಆದರೆ, ಇನ್ನೂ ಎಲ್ಲ ಪೌರಕಾರ್ಮಿಕರಿಗೆ ತಲುಪಿಲ್ಲ. ಪೌರಕಾರ್ಮಿಕರು ಹಿಂದಿಗಿಂತಲೂ ಹೆಚ್ಚು ಅಪಾಯ ಎದುರಿಸುತ್ತಿದ್ದಾರೆ' ಎಂದು ಬಿಬಿಎಂಪಿ ಪೌರಕಾರ್ಮಿಕರ ಸಂಘದ ಅಧ್ಯಕ್ಷೆ ನಿರ್ಮಲಾ ಕಳವಳ ವ್ಯಕ್ತಪಡಿಸಿದರು.

ಪೌರಕಾರ್ಮಿಕರ ಪ್ರಮುಖ ಬೇಡಿಕೆಗಳು

- ಆರೋಗ್ಯ ಕಾರ್ಯಕರ್ತರಂತೆ ಪೌರಕಾರ್ಮಿಕರನ್ನೂ ಆಗಾಗ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು
- ಕೋವಿಡ್ ಕರ್ತವ್ಯ ನಿರ್ವಹಿಸುವ ಇತರ ಸರ್ಕಾರಿ ನೌಕರರಿಗೆ ನೀಡುವಂತೆ ಪ್ರತಿ ತಿಂಗಳು ₹ 10 ಸಾವಿರ ಅಪಾಯ ಭತ್ಯೆ ನೀಡಬೇಕು
- ಪೌರಕಾರ್ಮಿಕರಿಗೂ ಸರ್ಕಾರ ₹ 50 ಲಕ್ಷ ವಿಮೆ ಭದ್ರತೆ ಒದಗಿಸಬೇಕು
- ಕೋವಿಡ್‌ನಿಂದ ರಕ್ಷಿಸಿಕೊಳ್ಳಲು ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಬೇಕು
- ಕೋವಿಡ್ ಕಾಣಿಸಿಕೊಂಡ ಪೌರಕಾರ್ಮಿಕರಿಗೆ ಉಚಿತ ಚಿಕಿತ್ಸೆ ಒದಗಿಸಬೇಕು. ತುರ್ತು ಸಂದರ್ಭದಲ್ಲಿ ಚಿಕಿತ್ಸೆಗೆ ಹಾಸಿಗೆ ಒದಗಿಸಬೇಕು.

ನಿಧನ ವಾರ್ತೆ

ರಂಗ ಸಂಘಟಕ ಪುಟ್ಟೇಗೌಡ



ಬೆಂಗಳೂರು: ರಂಗ ಸಂಘಟಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಪುಟ್ಟೇಗೌಡ (64) ಗುರುವಾರ ಮುಂಜಾನೆ 4.30ಕ್ಕೆ ಮೃತಪಟ್ಟಿದ್ದಾರೆ.

ಕೆಲ ದಿನಗಳ ಹಿಂದೆ ಕೊರೊನಾ ಸೋಂಕಿತರಾಗಿದ್ದ ಅವರು, ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳು ಇದ್ದಾರೆ. ಬೆಮೆಲ್ ಉದ್ಯೋಗಿ ಆಗಿದ್ದ ಅವರು, ನಿವೃತ್ತಿಯ ನಂತರ ಕೂಡ ಸಾಹಿತ್ಯ ಮತ್ತು ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ರಂಗಮುದ್ರ ತಂಡವನ್ನು ಕಟ್ಟಿ, ಹಲವು ನಾಟಕಗಳನ್ನು ಪ್ರದರ್ಶಿಸಿದ್ದರು

ಮಂಜುನಾಥ್



ಬೆಂಗಳೂರು: ಸಚಿವ ಕೆ. ಗೋಪಾಲಯ್ಯ ಅವರ ಆಪ್ತ ಸಹಾಯಕ ಮಂಜುನಾಥ್ ಅವರು ಕೋವಿಡ್‌ನಿಂದಾಗಿ ಗುರುವಾರ ನಿಧನ ಹೊಂದಿದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ವಾರದ ಹಿಂದಷ್ಟೇ ಮಂಜುನಾಥ್ ಅವರ ತಾಯಿ ತೀರಿಕೊಂಡಿದ್ದರು.

ಚುರುಕುಕೊಂಡ ತನಿಖೆ; ಬಂಧಿತ ನಾಲ್ವರನ್ನೂ ಕಸ್ಟಡಿಗೆ ಪಡೆದು ತೀವ್ರ ವಿಚಾರಣೆ

ಹಾಸಿಗೆ ಬ್ಲಾಕಿಂಗ್; 4 ಆಸ್ಪತ್ರೆಗಳಲ್ಲಿ ಸಿಸಿಬಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಿಗೆ ಸಿಗಬೇಕಿದ್ದ ಹಾಸಿಗೆಗಳನ್ನು ಬ್ಲಾಕ್ ಮಾಡಿಸಿ, ಅದೇ ಹಾಸಿಗೆಗಳನ್ನು ಬೇರೊಬ್ಬರಿಗೂ ಮಾರಾಟ ಮಾಡುತ್ತಿದ್ದ ಪ್ರಕರಣದ ತನಿಖೆ ಚುರುಕುಗೊಂಡಿದೆ. ಜಾಲದಲ್ಲಿರುವ ಪ್ರತಿಯೊಬ್ಬ ಆರೋಪಿಗಳನ್ನು ಪತ್ತೆ ಹಚ್ಚಲು ಮುಂದಾಗಿರುವ ಸಿಸಿಬಿ, ನಗರದ ನಾಲ್ಕು ಆಸ್ಪತ್ರೆಗಳಲ್ಲಿ ಗುರುವಾರ ಶೋಧ ನಡೆಸಿತು.

ತುರ್ತು ನಿಗಾ ಘಟಕ (ಐಸಿಯು) ಹಾಗೂ ಆಮ್ಲಜನಕ ಅಗತ್ಯವಿರುವ ಕೊರೊನಾ ಸೋಂಕಿತರಿಗೆ ಖಾಸಗಿ ಆಸ್ಪತ್ರೆಯಲ್ಲಿ ಮೀಸಲಿಟ್ಟ ಹಾಸಿಗೆ ಕೊಡಿಸಲು ನಗರದ ಪ್ರತಿಯೊಂದು ವಲಯಗಳಲ್ಲಿ ವಾರ್ ರೂಮ್ ತೆರೆಯಲಾಗಿದೆ. ಅದೇ ವಾರ್ ರೂಮ್ ವೈದ್ಯರು, ತಮ್ಮದೇ ಜಾಲ ರೂಪಿಸಿಕೊಂಡು ಹಾಸಿಗೆ ಮಾರಾಟ ಮಾಡುತ್ತಿದ್ದ ಸಂಗತಿ ಇದುವರೆಗಿನ ತನಿಖೆಯಿಂದ ಹೊರಬಿದ್ದಿದೆ.

‘ದಕ್ಷಿಣ ವಲಯದ ವಾರ್ ರೂಮ್ ಉಸ್ತುವಾರಿ ಡಾ. ರಿಹಾನ್, ಬೊಮ್ಮನಹಳ್ಳಿ ವಲಯದ ಡಾ. ಶಶಿ, ಬೇಗೂರಿನ ಸಾಮಾಜಿಕ ಕಾರ್ಯಕರ್ತೆ ಎನ್ನಲಾದ ನೇತ್ರಾವತಿ ಹಾಗೂ ಆಕೆಯ ಸ್ನೇಹಿತ ರೋಹಿತ್‌ಕುಮಾರ್ ಅವರನ್ನು ಈಗಾಗಲೇ ಬಂಧಿಸಲಾಗಿದೆ. ನಾಲ್ವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ಸಿಸಿಬಿ ಮೂಲಗಳು ಹೇಳಿವೆ.

‘ನಗರದ ಎಲ್ಲ ವಲಯಗಳ ವಾರ್ ರೂಮ್ ಮೇಲೆ ಬುಧವಾರ ದಾಳಿ ಮಾಡಲಾಗಿತ್ತು. ಸಿಬ್ಬಂದಿಗಳ ಹೆಸರು, ವಿಳಾಸ ಹಾಗೂ ಸಾರ್ವಜನಿಕರಿಂದ ಬಂದ ಕರೆಗಳ ಬಗ್ಗೆ ದಾಖಲೆ ಕಲೆಹಾಕಲಾಗಿದೆ. ಜೊತೆಗೆ, ವಾರ್ ರೂಮ್ ನಿತ್ಯದ ಪ್ರಗತಿ ವರದಿಗಳನ್ನೂ ಸಂಗ್ರಹಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ವಾರ್ ರೂಮ್ ದಾಖಲೆ ಪರಿಶೀಲನೆಗಾಗಿ ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳನ್ನು ರಚಿಸಲಾಗಿದೆ. ರೋಗಿಗಳ ಪಟ್ಟಿಯನ್ನು ಸಂಗ್ರಹಿಸಲಾಗಿದ್ದು, ಅವರ ದಾಖಲಾತಿ ಖಚಿತಪಡಿಸಿಕೊಳ್ಳಲು ತನಿಖೆ ಮುಂದುವರಿಸಲಾಗಿದೆ.’

‘ನಗರದ ನಾಲ್ಕು ಆಸ್ಪತ್ರೆಗಳಲ್ಲಿ ಗುರುವಾರ ಶೋಧ ನಡೆಸಲಾಗಿದೆ. ರೋಗಿಗಳ ಪ್ರವೇಶ ಹಾಗೂ ಚಿಕಿತ್ಸೆ ಬಗ್ಗೆ ಮಾಹಿತಿಯುಳ್ಳ ಕಂಪ್ಯೂಟರ್‌ನ ದತ್ತಾಂಶ ಸುಪರ್ದಿಗೆ ಪಡೆಯಲಾಗಿದೆ. ಪ್ರತಿಯೊಬ್ಬ ರೋಗಿಯ ಮಾಹಿತಿಯನ್ನೂ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಸಿಸಿಬಿ ಮೂಲಗಳು ಹೇಳಿವೆ.

ಯಾರದ್ದೋ ಹೆಸರಿನಲ್ಲಿ ದಾಖಲು: ‘ಯಾರದ್ದೋ ಹೆಸರಿನಲ್ಲಿ ಕಾಯ್ದಿರಿಸಿದ್ದ ಹಾಸಿಗೆಗಳಲ್ಲಿ ಕೆಲ ರೋಗಿಗಳು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅಂಥವರು ಜಾಲದ ಆರೋಪಿಗಳಿಗೆ ₹50,000 ನೀಡಿರುವುದು ಗೊತ್ತಾಗಿದೆ. ಅವರಿಂದಲೂ ಹೇಳಿಕೆ ಪಡೆಯಲಾಗುತ್ತಿದೆ’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

ಹಲವರ ಮೊಬೈಲ್ ಸ್ವಿಚ್ ಆಫ್: ‘ಬಂಧಿತ ಆರೋಪಿಗಳ ಜೊತೆ ಸಂಪರ್ಕದಲ್ಲಿದ್ದ ಹಲವರ ಮೊಬೈಲ್‌ಗಳು ಸ್ವಿಚ್ ಆಫ್‌ಆಗಿವೆ.ಅವರವಿಳಾಸಪತ್ತೆಮಾಡಲು ಪ್ರತ್ಯೇಕ ತಂಡ ಕೆಲಸ ಮಾಡುತ್ತಿದೆ’ ಎಂದೂ ಮೂಲಗಳು ಹೇಳಿವೆ.

ಸಂಸದ, ಶಾಸಕರ ವಿರುದ್ಧ ದೂರು

‘ದಕ್ಷಿಣ ವಲಯದ ವಾರ್ ರೂಮ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಲ್.ಎ. ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್ ಹಾಗೂ ಎಂ.ಸತೀಶ್ ರೆಡ್ಡಿ ಅವರು ಕೋಮು ಸೌಹಾರ್ದತೆ ಕದಡುವ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿ ಕಾಂಗ್ರೆಸ್ ಕಾನೂನು ಘಟಕದ ಪದಾಧಿಕಾರಿಗಳು ಸಿದ್ದಾಪುರ ಪೊಲೀಸರಿಗೆ ದೂರು ನೀಡಿದ್ದಾರೆ.


‘ಸಂಸದ ಹಾಗೂ ಶಾಸಕರು, ಅಂತರವನ್ನೂ ಕಾಯ್ದುಕೊಳ್ಳದೇ ವಾರ್ ರೂಮ್‌ಗೆ ಹೋಗಿದ್ದರು. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 205 ಜನರ ಪೈಕಿ 17 ಮಂದಿ ಹೆಸರನ್ನು ಮಾತ್ರ ಪ್ರಸ್ತಾಪಿಸಿ ಪ್ರಕರಣದಲ್ಲಿ ಧಾರ್ಮಿಕ ಬಣ್ಣ ಬಳೆಯಲು ಯತ್ನಿಸಿದ್ದಾರೆ. ಎರಡು ಧರ್ಮಗಳ ನಡುವಿನ ಸೌಹಾರ್ದ ಹಾಗೂ ಸಮಾಜದ ಶಾಂತಿಗೆ ಧಕ್ಕೆ ತರುವ ಉದ್ದೇಶ ಅವರದ್ದಾಗಿದೆ. ಅವರೆಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ದೂರಿನಲ್ಲಿ ಒತ್ತಾಯಿಸಿದ್ದಾರೆ.

ಪೊಲೀಸರು, ‘ದೂರು ಸ್ವೀಕರಿಸಿ ಪರಿಶೀಲನೆ ನಡೆಸಲಾಗುತ್ತಿದೆ’ ಎಂದರು.

ಪ್ರಜಾವಾಣಿ ಓದುಗರಲ್ಲಿ ಮನವಿ



ಕೋವಿಡ್ ಸಂಕಷ್ಟದ ನಡುವೆಯೂ ಮಳೆ, ಗಾಳಿ, ಚಳಿಯ ಪರಿವಿಲ್ಲದೆ ಪ್ರತಿದಿನ ಓದುಗರು ನಿದ್ದೆಯಿಂದ ಎದ್ದೇಳುವ ಮುಂಚೆಯೇ ಅವರ ಮನೆ ಬಾಗಿಲಿಗೆ ‘ಪ್ರಜಾವಾಣಿ’ ಪತ್ರಿಕೆಯನ್ನು ಮುಟ್ಟಿಸುವ ಕೆಲಸವನ್ನು ವಿತರಕರು ಮಾಡುತ್ತಿದ್ದಾರೆ. ಪ್ರಸ್ತುತ ಕರ್ಫ್ಯೂ ಜಾರಿಯಲ್ಲಿರುವ ಪರಿಣಾಮ ಪತ್ರಿಕೆಯ ತಿಂಗಳ ಬಿಲ್ ಕಲೆಕ್ಷನ್ ಕಷ್ಟಕರವಾಗಿದೆ. ಹಾಗಾಗಿ, ಓದುಗರೇ ವಿತರಕರನ್ನು ನೇರವಾಗಿ ಸಂಪರ್ಕಿಸಿ ಡಿಜಿಟಲ್ ಪೇಮೆಂಟ್ ಮೂಲಕ ಹಣ ಪಾವತಿಸಲು ಮನವಿ.



‘ಕೊರೊನಾ ನಡುವೆಯೂ ಕೋಮು ಸೌಹಾರ್ದ ಕದಡುವ ಪ್ರಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಉಲ್ಬಣಿಸುತ್ತಿದೆ. ಸರಿಯಾದ ಸಮಯಕ್ಕೆ ಚಿಕಿತ್ಸೆ ಸಿಗದೆ ಜನ ಪ್ರಾಣ ಬಿಡುತ್ತಿದ್ದಾರೆ. ಇಂತಹ ಕರುಣಾಜನಕ ಸ್ಥಿತಿಯಲ್ಲೂ ಸಂಸದ ತೇಜಸ್ವಿ ಸೂರ್ಯ ಹಾಗೂ ಬಿಜೆಪಿಯ ಮೂವರು ಶಾಸಕರು ಹಾಸಿಗೆ ಅವ್ಯವಹಾರದ ನೆಪದಲ್ಲಿ ಕೋಮುದ್ವೇಷದ ವಿಷಬೀಜ ಬಿತ್ತಲು ಮುಂದಾಗಿದ್ದಾರೆ. ಇದು ಹೇಯ ನಡೆ’ ಎಂದು ವಿವಿಧ ಸಂಘಟನೆಗಳ ಸದಸ್ಯರು ಟೀಕಿಸಿದ್ದಾರೆ.


ಈ ಕುರಿತು ಜನಾಂದೋಲನವನ್ನೂ ಹಮ್ಮಿಕೊಳ್ಳಲಾಗಿದೆ. ಇದನ್ನು ಬೆಂಬಲಿಸಿ ಇತಿಹಾಸಕಾರ ರಾಮಚಂದ್ರ ಗುಹಾ, ಲಿಯೊ ಸಲ್ಡಾನ, ಸಿಲ್ವಿಯಾ ಕರ್ಪಗಂ ಅವರು ಗುರುವಾರ ನಡೆದ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಕೋವಿಡ್ ವಾರ್ ರೂಂ ಗೆ ದಿಢೀರ್ ಭೇಟಿ ನೀಡಿದ್ದ ತೇಜಸ್ವಿ ಸೂರ್ಯ ಹಾಗೂ ಶಾಸಕರು ಮುಸ್ಲಿಂ ಸಮುದಾಯಕ್ಕೆ ಸೇರಿದ ಸಿಬ್ಬಂದಿಯ ಹೆಸರು ಉಲ್ಲೇಖಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರನ್ನು ದೇಶದ್ರೋಹಿಗಳೆಂದು ಕರೆದಿದ್ದಾರೆ. ವಾರ್ ರೂಂನಲ್ಲಿ 200ಕ್ಕೂ ಅಧಿಕ ಮಂದಿ ಕೆಲಸ ಮಾಡುತ್ತಿದ್ದಾರೆ. ಅವರನ್ನೆಲ್ಲಾ ಬಿಟ್ಟು ಮುಸ್ಲಿಂ ಸಮುದಾಯಕ್ಕೆ ಸೇರಿದ್ದ 17 ಮಂದಿಯ ಮೇಲೆ ಗೂಬೆ ಕೂರಿಸಿದ್ದು ಏಕೆ. ಆರೋಪಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಿ ಸೂಕ್ತ ಕ್ರಮಕ್ಕೆ ಮುಂದಾಗಬಹುದಿತ್ತು. ಆದರೆ, ಆ ಕೆಲಸ ಮಾಡಲಿಲ್ಲ. ಆಮ್ಲಜನಕದ ಕೊರತೆಯಿಂದ ಅನೇಕರು ಬೀದಿಗಳಲ್ಲಿ ಪ್ರಾಣ ಬಿಡುತ್ತಿದ್ದಾರೆ. ಇದರಿಂದ ಜನರ ಗಮನ ಬೇರೆಡೆಗೆ ಸೆಳೆಯುವ ಉದ್ದೇಶದಿಂದಲೇ ಅವರು ಭ್ರಷ್ಟಾಚಾರ ಬಯಲಿಗೆಳೆವ ನಾಟಕವಾಡಿದ್ದಾರೆ’ ಎಂದು ಮೂವರು ಆರೋಪಿಸಿದರು.

ಹಿರಿಯ ವಕೀಲ ಸಿ.ಎಸ್. ದ್ವಾರಕಾನಾಥ್ ಸೇರಿದಂತೆ ಒಟ್ಟು 264 ಮಂದಿಯ ಸಹಿಯನ್ನೊಳಗೊಂಡ ಪತ್ರವನ್ನು ಮುಖ್ಯಮಂತ್ರಿಯವರಿಗೆ ರವಾನಿಸುವುದಾಗಿ ತಿಳಿಸಿದರು.

ಹಕ್ಕೊತ್ತಾಯಗಳು

- ಕೋಮು ಸೌಹಾರ್ದ ಕದಡಲು ಪ್ರಯತ್ನಿಸಿರುವ ತೇಜಸ್ವಿ ಸೂರ್ಯ, ರವಿ ಸುಬ್ರಹ್ಮಣ್ಯ, ಸತೀಶ ರೆಡ್ಡಿ ಹಾಗೂ ಉದಯ ಗರುಡಾಚಾರ್ ವಿರುದ್ಧ ಬೆಂಗಳೂರು ಪೊಲೀಸರು ಸ್ವಯಂ ಪ್ರೇರಿತವಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಬೇಕು.
- ಎಲ್ಲರಿಗೂ ತುರ್ತಾಗಿ ವೈದ್ಯಕೀಯ ಸೇವೆ ಒದಗಿಸುವ ವ್ಯವಸ್ಥೆ ಮಾಡುವತ್ತ ರಾಜ್ಯ ಸರ್ಕಾರ ಹೆಚ್ಚಿನ ಗಮನ ಕೇಂದ್ರೀಕರಿಸಬೇಕು.
- ರಾಜ್ಯ ಸರ್ಕಾರವು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಬೇಕು. ಈ ಸಂಬಂಧ ಕೂಡಲೇ ಪ್ರಕಟಣೆ ಹೊರಡಿಸಬೇಕು.



ಹಾಸಿಗೆ ಬ್ಲಾಕಿಂಗ್: ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ ರೂಂ ಸಿಬ್ಬಂದಿ ಸರ್ಕಾರಿ ಕೋಟಾದ ಹಾಸಿಗೆ ಹಂಚಿಕೆ ವೇಳೆ ಅಕ್ರಮ ನಡೆಸುತ್ತಿರುವ ಆರೋಪದ ಕುರಿತು ವಿಚಾರಣೆ ನಡೆಸಿರುವ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಅವರು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಗುರುವಾರ ವರದಿ ಸಲ್ಲಿಸಿದರು.

ಸಂದೇಹಾಸ್ಪದವಾಗಿ ಹಾಸಿಗೆ ಬ್ಲಾಕ್ ಮಾಡಿರುವ 12 ನಿರ್ದಿಷ್ಟ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸುವಂತೆ ಮುಖ್ಯ ಆಯುಕ್ತರು ತುಳಸಿ ಮದ್ದಿನೇನಿ ಅವರಿಗೆ ಸೂಚಿಸಿದ್ದರು.

‘ಹಾಸಿಗೆ ಬ್ಲಾಕಿಂಗ್ ದಂಧೆ ಆರೋಪಗಳ ಕುರಿತ ಪ್ರಾಥಮಿಕ ವರದಿಯನ್ನು ವಿಶೇಷ ಆಯುಕ್ತರು ಸಲ್ಲಿಸಿದ್ದಾರೆ. ಸದ್ಯಕ್ಕೆ ದಕ್ಷಿಣ ವಲಯದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಆರೋಪಗಳಿಗೆ ಸಂಬಂಧಿಸಿದ್ದ ವಿವರಗಳು ಮಾತ್ರ ವರದಿಯಲ್ಲಿವೆ. ಇತರ ವಲಯಗಳ ವಾರ್ ರೂಂಗಳಲ್ಲಿಯೂ ಅಕ್ರಮ ನಡೆದಿರುವ ಸಂದೇಹಗಳಿವೆ. ಅವುಗಳ ಕುರಿತ ಮಾಹಿತಿ ಇನ್ನಷ್ಟೇ ಪಡೆಯಬೇಕಿದೆ’ ಎಂದು ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.


‘ತನಿಖೆ ಇನ್ನೂ ಪೂರ್ಣಗೊಂಡಿಲ್ಲವಾದ ಕಾರಣ ವರದಿಯಲ್ಲಿರುವ ಅಂಶಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ’ ಎಂದರು.

ಸರ್ಕಾರಿ ಲ್ಯಾಬ್‌ನಲ್ಲಿ ‘ಖಾಸಗಿ’ ಪರೀಕ್ಷೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಲ್ಯಾಬ್‌ನವರು ಸಂಗ್ರಹಿಸುತ್ತಿದ್ದ ಮೂಗು ದ್ರವದ ಮಾದರಿಗಳನ್ನು ಸರ್ಕಾರಿ ಲ್ಯಾಬ್‌ನಲ್ಲಿ ಪರೀಕ್ಷೆ ಮಾಡಿಕೊಟ್ಟು ಹಣ ಪಡೆಯುತ್ತಿದ್ದ ಆರೋಪದಡಿ ಯಲಹಂಕ ಸರ್ಕಾರಿ ಆಸ್ಪತ್ರೆಯ ಟೆಕ್ನಿಷಿಯನ್‌ಗಳು ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

‘ಪದ್ಮನಾಭ್, ಭಾವಿ ರೆಡ್ಡಿ, ಅಟ್ಟೂರು ಲೇಔಟ್ ನಿವಾಸಿ ಪುನೀತ್ ಹಾಗೂ ಮತ್ತಿಕೆರೆಯ ಸತೀಶ್ ಬಂಧಿತರು. ಆಸ್ಪತ್ರೆಯ ವೈದ್ಯರು ನೀಡಿದ್ದ ದೂರು ಆಧರಿಸಿ ನಾಲ್ವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.



ಬಂಧಿತ ಆರೋಪಿಗಳು

’ಆರೋಪಿಗಳಾದ ಪದ್ಮನಾಭ್, ಭಾವಿರೆಡ್ಡಿ ಹಾಗೂ ಪುನೀತ್, ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದರು. ಇನ್ನೊಬ್ಬ ಆರೋಪಿ ಸತೀಶ್, ಕೊಡಿಗೇಹಳ್ಳಿಯಲ್ಲಿ ಖಾಸಗಿ ಆಸ್ಪತ್ರೆ ನಡೆಸುತ್ತಿದ್ದಾರೆ.’

‘ಕೆಲ ಖಾಸಗಿ ಲ್ಯಾಬ್ ಸಿಬ್ಬಂದಿ, ಕೊರೊನಾ ಸೋಂಕಿನ ಲಕ್ಷಣ ಇರುವ ಹಾಗೂ ಸೋಂಕಿತರ ಜೊತೆ ಪ್ರಾಥಮಿಕ ಸಂಪರ್ಕ ಹೊಂದಿರುತ್ತಿದ್ದವರ ಮೂಗಿನ ದ್ರವದ ಮಾದರಿ ಸಂಗ್ರಹಿಸುತ್ತಿದ್ದರು. ಅದೇ ಮಾದರಿಯನ್ನು ಸರ್ಕಾರಿ ಲ್ಯಾಬ್‌ನಲ್ಲಿ ಪರೀಕ್ಷಿಸಿ ವರದಿ ನೀಡುತ್ತಿದ್ದ ಆರೋಪಿಗಳು, ಒಂದು ಮಾದರಿ ಪರೀಕ್ಷೆಗೆ ₹ 100 ಪಡೆಯುತ್ತಿದ್ದರು. ನಿತ್ಯವೂ 40ಕ್ಕೂ ಹೆಚ್ಚು ಮಾದರಿಗಳನ್ನು ಅವರು ಪರೀಕ್ಷಿಸಿ ವರದಿ ಕೊಡುತ್ತಿದ್ದರು’ ಎಂದೂ ಪೊಲೀಸರು ತಿಳಿಸಿದರು.

‘ಸರ್ಕಾರದ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿಗಳು, ಕಳೆದ ಡಿಸೆಂಬರ್‌ನಿಂದಲೇ ಕೃತ್ಯ ಎಸಗುತ್ತಿದ್ದರು. ಈ ಬಗ್ಗೆ ಆಸ್ಪತ್ರೆಯ ವೈದ್ಯ ಡಾ. ಚೇತನ್ ಕುಮಾರ್ ಅವರಿಗೆ ಇತ್ತೀಚೆಗೆ ಅನುಮಾನ ಬಂದಿತ್ತು. ಪ್ರಾಥಮಿಕ ತನಿಖೆ ನಡೆಸಿದಾಗ ಆರೋಪಿಗಳ ಕೃತ್ಯ ಬಯಲಾಗಿದ್ದು, ನಂತರ ಠಾಣೆಗೆ ದೂರು ನೀಡಿದ್ದರು’ ಎಂದರು.

‘ಚಿತಾಗಾರ: ಕಾಯುವುದು ಇನ್ನೂ ತಪ್ಪಿಲ್ಲ’

ಬೆಂಗಳೂರು: ಕೋವಿಡ್‌ನಿಂದಾಗಿ ಸಾವಿಗೀಡಾಗುತ್ತಿರುವವರ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು ಶವಸಂಸ್ಕಾರಕ್ಕಾಗಿ ಮೃತರ ಸಂಬಂಧಿಕರು ಚಿತಾಗಾರಗಳ ಎದುರು ಗಂಟೆಗಟ್ಟಲೆ ಕಾಯುವುದು ಇನ್ನೂ ತಪ್ಪಿಲ್ಲ.

‘ಮಧ್ಯಾಹ್ನ 1 ಗಂಟೆಗೇ ಶವವನ್ನು ಇಲ್ಲಿಗೆ ತಂದಿದ್ದೆವು. ರಾತ್ರಿ ಏಳು ಗಂಟೆಗೆ ಅಂತ್ಯಸಂಸ್ಕಾರ ನೆರವೇರಿಸಿದ್ದೇವೆ. ನಾವು ಎಂತಹ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ’ ಎಂದು ಹೆಸರು ಹೇಳಲಿಚ್ಛಿಸದ ವ್ಯಕ್ತಿಯೊಬ್ಬರು ಪ್ರಶ್ನಿಸಿದರು.

ಚಾಮರಾಜಪೇಟೆಯ ಚಿತಾಗಾರದ ಎದುರು ಮಾತಿಗೆ ಸಿಕ್ಕ ಅವರು ‘ಸಂಸದ ಹಾಗೂ ಬಿಜೆಪಿ ಶಾಸಕರು ಹಾಸಿಗೆ ಬ್ಲಾಕಿಂಗ್ ದಂಧೆಯನ್ನು ಬಯಲಿಗೆಳೆದರು. ನಗರದಲ್ಲಿ ಸಾವಿರಕ್ಕೂ ಅಧಿಕ ಹಾಸಿಗೆಗಳು ಖಾಲಿ ಇವೆ ಎಂದರು. ಹೀಗಿದ್ದರೂ ಹಾಸಿಗೆಗೆ ಅಲೆಯುವುದು ತಪ್ಪಿಲ್ಲ. ಆಸ್ಪತ್ರೆಗಳಲ್ಲಿ ಸರಿಯಾಗಿ ಚಿಕಿತ್ಸೆ ಸಿಗುತ್ತಿಲ್ಲ. ಇನ್ನಾದರೂ ಚಿಕಿತ್ಸಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಬೇಕು’ ಎಂದರು.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ತಪ್ಪಿದ ಅನಾಹುತ

ಆಮ್ಲಜನಕ ಕೊರತೆ: ಮಧ್ಯರಾತ್ರಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಬುಧವಾರ ಮಧ್ಯರಾತ್ರಿ ಆಮ್ಲಜನಕ ಬರಿದಾಗಿ ಸಂಭವಿಸಬಹುದಾಗಿದ್ದ ಅನಾಹುತವು ವೈದ್ಯರು ಮತ್ತು ಆಸ್ಪತ್ರೆ ಸಿಬ್ಬಂದಿಯ ಸಮಯಪ್ರಜ್ಞೆ ಹಾಗೂ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಮಧ್ಯಪ್ರವೇಶದಿಂದ ತಪ್ಪಿದೆ.

ಆಸ್ಪತ್ರೆಯಲ್ಲಿ ವೆಂಟಿಲೇಟರ್ ಮತ್ತು ಆಕ್ಸಿಜನ್ ಬೆಡ್‌ಗಳ ಮೂಲಕ 200 ಜನ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದರು. ರಾತ್ರಿ ಅದು ಖಾಲಿಯಾಗುತ್ತಾ ಬಂದಿತ್ತು. ರಾತ್ರಿ 11 ಗಂಟೆ ವೇಳೆಗೆ ಪ್ರಾಕ್ಸಿ ಏರ್ ಎನ್ನುವ ಕಂಪನಿಯಿಂದ ಆಮ್ಲಜನಕದ ಟ್ಯಾಂಕರ್ ಆಸ್ಪತ್ರೆಯನ್ನು ತಲುಪಬೇಕಿತ್ತು. 11.30 ಕಳೆದರೂ ಬರಲಿಲ್ಲ. ಟ್ಯಾಂಕರ್ ಕೆ.ಸಿ.ಜನರಲ್ ಆಸ್ಪತ್ರೆ ಬದಲು ಖಾಸಗಿ ಆಸ್ಪತ್ರೆಗೆ ಹೋಗಿದೆ ಎಂಬ ಮಾಹಿತಿ ಬಂತು ಎಂದು ಮೂಲಗಳು ತಿಳಿಸಿವೆ.

ಆಮ್ಲಜನಕ ಖಾಲಿ ಆಗುತ್ತಿರುವ ವಿಷಯವನ್ನು ವೈದ್ಯರು ಮತ್ತು ಆಸ್ಪತ್ರೆ ಸಿಬ್ಬಂದಿ ಆಮ್ಲಜನಕ ನಿರ್ವಹಣೆ ಹೊತ್ತಿರುವ ವೈದ್ಯಾಧಿಕಾರಿ ಡಾ.ರೇಣುಕಾ ಪ್ರಸಾದ್ ಗಮನಕ್ಕೆ ತಂದರು. ಪ್ರಾಕ್ಸಿ ಏರ್ ಸಂಪರ್ಕಿಸುವ ಪ್ರಯತ್ನ ಫಲಿಸಲಿಲ್ಲ. ಮಧ್ಯರಾತ್ರಿ 12.30 ಕ್ಕೆ ಪ್ರಸಾದ್ ಅವರು ಅಶ್ವತ್ಥನಾರಾಯಣ ಗಮನಕ್ಕೆ ತಂದರು.



ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಟ್ಯಾಂಕರ್‌ನಿಂದ ಆಮ್ಲಜನಕ ಲೋಡ್ ಮಾಡುತ್ತಿರುವ ಸಿಬ್ಬಂದಿ

ಅಶ್ವತ್ಥನಾರಾಯಣ ಅವರು ಆಮ್ಲಜನಕ ಎಲ್ಲೆಲ್ಲಿ ಲಭ್ಯವಿದೆ ಎಂಬ ಮಾಹಿತಿ ಪಡೆದು, ಯುನಿವರ್ಸಲ್ ಕಂಪನಿ ಜತೆ ಮಾತನಾಡಿ ತುರ್ತಾಗಿ ಆಮ್ಲಜನಕ ತರಿಸಲು ವ್ಯವಸ್ಥೆ ಮಾಡಿದರು. ಒಟ್ಟು 20 ಜಂಬೋ ಸಿಲಿಂಡರ್‌ಗಳನ್ನು ತರಿಸಲಾಯಿತು. ಗುರುವಾರ ಬೆಳಗಿನ ಜಾವ 4.45 ರವರೆಗೆ ರೋಗಿಗಳಿಗೆ ಆಮ್ಲಜನಕ ಕೊಡಿಸುವ ಕೆಲಸ ನಡೆಯಿತು. ಇದಾದ ಸ್ವಲ್ಪ ಹೊತ್ತಿನಲ್ಲೇ ದ್ರವರೂಪದ ಆಮ್ಲಜನಕ ಟ್ಯಾಂಕರ್ ಕೂಡ ಯುನಿವರ್ಸಲ್ ಕಂಪನಿಯಿಂದ ಬಂದಿತು.

ಅಶ್ವತ್ಥನಾರಾಯಣ ಅವರು ಬೆಳಗಿನ ಜಾವದವರೆಗೂ ವೈದ್ಯರ ಜತೆಗೇ ಇದ್ದು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಎಂದು ಉಪಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಮುಂಬೈ: ಏರ್ ಆಂಬುಲೆನ್ಸ್ ತುರ್ತುಭೂಸ್ಪರ್ಶ

ಮುಂಬೈ: ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಗಾಲಿಯೊಂದು (ನೋಸ್ ವೀಲ್) ಕಳಚಿದ ಹಿನ್ನೆಲೆಯಲ್ಲಿ ಏರ್ ಆಂಬುಲೆನ್ಸ್‌ವೊಂದು, ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಗುರುವಾರ ರಾತ್ರಿ ತುರ್ತು ಭೂಸ್ಪರ್ಶ ಮಾಡಿತು.

ಗಾಲಿ ಕಳಚಿದ ಕೂಡಲೇ ಮುಂಬೈನ ವಿಮಾನ ನಿಲ್ದಾಣ ಸಿಬ್ಬಂದಿಗೆ ಪೈಲಟ್ ಸೂಚನೆ ನೀಡಿದ್ದಾರೆ. ರಕ್ಷಣಾ ತಂಡಗಳು, ವೈದ್ಯರು, ಸಿಐಎಸ್‌ಎಫ್ ಸಿಬ್ಬಂದಿ ಸೇರಿದಂತೆ ಭಾರಿ ಮುನ್ನೆಚ್ಚರಿಕೆಯ ಸಿದ್ಧತೆಯೊಂದಿಗೆ ಏರ್ ಆಂಬುಲೆನ್ಸ್ ಅನ್ನು ಸುರಕ್ಷಿತವಾಗಿ ಇಳಿಸಲಾಯಿತು. ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಆಯುರ್ವೇದ ಔಷಧೋಪಚಾರದಿಂದ ಕೊರೊನಾ ಸೋಂಕು ವಾಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಯುರ್ವೇದ ಔಷಧೋಪಚಾರ, ಬಿಸಿನೀರು ಸೇವನೆ, ವ್ಯಾಯಾಮ ಸೇರಿದಂತೆ ವಿವಿಧ ಆರೋಗ್ಯಕಾರಿ ಅಭ್ಯಾಸಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡು, ಚಾಚು ತಪ್ಪದೆ ಪಾಲಿಸುತ್ತಿದ್ದೇನೆ. ಇದರಿಂದಾಗಿಯೇ ಸೋಂಕು ತಗುಲಿದರೂ ರೋಗದ ತೀವ್ರತೆ ನನಗೆ ಅಷ್ಟಾಗಿ ಬಾಧಿಸಲಿಲ್ಲ.’

ಇದು ಕೋವಿಡ್ ಕಾಯಿಲೆ ಜಯಿಸಿದ ಗಾಯಕ ಹಾಗೂ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಅವರ ಅನುಭವದ ಮಾತುಗಳು. ಕಳೆದ ಏ.4ರಂದು ಸೋಂಕಿತರಾಗಿದ್ದ ಅವರು, 10 ದಿನಗಳಲ್ಲಿ ಸಂಪೂರ್ಣ ಚೇತರಿಸಿಕೊಂಡಿದ್ದಾರೆ. ಆಸ್ಪತ್ರೆಯಲ್ಲಿ ಹಾಸಿಗೆ ಹಂಚಿಕೆಯಾಗಿದ್ದರೂ ಗಂಭೀರವಾಗಿ ಅಸ್ವಸ್ಥರಾದವರಿಗೆ ಅದು ಸಿಗಲಿ ಎಂಬ ಉದ್ದೇಶದಿಂದ 73 ವರ್ಷದ ಅವರು, ಮನೆ ಆರೈಕೆಗೆ ಒಳಗಾಗಿದ್ದರು.

ಕೋವಿಡ್ ಗೆದ್ದವರ ಕಥೆ



‘ಸಣ್ಣ ಪ್ರಮಾಣದಲ್ಲಿ ಜ್ವರ ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡವು. ಕೂಡಲೇ ಸಿ.ಟಿ. ಸ್ಕ್ಯಾನ್ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ಮಾಡಿಸಿಕೊಂಡು, ವೈದ್ಯರ ಸಲಹೆಯ ಮೇರೆಗೆ ಮಾತ್ರೆಗಳನ್ನು ಪಡೆದುಕೊಂಡೆ.’

‘ಪ್ರತಿನಿತ್ಯ ಕಾಯಿಸಿದ ನೀರಿಗೆ ತುಳಸಿ ಎಲೆಗಳನ್ನು ಹಾಕಿ ಕುಡಿಯುತ್ತೇನೆ. ಅದೇ ರೀತಿ, ಅಮೃತಬಳ್ಳಿ, ಅರಿಶಿನ, ಲಿಂಬೆ ಹಣ್ಣಿನ ರಸವನ್ನು ಕೂಡ ಬಿಸಿನೀರಿಗೆ ಹಾಕಿ ಸೇವಿಸುತ್ತೇನೆ. ಕೋವಿಡ್ ಕಾಯಿಲೆ ಬಂದಾಗ ಕೂಡ ಅದನ್ನು ಮುಂದುವರಿಸಿದೆ. ವಿವಿಧ ಆಯುರ್ವೇದ ಔಷಧೋಪಚಾರಗಳನ್ನು ಮಾಡಿಕೊಂಡೆ. ಇವು ರೋಗನಿರೋಧಕ ಶಕ್ತಿ ವೃದ್ಧಿಗೆ ಸಹಕಾರಿಯಾಯಿತು. ರಕ್ತದಲ್ಲಿನ ಆಮ್ಲಜನಕ ಪ್ರಮಾಣವನ್ನು ದಿನಕ್ಕೆ ಎರಡರಿಂದ ಮೂರು ಬಾರಿ ಪರೀಕ್ಷೆ ಮಾಡಿಕೊಳ್ಳುತ್ತಿದ್ದೆ. ಹೆಚ್ಚು ವಿಶ್ರಾಂತಿ ಪಡೆದು, ಮನಸ್ಸಿಗೆ ಮುದನೀಡುವ ಭಾವಗೀತೆಗಳನ್ನು ಕೇಳಿದೆ. ಪುಸ್ತಕಗಳನ್ನು ಕೂಡ ಓದುತ್ತಿದ್ದೆ. ಇದು ಕೂಡ ಕಾಯಿಲೆಯನ್ನು ಸುಲಭವಾಗಿ ಎದುರಿಸಲು ಸಾಧ್ಯವಾಯಿತು.’

‘ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದೇನೆ. ಇದರಿಂದ ಕೂಡ ಸೋಂಕಿನ ತೀವ್ರತೆ ಕಡಿಮೆಯಿತ್ತು ಅನಿಸುತ್ತದೆ. ಭಯ ಬಿಟ್ಟು ಫಲಾನುಭವಿಗಳು ಆದಷ್ಟು ಬೇಗ ಲಸಿಕೆ ಪಡೆದುಕೊಳ್ಳಬೇಕು. ರೋಗನಿರೋಧಕ ಶಕ್ತಿ ವೃದ್ಧಿಸಲು ಸಹಕಾರಿಯಾದ ಆಹಾರ ಸೇವನೆ ಹಾಗೂ ಆಯುರ್ವೇದ ಔಷಧೋಪಚಾರವನ್ನು ಮಾಡಿಕೊಳ್ಳಬೇಕು. ವ್ಯಾಯಾಮ, ಯೋಗವನ್ನು ನಿಯಮಿತವಾಗಿ ಮಾಡಬೇಕು. ಆಗ ಕೋವಿಡ್ ಕಾಯಿಲೆಯನ್ನು ಸುಲಭವಾಗಿ ಜಯಿಸಬಹುದು.’

ಕ್ಷೇತ್ರದ ಜನರ ಮನೆಗೇ ಆಮ್ಲಜನಕದ ವಾಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ, ಗುಜರಾತ್, ಮಹಾರಾಷ್ಟ್ರ ಎಲ್ಲವೂ ಭಾರತದಲ್ಲೇ ಇವೆ. ಲಸಿಕೆ ಹಂಚಿಕೆ ವಿಚಾರದಲ್ಲಿ ಯಾವ ರಾಜ್ಯಕ್ಕೂ ಅನ್ಯಾಯವಾಗಬಾರದು. ಎಲ್ಲ ರಾಜ್ಯದ ನಾಗರಿಕರಿಗೂ ಸಮರ್ಪಕ ವೈದ್ಯಕೀಯ ಸೇವೆ ಲಭಿಸಬೇಕು’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಗುರುವಾರ ಹೇಳಿದರು.

ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ನಂದಿನಿ ಬಡಾವಣೆಯ ಕೆಂಪೇಗೌಡ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಂಚಾರಿ ವಾಹನದ ಮೂಲಕ ಆಮ್ಲಜನಕವನ್ನು ಉಚಿತವಾಗಿ ಒದಗಿಸುವ ಸೇವೆಗೆ ಚಾಲನೆ ನೀಡಿ ಮಾತನಾಡಿದರು.

‘ಕೊರೊನಾ ಸೋಂಕು ತಗುಲಿದೆ ಎಂದು ಯಾರೂ ಗಾಬರಿಯಾಗಬಾರದು. ಸರಿಯಾದ ಸಮಯಕ್ಕೆ ಚಿಕಿತ್ಸೆ ಪಡೆಯಬೇಕು. ಹಿಂದೆಂದಿಗಿಂತಲೂ ಹೆಚ್ಚು ಜಾಗರೂಕರಾಗಿರಬೇಕು. ಕೋವಿಡ್ ಎರಡನೇ ಅಲೆಯಿಂದಾಗಿ ಇಡಿ ದೇಶವೇ ಜರ್ಜರಿತವಾಗಿದೆ. ಜನರು ಮನೆ, ಆಸ್ಪತ್ರೆ ಹೀಗೆ ಎಲ್ಲೂ ಇರಲಾರದ ಪರಿಸ್ಥಿತಿ ನಿರ್ಮಾಣಗೊಂಡಿದೆ’ ಎಂದು ತಿಳಿಸಿದರು.



ಸಂಚಾರಿ ವಾಹನದ ಮೂಲಕ ಆಮ್ಲಜನಕವನ್ನು ಉಚಿತವಾಗಿ ಒದಗಿಸುವ ಸೇವೆಗೆ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಸಚಿವ ಕೆ.ಗೋಪಾಲಯ್ಯ ಇದ್ದಾರೆ

ಅಬಕಾರಿ ಸಚಿವ ಕೆ.ಗೋಪಾಲಯ್ಯ ‘ಉಸಿರಾಟದ ತೊಂದರೆಯಿಂದ ಬಳಲುತ್ತಿರುವವರಿಗೆ ಈ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತದೆ. ಡಾ.ನಾಗೇಂದ್ರ ನೇತೃತ್ವದ ತಂಡವು ಮೂರು ಆಂಬುಲೆನ್ಸ್‌ಗಳ ನೆರವಿನಿಂದ ಜನರ ಮನೆಗೇ ಆಮ್ಲಜನಕ ಹಾಗೂ ಅಗತ್ಯ ಔಷಧ ಪೂರೈಸುವ ಕೆಲಸ ಮಾಡಲಿದೆ’ ಎಂದರು.

ಬಿಬಿಎಂಪಿ ವಲಯ ಆಯುಕ್ತ ಬಸವರಾಜು, ವಲಯ ಸಂಯೋಜಕ ಉಜ್ವಲ್ ಕುಮಾರ್ ಘೋಷ್, ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ, ವಲಯ ಆರೋಗ್ಯ ಅಧಿಕಾರಿಗಳಾದ ಡಾ. ಮನೋರಂಜನ್ ಹೆಗ್ಡೆ, ಮಂಜುಳಾ ಇದ್ದರು.

ಉತ್ತಮ ಮಳೆ

ಮಂಗಳೂರು: ಕರಾವಳಿ, ಚಿಕ್ಕಮ-ಗಳೂರಿನ ಹಲವೆಡೆ ಗುರುವಾರ ಮಳೆಯಾಗಿದೆ.

ಚಿಕ್ಕಮಗಳೂರು ನಗರ, ಕೊಪ್ಪ ಸುತ್ತಲಿನ ಪ್ರದೇಶಗಳಲ್ಲಿ ಉತ್ತಮ ಮಳೆ ಸುರಿದಿದೆ. ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಸೇರಿದಂತೆ ಹಲವೆಡೆ ಬಿರುಸಾಗಿ ಮಳೆ ಸುರಿಯಿತು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಸುಬ್ರಹ್ಮಣ್ಯದಲ್ಲಿ ತುಂತುರು ಮಳೆಯಾಗಿದೆ.

ಮೇ 7 ರಂದು ಕರಾವಳಿ ಜಿಲ್ಲೆಗಳಲ್ಲಿ 64.5 ಮಿ.ಮೀ ಮಳೆ ಬೀಳುವ ಸಾಧ್ಯತೆ ಇದೆ. ಮೇ 11ರವರೆಗೂ ಗುಡುಗು ಸಿಡಿಲು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಿರೀಕ್ಷಿತ ಫಲ ನೀಡದ ಕರ್ಫ್ಯೂ: ಸಂಪೂರ್ಣ ಲಾಕ್‌ಡೌನ್‌ಗೆ ಹೆಚ್ಚುತ್ತಿರುವ ಒತ್ತಡ

ಲಾಕ್‌ಡೌನ್ ಚಿಂತನೆ: ಸುಧಾಕರ್

ಪ್ರಜಾವಾಣಿ ವಾರ್ತೆ



ಕೆ.ಸುಧಾಕರ್

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಮೇ 12 ರವರೆಗೆ ವಿಧಿಸಿರುವ ಕರ್ಫ್ಯೂ ನಿರೀಕ್ಷಿತ ಫಲ ನೀಡದೇ ಇರುವ ಕಾರಣ ಸಂಪೂರ್ಣ ಲಾಕ್‌ಡೌನ್ ಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

'ಕೊರೊನಾ ಸೋಂಕಿನ ಪ್ರಸರಣದ ಮೇಲೆ ಕಡಿವಾಣ ಬಿದ್ದಿಲ್ಲ. ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಲೇ ಇದೆ. ಲಾಕ್‌ಡೌನ್ ಮಾಡದೇ ಬೇರೆ ದಾರಿ ಇಲ್ಲ' ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

'ಮುಖ್ಯಮಂತ್ರಿಯವರ ಜತೆ ಮಾತನಾಡಿ ಈ ಸಂಬಂಧ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಅವರು ಹೇಳಿದರು.

ಲಾಕ್‌ಡೌನ್‌ಗೆ ಡಿವಿಎಸ್ ಸಲಹೆ: 'ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಗಂಭೀರವಾಗಿರುವ ಕಾರಣ ಸಂಪೂರ್ಣ ಲಾಕ್‌ಡೌನ್ ಮಾಡುವ ಬಗ್ಗೆ ಚಿಂತನೆ ನಡೆಸಬೇಕು' ಎಂದು ಕೇಂದ್ರ ರಾಸಾಯನಿಕ ಸಚಿವ ಡಿ.ವಿ. ಸದಾನಂದಗೌಡ ಪ್ರತಿಪಾದಿಸಿದ್ದಾರೆ.

'ಪರಿಸ್ಥಿತಿ ಕೈಮೀರುತ್ತಿರುವುದರಿಂದ ಮೊದಲು ಜೀವ ಉಳಿಸುವ ಕೆಲಸ ಆಗಬೇಕು. ಅದಕ್ಕಾಗಿ ಲಾಕ್‌ಡೌನ್ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಮುಂಬೈನಲ್ಲಿ ಸಂಪೂರ್ಣ ಲಾಕ್‌ಡೌನ್ ಮಾಡಿದ್ದರಿಂದ ಅಲ್ಲಿ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿದೆ. ಪ್ರಧಾನಮಂತ್ರಿಯವರು ಲಾಕ್‌ಡೌನ್ ಮಾಡುವ ಅಧಿಕಾರವನ್ನು ರಾಜ್ಯಗಳಿಗೇ ನೀಡಿದ್ದಾರೆ. ಸುಪ್ರೀಂಕೋರ್ಟ್ ಕೂಡ ಲಾಕ್‌ಡೌನ್ ಮಾಡುವಂತೆ ಸೂಚಿಸಿದೆ. ಪರಿಸ್ಥಿತಿಯ ಗಂಭೀರತೆ ನೋಡಿಕೊಂಡು ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಿ ಲಾಕ್‌ಡೌನ್ ಮಾಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಸದಾನಂದಗೌಡ ಹೇಳಿದರು.

ಯಡಿಯೂರಪ್ಪ ಸಂಪುಟದ ಹಲವು ಸಚಿವರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಮೇ 12 ರವರೆಗೆ ಕಾಯುವುದಕ್ಕಿಂತ ಆದಷ್ಟು ಬೇಗನೇ ನಿರ್ಧಾರ ತೆಗೆದುಕೊಳ್ಳುವುದು' ಸೂಕ್ತ ಎಂದಿದ್ದಾರೆ.

ಖಾಸಗಿ ಆಸ್ಪತ್ರೆಗಳ ವೈದ್ಯರ ಸಂಘವೂ ತಕ್ಷಣವೇ ಲಾಕ್‌ಡೌನ್ ಮಾಡುವ ಬಗ್ಗೆ ಒಲವು ವ್ಯಕ್ತಪಡಿಸಿದೆ. ಮೇ 12 ರವರೆಗೆ ಎಂದು ಕೂತರೆ ಸಾಕಷ್ಟು ಅನಾಹುತವಾಗುತ್ತದೆ. ಪ್ರಕರಣಗಳು ಏರಿಕೆ ಆಗುತ್ತಿರುವ ತೀವ್ರತೆ ನೋಡಿದರೆ ಗಾಬರಿ ಹುಟ್ಟಿಸುತ್ತದೆ. ಲಾಕ್‌ಡೌನ್ ಮಾಡದೇ ಬೇರೆ ದಾರಿ ಇಲ್ಲ ಎಂದು ಹೇಳಿದೆ.

ಆಮ್ಲಜನಕ ಉತ್ಪಾದನೆಗೆ 1 ಲಕ್ಷ ಯಂತ್ರ

ವೈದ್ಯಕೀಯ ಆಮ್ಲಜನಕ ಉತ್ಪಾದನೆಗೆ ಸುಮಾರು 1 ಲಕ್ಷ ಯಂತ್ರಗಳನ್ನು ಖರೀದಿಸಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಪ್ರತಿ ಜಿಲ್ಲೆಗೂ ಒಂದು ಸಾವಿರ ಯಂತ್ರಗಳನ್ನು ನೀಡಲಾಗುವುದು. ಅಲ್ಲದೇ ಸುತ್ತಮುತ್ತಲಿನ ಹವೆಯಿಂದ ಆಮ್ಲಜನಕ ಪಡೆದು ಶುದ್ಧ ವೈದ್ಯಕೀಯ ಆಮ್ಲಜನಕ ತಯಾರಿಸುವ ಜನರೇಟರ್‌ಗಳನ್ನು ಆರಂಭಿಸಲಾಗುವುದು ಎಂದರು.

ಕೋವಿಡ್ ಆರೈಕೆ ಕೇಂದ್ರಗಳಿಗೆ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಸುದ್ದಿ 2 ನಿಮಿಷ

ಹಾಸಿಗೆ ಲಭ್ಯತೆ ಮಾಹಿತಿ ಕೊಡಿ: ಖಾಸಗಿ ಆಸ್ಪತ್ರೆಗಳಿಗೆ ಸೂಚನೆ

ಬೆಂಗಳೂರು: ಚಿಕಿತ್ಸೆ ಪಡೆದು ಬಿಡುಗಡೆಯಾಗುವ ಕೋವಿಡ್ ರೋಗಿಗಳು ಮತ್ತು ಖಾಲಿ ಹಾಸಿಗೆಗಳ ಮಾಹಿತಿಯನ್ನು ಪ್ರತಿದಿನ ಕೋವಿಡ್ 'ವಾರ್ ರೂಮ್'ಗೆ ಮತ್ತು 'ಆಪ್ತ ಮಿತ್ರ' ಪೋರ್ಟಲ್‌ಗೆ ನೀಡುವಂತೆ ಖಾಸಗಿ ಆಸ್ಪತ್ರೆಗಳ ಮಾಲೀಕರಿಗೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳ ಉಸ್ತುವಾರಿಯೂ ಆಗಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಕಂದಾಯ ಸಚಿವ ಆರ್. ಅಶೋಕ ಅವರೊಂದಿಗೆ,ಖಾಸಗಿ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರೊಂದಿಗೆ ಗುರುವಾರ ಸಭೆ ನಡೆಸಿದರು.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ನಿತ್ಯ ಎಷ್ಟು ರೋಗಿಗಳು ದಾಖಲಾಗುತ್ತಾರೆ, ಬಿಡುಗಡೆಯಾಗುತ್ತಾರೆ ಎಂಬ ಮಾಹಿತಿ ಸಿಗುತ್ತಿರಲಿಲ್ಲ. ಕಟ್ಟುನಿಟ್ಟಿನ ಸೂಚನೆ ಬಳಿಕ ಆಮ್ಲಜನಕ ಸೌಲಭ್ಯ ಇರುವ, ಎಚ್‌ಡಿಯು, ವೆಂಟಿಲೇಟರ್ ಸೌಲಭ್ಯದ ಹಾಸಿಗೆಗಳು ಸೇರಿ 1,035 ಹಾಸಿಗೆಗಳು ಸರ್ಕಾರದ ಸುಪರ್ದಿಗೆ ಲಭಿಸಿವೆ' ಎಂದರು.

'ಈ ಬಗ್ಗೆ ನಿಗಾ ವಹಿಸಲು ಖಾಸಗಿ ಆಸ್ಪತ್ರೆಗೆ ಒಬ್ಬ ಕೆಎಎಸ್ ಅಧಿಕಾರಿಯನ್ನು ನೇಮಿಸಲಾಗುವುದು. ಐದು ಆಸ್ಪತ್ರೆಗಳಿಗೆ ಒಬ್ಬರಂತೆ ಹಿರಿಯ ಅಧಿಕಾರಿ ನೇಮಿಸಿ, ಹಾಸಿಗೆಗಳ ಸಮರ್ಪಕ ಬಳಕೆಗೆ ಒತ್ತು ನೀಡಲಾಗುವುದು' ಎಂದು ವಿವರಿಸಿದರು.

'ಕೋವಿಡ್ ಸೇವೆಗೆ ಬಳಸಿಕೊಳ್ಳುವ ಸ್ನಾತಕೋತ್ತರ, ನರ್ಸಿಂಗ್ ಮತ್ತು ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಗೌರವಧನ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ಆದೇಶ ಹೊರಡಿಸಲಾಗುವುದು' ಎಂದರು.

ಕೋವಿಡ್ ಸಾವು: ಶವ ಅದಲು ಬದಲು

ಚಿತ್ರದುರ್ಗ: ಇಲ್ಲಿನ ತುರುವನೂರು ರಸ್ತೆ ಮಾರ್ಗದ ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆಗೆ ಸ್ಪಂದಿಸದೇ ಇಬ್ಬರು ಗುರುವಾರ ಮೃತಪಟ್ಟಿದ್ದಾರೆ. ಆದರೆ, ಮೃತರ ಶವಗಳನ್ನು ಕುಟುಂಬದವರಿಗೆ ಹಸ್ತಾಂತರಿಸುವ ವೇಳೆ ಅದಲು ಬದಲಾಗಿದೆ.

ಚಿತ್ರದುರ್ಗ ನಗರದ 60 ವರ್ಷದ ವೃದ್ಧ ಹಾಗೂ ಹಿರಿಯೂರಿನ 35 ವರ್ಷದ ಯುವಕ ಕೋವಿಡ್ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು. ಯುವಕನ ಮೃತ ದೇಹದ ಬದಲು ವೃದ್ಧನ ಮೃತ ದೇಹವನ್ನು ಕುಟುಂಬದವರಿಗೆ ನೀಡಲಾಗಿತ್ತು.

ಆಸ್ಪತ್ರೆಯ ಸಿಬ್ಬಂದಿಯ ಎಡವಟ್ಟಿನಿಂದಾಗಿ ವೃದ್ಧನ ಶವವನ್ನೇ ಹಿರಿಯೂರಿಗೆ ಒಯ್ಯಲಾಗಿತ್ತು. ಅಂತ್ಯಕ್ರಿಯೆ ವೇಳೆ ಕೊನೆ ಕ್ಷಣದಲ್ಲಿ ಮುಖ ನೋಡಲು ಮುಂದಾದಾಗ ಲೋಪ ಗೊತ್ತಾಗಿದೆ. ಕೂಡಲೇ ಕುಟುಂಬದವರು ಆಸ್ಪತ್ರೆಗೆ ಬಂದಿದ್ದಾರೆ. ಆಸ್ಪತ್ರೆಯಲ್ಲಿ ಕೆಲ ಕಾಲ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಹಾಗೂ ಆಸ್ಪತ್ರೆ ವೈದ್ಯಾಧಿಕಾರಿಗಳು ವಾತಾವರಣ ತಿಳಿಗೊಳಿಸಿದರು. ಮರಳಿ ಶವವನ್ನು ಕುಟುಂಬಸ್ಥರಿಗೆ ಆಂಬುಲೆನ್ಸ್ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಇಬ್ಬರ ಶವ ಅಕ್ಕಪಕ್ಕದಲ್ಲಿ ಇದ್ದಿದ್ದರಿಂದಾಗಿ ಈ ರೀತಿಯಾಗಿದೆ ಎಂದು ಸಿಬ್ಬಂದಿ ಸ್ಪಷ್ಟನೆ ನೀಡಿದ್ದಾರೆ.

ನಿಧನ ವಾರ್ತೆ

ಸಾಹಿತಿ ಡಾ. ಭಾಸ್ಕರ್ ಮಯ್ಯ



ಉಡುಪಿ: ವೈಚಾರಿಕ ಸಾಹಿತ್ಯದ ಮೇರು ಕೊಂಡಿಯಾಗಿದ್ದ ಡಾ.ಜಿ. ಭಾಸ್ಕರ್ ಮಯ್ಯ (70) ಗುರುವಾರ ಬೆಳಗಿನಜಾವ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಈಚೆಗೆ ಅವರಿಗೆ ಕೋವಿಡ್ ತಗುಲಿದ್ದು, ಸಾಲಿಗ್ರಾಮದ ಪ್ರಣವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮನೆಯ ಬಳಿಯೇ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹಿಂದಿ ಸಾಹಿತ್ಯ ಅಧ್ಯಯನದಲ್ಲಿ ತೊಡಗಿಕೊಂಡಿದ್ದ ಭಾಸ್ಕರ್ ಮಯ್ಯ ಅವರು 2004ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದರು.

ತೇಜಸ್ವಿ ನೆರವಿಗೆ ನಿಂತ ಸಂತೋಷ್

ಪ್ರಜಾವಾಣಿ ವಾರ್ತೆ



ಸಂತೋಷ್

ಬೆಂಗಳೂರು: ಹಾಸಿಗೆ ಬ್ಲಾಕಿಂಗ್ ದಂಧೆಗೆ ಕೋಮು ಸ್ವರೂಪ ನೀಡಿದ ಬೆನ್ನಲ್ಲೇ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಸಂಸದ ತೇಜಸ್ವಿ ಸೂರ್ಯ ನೆರವಿಗೆ ಧಾವಿಸಿದ್ದಾರೆ.

ಗುರುವಾರ ಟ್ವೀಟ್ ಮಾಡಿರುವ ಸಂತೋಷ್, 'ತೇಜಸ್ವಿ ಸೂರ್ಯ ಆಸ್ಪತ್ರೆಗಳ ಹಾಸಿಗೆ ಬುಕ್ಕಿಂಗ್ ಹಗರಣ ಬಯಲಿಗೆಳೆದು ಬಳಿಕ ಎಲ್ಲರೂ ಕ್ಷಣ ನಿಶ್ಯಬ್ದರಾದರು. ಒಂದೇ ಸಮುದಾಯದವರ ಹೆಸರು ಇದ್ದುದರಿಂದ ಎಲ್ಲರೂ ಕೂಗಾಡುತ್ತಿದ್ದಾರೆ. ಅವರ ಜಾತ್ಯತೀತತೆ ಅಪಾಯದಲ್ಲಿದೆ. ಕಾಂಗ್ರೆಸ್ ನಾಯಕರ ಚಿಂತನೆ ಮತ್ತು ಕ್ರಿಯೆ ದಿವಾಳಿಯಾಗಿದೆ' ಎಂದಿದ್ದಾರೆ.

ತೇಜಸ್ವಿ ಸೂರ್ಯ ವಿರುದ್ಧ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸುತ್ತಿದ್ದರೆ, ಪಕ್ಷ ಮತ್ತು ಸರ್ಕಾರದ ಪ್ರಮುಖರು ಮೌನ ವಹಿಸಿದ್ದಾರೆ. ತಮ್ಮ ನೆಚ್ಚಿನ ಹುಡುಗನ ಮೇಲೆ ದಾಳಿ ನಡೆದರೂ ಸಿ.ಎಂ ಸೇರಿ ಎಲ್ಲರೂ ಸುಮ್ಮನಿರುವುದು ಸಂತೋಷ್ ಬೇಸರಕ್ಕೆ ಕಾರಣವಾಗಿದೆ. ಹೀಗಾಗಿ, ಅವರು ಟ್ವೀಟ್ ಮಾಡಿ ಬೆಂಬಲಕ್ಕೆ ನಿಂತಿದ್ದಾರೆ ಎಂದು ಹೇಳಲಾಗುತ್ತಿದೆ.

'ಹಾಸಿಗೆ ಹಗರಣ ಬಯಲಿಗೆಳೆದದ್ದು ಸರಿ. ಆದರೆ, ಅಲ್ಲಿ ನಿರ್ದಿಷ್ಟ ಸಮುದಾಯಕ್ಕೆ ಸೇರಿದವರ ಹೆಸರುಗಳನ್ನು ಹೇಳಿ ಹಗರಣದ ಗಂಭೀರತೆ ಹಾಳು ಮಾಡಿದರು. ಇದರಿಂದ ವಿರೋಧಪಕ್ಷಗಳಿಗೆ ಅಸ್ತ್ರ ಕೊಟ್ಟಂತೆ ಆಗಿದೆ. ಹಗರಣ ಕುರಿತು ಯಾರ ಮೇಲೂ ಬೊಟ್ಟು ಮಾಡದೇ ತನಿಖೆಗೆ ಮಾತ್ರ ಪಟ್ಟು ಹಿಡಿಯಬೇಕಿತ್ತು' ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಚಾಮರಾಜನಗರದ ದುರ್ಘಟನೆಗೆ ಸಂಬಂಧಿಸಿ ಸಿ.ಟಿ.ರವಿ ಅವರ ಇತ್ತೀಚಿನ ಹೇಳಿಕೆ ಮತ್ತು ಹಾಸಿಗೆ ಬ್ಲಾಕಿಂಗ್ ಹಗರಣವನ್ನು ತೇಜಸ್ವಿ ಸೂರ್ಯ ಬಯಲು ಮಾಡಿದ ಬಳಿಕ, ತಮ್ಮ ಆಡಳಿತ ದುರ್ಬಲ ಎಂಬುದಾಗಿ ಬಿಂಬಿಸಲು ಸಂತೋಷ್ ಬಣ ಹೊರಟಂತಿದೆ ಎಂಬ ಅಸಮಾಧಾನ ಯಡಿಯೂರಪ್ಪ ಅವರಲ್ಲಿ ಮೂಡಿದೆ ಎಂದು ಮೂಲಗಳು ಹೇಳಿವೆ.

ಜಾತಿ-ಧರ್ಮ ನೋಡುವುದು ಬಿಡಿ: ಜಮೀರ್



ಜಮೀರ್ ಅಹ್ಮದ್ ಖಾನ್

'ಹಾಸಿಗೆ ಬ್ಲಾಕ್ ಪ್ರಕರಣ ಬಯಲಿಗೆಳೆದ ಸಂಸದ ತೇಜಸ್ವಿ ಸೂರ್ಯ, 205 ಸಿಬ್ಬಂದಿಯಲ್ಲಿ ಕೇವಲ 17 ಮಂದಿ ಮುಸ್ಲಿಂ ಸಿಬ್ಬಂದಿ ಹೆಸರನ್ನಷ್ಟೇ ಉಲ್ಲೇಖಿಸಿರುವುದು ಎಷ್ಟು ಸರಿ' ಎಂದು ಪ್ರಶ್ನಿಸಿ ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಕೆಲಹೊತ್ತು ಭಾವೋದ್ವೇಗಕ್ಕೆ ಒಳಗಾದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ರಂಜಾನ್ ಸಮಯದಲ್ಲಿ ಹೀಗೆಲ್ಲಾ ಮಾಡುತ್ತೀರಲ್ಲ, ನಿಮಗೆ ಒಳ್ಳೆಯದಾಗುತ್ತಾ' ಎಂದೂ ತೇಜಸ್ವಿ ಸೂರ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ನೀವು ಸಂಸದರಾಗಿರುವ ಕ್ಷೇತ್ರದಲ್ಲಿ ಈ ಹಿಂದೆ ಕೋವಿಡ್‌ನಿಂದ ಮೃತಪಟ್ಟವರನ್ನು ಹಿಂದೂ, ಮುಸ್ಲಿಂ ಎಂದು ನೋಡದೆ ನಾವು ಅಂತ್ಯಸಂಸ್ಕಾರ ಮಾಡಿದ್ದೇವೆ. ಆಗ ನೀವು ಎಲ್ಲಿ ಹೋಗಿದ್ರಿ. ನಾವು ಧರ್ಮ, ಜಾತಿ ಕೇಳಿ ಅಂತ್ಯಸಂಸ್ಕಾರ ಮಾಡಿಲ್ಲ. ಜಾತಿ-ಧರ್ಮ ನೋಡುವುದು ಬಿಡಿ. ಇದೇ ಕೊನೆ. ಈ ರೀತಿ ಮಾತನಾಡಬೇಡಿ' ಎಂದರು.

'ಹಾಸಿಗೆ ದಂಧೆಯಲ್ಲಿ ಶಾಸಕ ಸತೀಶ್ ರೆಡ್ಡಿ ಅವರ ಆಪ್ತ ಸಹಾಯಕ ಕೂಡಾ ಶಾಮೀಲಾಗಿದ್ದಾರೆ. ಇದಕ್ಕೆ ಏನು ಹೇಳುತ್ತೀರಿ. ಆ 17 ಮಂದಿಯನ್ನು ಕೆಲಸದಿಂದ ತೆಗೆದು ಹಾಕಿದರೆ ಅವರಿಗೆ ನಾನು ಕೆಲಸ ಕೊಡುತ್ತೇನೆ' ಎಂದರು.

'ನಿಮ್ಮ ಸರ್ಕಾರದ ಆಡಳಿತದಲ್ಲೇ ಈ ದಂಧೆ ನಡೆದಿದೆ. ಹಾಗಾದರೆ ನೀವು ಮುಖ್ಯಮಂತ್ರಿಯಿಂದ ರಾಜೀನಾಮೆ ಕೇಳಬೇಕಲ್ಲವೇ. ಅಕ್ರಮದಲ್ಲಿ ಭಾಗಿಯಾದ ಎಲ್ಲ ಮುಸ್ಲಿಂ ಯುವಕರ ಹೆಸರು ಹೇಳಿದ್ದೀರಿ. ಏಕೆ ಬೇರೆ ಯಾರ ಹೆಸರೂ ಸಿಕ್ಕಿಲ್ಲವೇ. ಈ ರೀತಿಯ ಕೀಳುಮಟ್ಟದ ಪ್ರಚಾರ ಬೇಕೇ' ಎಂದು ಕುಟುಕಿದರು.

'ಐದು ವರ್ಷ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಂದ ಸರ್ಕಾರ ಹೇಗೆ ನಡೆಸಬೇಕು ಎಂದು ಸಲಹೆ ತೆಗೆದುಕೊಳ್ಳಿ. ಇಂಥ ಸಂಕಷ್ಟದ ಸಮಯದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುತ್ತಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ' ಎಂದರು.

'ಕೋಮು ದ್ವೇಷ ಪ್ರಚೋದಿಸುವವರನ್ನು ಬಂಧಿಸಿ'

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಹಾಸಿಗೆ ಬ್ಲಾಕ್ ದಂಧೆ ಬಯಲಿಗೆಳೆದ ಸಂಸದ ತೇಜಸ್ವಿ ಸೂರ್ಯ ಮತ್ತು ಬಿಜೆಪಿ ಶಾಸಕರು, ಒಂದೇ ಕೋಮಿನ 17 ಮಂದಿಯ ಹೆಸರು ಓದಿದರು. ಹೀಗೇ ಕೋಮು ದ್ವೇಷ, ಪ್ರಚೋದನೆ ಹೇಳಿಕೆ ನೀಡುವವರನ್ನು ಮುಲಾಜಿಲ್ಲದೆ ಬಂಧಿಸಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗುರುವಾರ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತೇಜಸ್ವಿ ಸೂರ್ಯ ಓದಿಕೊಂಡಿರುವವನು. ಒಳ್ಳೆಯ ಕೆಲಸ ಮಾಡಿದ್ದಾನೆ ಎಂದು ಕೊಂಡಿದ್ದೆ. ಮುಖ್ಯಮಂತ್ರಿ ಎಳೆಸನ್ನು ಕರೆದುಕೊಂಡು ಬಂದು ಇಟ್ಟುಕೊಂಡಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಬೆಂಗಳೂರಿನಲ್ಲಿರುವ ಮಂತ್ರಿಗಳೇ, ನಿಮ್ಮ ಸಂಸದರು ಮಾತು ಸರಿಯೇ. ಬಿಬಿಎಂಪಿ ಅಧಿಕಾರಿಗಳು ನಿಮ್ಮ ಹಸ್ತಕ್ಷೇಪದಿಂದ ಕೆಲಸ ಮಾಡಲು ಹೆದರುತ್ತಿದ್ದಾರೆ. ನಿಮ್ಮ ಆಂತರಿಕ ಸಂಘರ್ಷಕ್ಕೆ ರಾಜ್ಯದ ಮಾನ ಹರಾಜು ಹಾಕುತ್ತಿದ್ದೀರಾ' ಎಂದು ಪ್ರಶ್ನಿಸಿದರು.

'ಖಾಸಗಿ ಆಸ್ಪತ್ರೆಗೆ ಹೋದವರು ಬದುಕಿ ಬರುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ಹೋದವರು ಯಾಕೆ ಸಾಯುತ್ತಿದ್ದಾರೆ. ಅವರಿಗೆ ಔಷಧಿ ಸಿಗುತ್ತಿಲ್ಲ. ಹೀಗಾಗಿ, ಸರ್ಕಾರ ಡೆತ್ ಆಡಿಟ್ ಮಾಡಬೇಕು' ಎಂದು ಆಗ್ರಹಿಸಿದರು.

'ಚಾಮರಾಜನಗರ ದುರಂತದ ವಿಚಾರಣೆಗೆ ಇಬ್ಬರು ನಿವೃತ್ತ ನ್ಯಾಯಮೂರ್ತಿಗಳ ಸಮಿತಿಯನ್ನು ಹೈಕೋರ್ಟ್ ರಚಿಸಿದೆ. ಸರ್ಕಾರದ ಮೇಲೆ ಹೈಕೋರ್ಟ್ ವಿಶ್ವಾಸ ಕಳೆದುಕೊಂಡಿರುವುದನ್ನು ಇದು ತೋರಿಸುತ್ತದೆ' ಎಂದೂ ಅಭಿಪ್ರಾಯಪಟ್ಟರು.

ರಾಯಬಾಗ: ಮೂವರು ಸಾವು ಆಮ್ಲಜನಕ ಕೊರತೆ ಆರೋಪ

ಪ್ರಜಾವಾಣಿ ವಾರ್ತೆ

ರಾಯಬಾಗ (ಬೆಳಗಾವಿ ಜಿಲ್ಲೆ): ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಕೋವಿಡ್ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಟ್ಟಣ ಪಂಚಾಯ್ತಿ ಸದಸ್ಯೆ ಕಮಲಾ ಮಹಾದೇವ ತರಾಳ (65) ಸೇರಿ ಮೂವರು ಗುರುವಾರ ಸಾವಿಗೀಡಾಗಿದ್ದಾರೆ.

'ಸಾವಿಗೆ ಆಮ್ಲಜನಕ ಕೊರತೆಯೇ ಕಾರಣ' ಎಂದು ಆರೋಪಿಸಿ, ರೋಗಿಗಳ ಕುಟುಂಬದವರು ಆಸ್ಪತ್ರೆ ಆವರಣದಲ್ಲಿ ಪ್ರತಿಭಟಿಸಿದರು. ವೈದ್ಯರು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

'ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗುತ್ತಿಲ್ಲ. ಮೂವರ ಸಾವಿಗೆ ನೀವೇ ಹೊಣೆ' ಎಂದು ದೂರಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಶ್ರೀಮಂತ ಎಸ್. ಬಾನೆ ಅವರಿಗೆ ಮುತ್ತಿಗೆ ಹಾಕಿ ಹಲ್ಲೆಗೆ ಯತ್ನಿಸಿದರು. ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

'ಕೋವಿಡ್ ನಿಯಂತ್ರಿಸುವಲ್ಲಿ ಹಾಗೂ ಆಮ್ಲಜನಕ ಪೂರೈಸುವಲ್ಲಿ ತಾಲ್ಲೂಕು ಆಡಳಿತ ವಿಫಲವಾಗಿದೆ' ಎಂದು ಕಮಲಾ ಅವರ ಪುತ್ರ ಮತ್ತು ಪಟ್ಟಣ ಪಂಚಾಯ್ತಿ ಮಾಜಿ ಸದಸ್ಯ ರವಿ ತರಾಳ ಆರೋಪಿಸಿದರು.

'ಟಿಎಚ್‌ಒ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆಸ್ಪತ್ರೆಯ ಔಷಧಗಳನ್ನು ಪತ್ನಿಯ ಖಾಸಗಿ ಆಸ್ಪತ್ರೆಗೆ ರವಾನಿಸುತ್ತಿದ್ದಾರೆ. ವಜಾ ಮಾಡಿ, ಇಲ್ಲವೇ ಬೇರೆ ಕಡೆಗೆ ವರ್ಗಾಯಿಸಿ' ಎಂದು ಪಟ್ಟಣ ಪಂಚಾಯ್ತಿ ಸದಸ್ಯ ಹಣಮಂತ ಸಾನೆ ಒತ್ತಾಯಿಸಿದರು. ಪ್ರತಿಕ್ರಿಯೆಗೆ ಟಿಎಚ್‌ಒ ಲಭ್ಯರಾಗಲಿಲ್ಲ.

ತಕ್ಷಣದಿಂದಲೇ ಕಾಮಗಾರಿ ಆರಂಭಿಸುವಂತೆ ಆದೇಶ

40 ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹತ್ತು ಜಿಲ್ಲಾ ಆಸ್ಪತ್ರೆಗಳು ಮತ್ತು 30 ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಥಳದಲ್ಲೇ ಆಮ್ಲಜನಕ ಉತ್ಪಾದಿಸುವ ಘಟಕಗಳನ್ನು ಸ್ಥಾಪನೆಗೆ ತಕ್ಷಣದಿಂದಲೇ ಕಾಮಗಾರಿ ಆರಂಭಿಸುವಂತೆ ಆರೋಗ್ಯ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರತಿ ನಿಮಿಷಕ್ಕೆ 500 ಲೀಟರ್ ಆಮ್ಲಜನಕ ಉತ್ಪಾದನಾ ಸಾಮರ್ಥ್ಯದ ಘಟಕಗಳು ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಪ್ರತಿ ನಿಮಿಷಕ್ಕೆ 390 ಲೀಟರ್ ಆಮ್ಲಜನಕ ಉತ್ಪಾದನಾ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವಕ್ಕೆ ಬುಧವಾರ ಅನುಮೋದನೆ ನೀಡಲಾಗಿದೆ. ಎಲ್ಲ ಕಡೆಗಳಲ್ಲೂ ತುರ್ತಾಗಿ ಕಾಮಗಾರಿ ಆರಂಭಿಸುವಂತೆ ಆರೋಗ್ಯ ಇಲಾಖೆಯ ಮುಖ್ಯ ಎಂಜನಿಯರ್ ನಿರ್ದೇಶನ ನೀಡಿದ್ದಾರೆ.

11 ಘಟಕಗಳ ಕಾಮಗಾರಿಯನ್ನು ಮೇ 15ರೊಳಗೆ ಮತ್ತು 29 ಘಟಕಗಳ ಕಾಮಗಾರಿಯನ್ನು ಜೂನ್ 31ರ ಒಳಗಾಗಿ ಪೂರ್ಣಗೊಳಿಸುವಂತೆ ಗಡುವು ವಿಧಿಸಲಾಗಿದೆ.

ಕಲಬುರ್ಗಿ, ಬೆಂಗಳೂರು ನಗರ, ಬೀದರ್, ಮೈಸೂರು, ಉತ್ತರ ಕನ್ನಡ, ಶಿವಮೊಗ್ಗ, ಚಿತ್ರದುರ್ಗ, ಮಂಡ್ಯ, ಬಾಗಲಕೋಟೆ, ಧಾರವಾಡ, ಬೆಳಗಾವಿ, ದಕ್ಷಿಣ ಕನ್ನಡ, ಗದಗ, ಬಳ್ಳಾರಿ, ಕೊಡಗು, ಹಾಸನ, ಕೋಲಾರ, ಹಾವೇರಿ, ತುಮಕೂರು, ಉಡುಪಿ, ವಿಜಯಪುರ ಜಿಲ್ಲೆಗಳಲ್ಲಿನ ವಿವಿಧ ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಥಳದಲ್ಲೇ ಆಮ್ಲಜನಕ ಉತ್ಪಾದಿಸುವ ಘಟಕ ಸ್ಥಾಪಿಸಲಾಗುತ್ತಿದೆ.

₹ 360 ಕೋಟಿ ಸಾಲ ಆಮಿಷ

'ಬಂಗಾರದ ಮನುಷ್ಯ' ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಟ್ಯಂತರ ರೂಪಾಯಿ ಸಾಲ ಕೊಡಿಸುವ ಆಮಿಷವೊಡ್ಡಿ ಸೇವಾ ಶುಲ್ಕದ ಹೆಸರಿನಲ್ಲಿ ಹಣಪಡೆದು ವಂಚಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಜಾಲದ ಪ್ರಮುಖ ಆರೋಪಿ ಎ.ಹರಿ ನಾಡಾರ್ ಅಲಿಯಾಸ್ ಹರಿ ಗೋಪಾಲಕೃಷ್ಣ ನಾಡಾರ್ ಎಂಬಾತನನ್ನು ಬಂಧಿಸಲಾಗಿದೆ.

'ಕೇರಳದ ನಾಡಾರ್, ತನ್ನದೇ ರಾಜ್ಯದ ರಂಜಿತ್ ಪಣಿಕ್ಕರ್ ಹಾಗೂ ಇತರರ ಜೊತೆ ಸೇರಿ ಗ್ಯಾಂಗ್ ಕಟ್ಟಿಕೊಂಡಿದ್ದ. ಉದ್ಯಮಿಗಳಿಗೆ ಸಾಲದ ಆಮಿಷವೊಡ್ಡಿ ಕೋಟ್ಯಂತರ ರೂಪಾಯಿ ವಂಚಿಸಿದ್ದ. ಆತನ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ಹರಿ ನಾಡಾರ್ ನಿತ್ಯವೂ ಮೈ ಮೇಲೆ ಚಿನ್ನಾಭರಣ ಹಾಕಿಕೊಂಡು ಓಡಾಡುತ್ತಿದ್ದ. ಸ್ಥಳೀಯರು ಆತನಿಗೆ 'ಬಂಗಾರದ ಮನುಷ್ಯ' ಎನ್ನುತ್ತಿದ್ದರು.



ಹರಿ ನಾಡಾರ್

ಉದ್ಯಮಿಗಳನ್ನು ಭೇಟಿಯಾಗುವುದಕ್ಕೆ ಹೋಗುವಾಗಲೂ ಆರೋಪಿ ಚಿನ್ನದ ಸರ, ಉಂಗುರ ಸೇರಿ ಹಲವು ಆಭರಣ ಹಾಕಿಕೊಳ್ಳುತ್ತಿದ್ದ. ಆತನ ವೇಷ ನೋಡಿ ಉದ್ಯಮಿಗಳು ನಂಬುತ್ತಿದ್ದರು' ಎಂದು ಹೇಳಿದರು.

'ಬಂಧಿತನಿಂದ ₹ 2 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ₹8.75 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

₹ 7.20 ಕೋಟಿ ಪಡೆದು ವಂಚನೆ: 'ನಗರದ ಉದ್ಯಮಿ ವೆಂಕಟರಮಣ ಶಾಸ್ತ್ರಿ ಅವರನ್ನು ಸಂಪರ್ಕಿಸಿದ್ದ ಹರಿ ನಾಡಾರ್, ₹ 360 ಕೋಟಿ ಸಾಲ ಕೊಡಿಸುವ ಆಮಿಷವೊಡ್ಡಿದ್ದ. ಆ ಬಗ್ಗೆ ಚರ್ಚಿಸಲು ಹಲವು ಬಾರಿ ಐಷಾರಾಮಿ ಹೋಟೆಲ್‌ನಲ್ಲಿ ಉದ್ಯಮಿಯನ್ನು ಭೇಟಿಯಾಗಿದ್ದ' ಎಂದೂ ಪೊಲೀಸರು ತಿಳಿಸಿದರು.

'ಸಾಲಕ್ಕೆ ಸೇವಾಶುಲ್ಕವೆಂದು ಹೇಳಿ ₹ 7.20 ಕೋಟಿ ಪಡೆದಿದ್ದ. ನಂತರ ಸಾಲ ಕೊಡಿಸದೇ ನಾಪತ್ತೆಯಾಗಿದ್ದ. ನೊಂದ ಉದ್ಯಮಿ ಠಾಣೆಗೆ ದೂರು ನೀಡಿದ್ದರು. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು' ಎಂದೂ ಮಾಹಿತಿ ನೀಡಿದರು.

ಅಂತರರಾಜ್ಯ ಗ್ಯಾಂಗ್: 'ಆರೋಪಿಗಳು ಕರ್ನಾಟಕ ಮಾತ್ರವಲ್ಲದೇ ಆಂಧ್ರ ಪ್ರದೇಶ, ಕೇರಳ, ತೆಲಂಗಾಣ, ತಮಿಳು ನಾಡು, ಮಹಾರಾಷ್ಟ್ರ, ಗುಜರಾತ್ ಹಾಗೂ ಇತರೆ ರಾಜ್ಯಗಳ ಉದ್ಯಮಿಗಳಿಗೂ ವಂಚಿಸಿದ್ದಾರೆ' ಎಂದೂ ಪೊಲೀಸರು ಹೇಳಿದರು.

'ವಂಚನೆಯಿಂದ ಬಂದ ಹಣದಲ್ಲಿ ಆರೋಪಿ ಚಿನ್ನಾಭರಣ ಖರೀದಿಸಿದ್ದು, ಪರಿಚಯಸ್ಥರಿಗೂ ಹಣ ವರ್ಗಾಯಿಸಿರುವುದು ಗೊತ್ತಾಗಿದೆ. ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಯುತ್ತಿದೆ. ಇತರೆ ರಾಜ್ಯಗಳ ಪೊಲೀಸರಿಗೂ ಮಾಹಿತಿ ನೀಡಲಾಗಿದೆ' ಎಂದೂ ತಿಳಿಸಿದರು.



ಜಗ್ಗೇಶ್



ಪ್ರಣೀತಾ



ಸಂಯುಕ್ತಾ ಹೆಗ್ಡೆ



ರಾಗಿಣಿ

ಸೆಲೆಬ್ರಿಟಿಗಳ ಸಹಾಯಹಸ್ತ

ಅಭಿಲಾಷ್ ಪಿ.ಎಸ್.

ಕಳೆದ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರ ಸಹಾಯಕ್ಕೆ ನಿಂತಿದ್ದ ಬಹುಭಾಷಾ ನಟ ಸೋನು ಸೂದ್ ಸಿನಿಮಾ ರಂಗಕ್ಕೇ ಮಾದರಿಯಾಗಿದ್ದರು. ಈ ವರ್ಷ ರಾಜ್ಯ ಸರ್ಕಾರ ಹೇರಿದ ಕೊರೊನಾ ಕರ್ಫ್ಯೂ ಕಾರಣದಿಂದಾಗಿ ಚಿತ್ರರಂಗ ಸ್ತಬ್ಧವಾಗಿದೆ. ಚಂದನವನದ ಕೆಲ ನಟ, ನಟಿಯರು ಮಾತ್ರ ಕೊರೊನಾದ ಈ ಸಂಕಷ್ಟದ ಕಾಲದಲ್ಲಿ ಜನರ ನೆರವಿಗೆ ಧಾವಿಸಲು ಮತ್ತಷ್ಟು ಸಕ್ರಿಯರಾಗಿದ್ದಾರೆ. ಸಾಮಾಜಿಕ ಜಾಲತಾಣದ ವೇದಿಕೆಯನ್ನು ಸೂಕ್ತವಾಗಿ ಬಳಸಿಕೊಂಡು, ನೆರವು ಕೇಳಿ ಆಗಮಿಸಿದವರಿಗೆ ತಮ್ಮ ಸ್ನೇಹಿತರು, ಅಭಿಮಾನಿಗಳ ಸಹಾಯದಿಂದ ಸಮಯಕ್ಕೆ ಸರಿಯಾಗಿ ಔಷಧಿ, ಬೆಡ್ ಮುಂತಾದ ವ್ಯವಸ್ಥೆ ಕಲ್ಪಿಸಿ ಜನಪರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಹತ್ತಿರದ ಸ್ನೇಹಿತರನ್ನು, ಸಹೋದ್ಯೋಗಿಗಳನ್ನು, ಕುಟುಂಬ ಸದಸ್ಯರನ್ನು ಕೋವಿಡ್‌ನಿಂದ ಕಳೆದುಕೊಂಡ ನೋವು ಹಾಗೂ ಕುಟುಂಬದ ಸದಸ್ಯರೇ ಕೋವಿಡ್‌ನಿಂದ ಬಳಲುತ್ತಿರುವುದರ ಸಂಕಷ್ಟದ ನಡುವೆಯೂ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿ ಅರಿತು ಈ ಕಲಾವಿದರು ಜನಸೇವೆಗೆ ಮುಂದಾಗಿರುವುದಕ್ಕೆ ಅಭಿಮಾನಿಗಳೂ ಮೆಚ್ಚಿಕೊಂಡಿದ್ದಾರೆ.

> ಸಂಕಷ್ಟದ ಈ ಕಾಲದಲ್ಲಿ ಚಂದನವನದ ಕೆಲ ನಟ, ನಟಿಯರು ಜನರ ನೆರವಿಗೆ ಧಾವಿಸುತ್ತಿದ್ದಾರೆ. ಸಾಮಾಜಿಕ ಜಾಲತಾಣದ ವೇದಿಕೆಯನ್ನು ಸೂಕ್ತವಾಗಿ ಬಳಸಿಕೊಂಡು ಔಷಧಿ, ಆಮ್ಲಜನಕ, ಬೆಡ್ ಮುಂತಾದ ವ್ಯವಸ್ಥೆ ಕಲ್ಪಿಸಿ ತಮ್ಮ ಹೊಣೆಗಾರಿಕೆ ಪ್ರದರ್ಶಿಸುತ್ತಿದ್ದಾರೆ...

₹1 ಲಕ್ಷ ನೀಡಿದ ನಟಿ ಪ್ರಣೀತಾ

ಲಾಜಿಕಲ್ ಇಂಡಿಯನ್ ಸಂಸ್ಥೆಯ ಜೊತೆ ಕೈಜೋಡಿಸಿರುವ ಬಹುಭಾಷಾ ನಟಿ ಪ್ರಣೀತಾ ಸುಭಾಷ್ ನಿಧಿ ಸಂಗ್ರಹಕ್ಕೆ ಮುಂದಾಗಿದ್ದಾರೆ. ಆಮ್ಲಜನಕ ಕಾನ್ಸಂಟ್ರೇಟರ್ ಖರೀದಿಸಲು ಮೊದಲಿಗೆ ತಾವೇ ₹ 1ಲಕ್ಷವನ್ನು ನೀಡಿದ್ದಾರೆ. ಈ ಕುರಿತು 'ಸಿನಿಮಾ ಪುರವಣಿ' ಜೊತೆಗೆ ಮಾತನಾಡಿದ ಅವರು, 'ಕೋವಿಡ್ ಎರಡನೇ ಅಲೆ ಅತ್ಯಂತ ಗಂಭೀರವಾಗಿದೆ. ಹಲವೆಡೆ ಆಮ್ಲಜನಕದ ಕೊರತೆ ಎದುರಾಗಿದ್ದು, ಈ ಕಾರಣದಿಂದ ನಿಧಿ ಸಂಗ್ರಹ ಮಾಡಿ ಆಮ್ಲಜನಕ ಕಾನ್ಸಂಟ್ರೇಟರ್ ಖರೀದಿಗೆ ನಿರ್ಧರಿಸಿದ್ದೇವೆ' ಎಂದು ಹೇಳಿದರು.

'ಲಾಜಿಕಲ್ ಇಂಡಿಯನ್ ಅವರು ನಮಗೆ ನಿಧಿ ಸಂಗ್ರಹಿಸಲು ಅವರ ವೆಬ್‌ಸೈಟ್‌ನಲ್ಲಿ ಅವಕಾಶ ನೀಡಿದ್ದಾರೆ. ಈ ಕುರಿತು ನಾನು ಫೇಸ್‌ಬುಕ್‌ನಲ್ಲಿ ಕೇಳಿಕೊಂಡಾಗ ಜನರು ದೇಣಿಗೆ ನೀಡಲು ಮುಂದೆ ಬಂದಿದ್ದಾರೆ. ಈಗಾಗಲೇ ₹4–5 ಲಕ್ಷ ಸಂಗ್ರಹವಾಗಿದೆ. ಒಂದೊಂದು ಕಾನ್ಸಂಟ್ರೇಟರ್ ಯಂತ್ರಕ್ಕೆ ₹50–60 ಸಾವಿರವಾಗುತ್ತದೆ. ಈ ಯಂತ್ರದ ಅವಶ್ಯಕತೆ ಇದೆ ಎಂದು ಉತ್ತರಾಖಂಡದ ಆಸ್ಪತ್ರೆಯಿಂದ ಮೊದಲು ಬೇಡಿಕೆ ಬಂದಿದೆ, ಅಲ್ಲಿಗೆ ಶೀಘ್ರವೇ ಕಳುಹಿಸಲಾಗುವುದು. ಯಾರು ಅರ್ಜಿ ಸಲ್ಲಿಸುತ್ತಾರೋ ಅವರಿಗೆ ಉಚಿತವಾಗಿ ನೀಡುತ್ತೇವೆ' ಎಂದು ತಿಳಿಸಿದರು.



ಪ್ಲಾಸ್ಮಾ ದಾನ ಮಾಡಿದ ಕಾವ್ಯಾ ಶಾಸ್ತ್ರಿ

ಆಮ್ಲಜನಕ ತಲುಪಿಸಿದ ನಟ ಜಗ್ಗೇಶ್

ಕೋವಿಡ್‌ನಿಂದಾಗಿ ತನ್ನ ತಮ್ಮ ಕೋಮಲ್ ಆರೋಗ್ಯ ಗಂಭೀರವಾಗಿದ್ದರೂ, ಕೋವಿಡ್‌ಗೆ ಬಾಲ್ಯ ಸ್ನೇಹಿತನನ್ನು ಕಳೆದುಕೊಂಡರೂ ಜನಸೇವೆಯನ್ನು ನಟ ಜಗ್ಗೇಶ್ ಅವರು ನಿಲ್ಲಿಸಲಿಲ್ಲ. ಇತ್ತೀಚೆಗೆ ಕೋವಿಡ್ ಸೋಂಕಿನಿಂದ ಬಳಲುತ್ತಿದ್ದ ನಾಗೇಂದ್ರ ಭಟ್ ಎನ್ನುವವರಿಗೆ ಆಮ್ಲಜನಕದ ಅವಶ್ಯಕತೆ ಇತ್ತು. ಈ ಸಂದರ್ಭದಲ್ಲಿ ಅವರ ಮಗಳು ಜಗ್ಗೇಶ್ ಅವರಿಗೆ ಕರೆಮಾಡಿ ಮನವಿ ಮಾಡಿದಾಗ, ಕೇವಲ ಅರ್ಧ ಗಂಟೆಯಲ್ಲಿ ನಾರಾಯಣ ಆಸ್ಪತ್ರೆಯಿಂದ ದೇವೇಗೌಡ ಪೆಟ್ರೋಲ್ ಬಂಕ್ ಬಳಿ ಇರುವ ಅವರ ಮನೆಗೆ ಜಗ್ಗೇಶ್ ಇದನ್ನು ತಲುಪಿಸಿದ್ದರು. 'ಅರ್ಧ ಗಂಟೆ ತಡವಾಗಿದ್ದರೆ ಅವರ ಪ್ರಾಣಕ್ಕೇ ತೊಂದರೆ ಆಗುತ್ತಿತ್ತು. ಅವರ ಪುಟ್ಟ ಮಗಳ ಮನವಿ ದೊಡ್ಡ ವಿಘ್ನ ತಪ್ಪಿಸಿತು' ಎಂದು ಜಗ್ಗೇಶ್ ಟ್ವೀಟ್ ಮಾಡಿದ್ದರು. ಹೀಗೆ ಕಳೆದ 20–25 ದಿನದಿಂದ ಖುದ್ದಾಗಿ ಜನಸೇವೆಯಲ್ಲಿ ನಟ ಜಗ್ಗೇಶ್ ತೊಡಗಿಸಿಕೊಂಡಿದ್ದಾರೆ.

ಕಾವ್ಯಾ ಶಾಸ್ತ್ರಿ ಪ್ಲಾಸ್ಮಾ ಜಾಗೃತಿ

ಕಳೆದ ನವೆಂಬರ್‌ನಲ್ಲಿ ಕೋವಿಡ್ ದೃಢಪಟ್ಟು ನಂತರ ಗುಣಮುಖರಾಗಿದ್ದ ನಟಿ ಕಾವ್ಯಾ ಶಾಸ್ತ್ರಿ ಇದೀಗ ಪ್ಲಾಸ್ಮಾ ದಾನ ಮಾಡುವ ಮುಖಾಂತರ ಇತರರಿಗೆ ಮಾದರಿಯಾಗಿದ್ದಾರೆ. ಜೊತೆಗೆ ತಮ್ಮ ಇನ್‌ಸ್ಟಾಗ್ರಾಂ ಖಾತೆಯ ಮುಖಾಂತರ ಪ್ಲಾಸ್ಮಾ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಅವರು, ಕೋವಿಡ್ ರೋಗಿಗಳಿಗೆ ಪ್ಲಾಸ್ಮಾದ ಅವಶ್ಯಕತೆ ಇದ್ದಲ್ಲಿ ಈ ಕುರಿತು ತಮ್ಮ ಖಾತೆಯಲ್ಲಿ ಮಾಹಿತಿ ಪೋಸ್ಟ್ ಮಾಡುವ ಮುಖಾಂತರ ನೆರವಾಗುತ್ತಿದ್ದಾರೆ. 'ಸಿನಿಮಾ ಪುರವಣಿ' ಜೊತೆಗೆ ಮಾತನಾಡಿದ ಕಾವ್ಯಾ, 'ಕೋವಿಡ್‌ನಿಂದ ಗುಣಮುಖ ಆದ ಕೂಡಲೇ ಪ್ಲಾಸ್ಮಾ ದಾನ ಮಾಡಲು ಸಾಧ್ಯವಾಗಿರಲಿಲ್ಲ. ರಕ್ತದಲ್ಲಿ ಬಿಳಿರಕ್ತಕಣಗಳ ಸಂಖ್ಯೆ ಆಗ ಕಡಿಮೆ ಇತ್ತು. ಇತ್ತೀಚೆಗೆ ಒಂದು ಪೋಸ್ಟ್‌ನಲ್ಲಿ ಪ್ಲಾಸ್ಮಾ ಬೇಕಿದೆ ಎನ್ನುವುದನ್ನು ನೋಡಿದ್ದೆ. ವೈದ್ಯರನ್ನು ಸಂಪರ್ಕಿಸಿ, ನಂತರದಲ್ಲಿ ನಾನು ಪ್ಲಾಸ್ಮಾ ದಾನ ಮಾಡಿದೆ. ಗುಣಮುಖರಾದ ಬಳಿಕ ಹಲವರು ಪ್ಲಾಸ್ಮಾ ದಾನ ಮಾಡಲು ಹಿಂಜರಿಯುತ್ತಿದ್ದಾರೆ. ಒಬ್ಬರಿಗೆ ಒಬ್ಬರು ಸಹಾಯ ಮಾಡಬೇಕು' ಎಂದರು.


ಸ್ಮಶಾನದಲ್ಲಿ ರಾಗಿಣಿ ನೆರವು

ನಟಿ ರಾಗಿಣಿ ದ್ವಿವೇದಿ ಕಳೆದ ಲಾಕ್‌ಡೌನ್ ಸಂದರ್ಭದಲ್ಲಿ ಹಲವು ನಿರಾಶ್ರಿತರಿಗೆ ನೆರವು ನೀಡಿದ್ದರು. ಇದೀಗ ಬೆಂಗಳೂರಿಗೆ ಕಲ್ಲಹಳ್ಳಿ, ಕಾಕ್ಸ್‌ಟೌನ್ ಸೇರಿದಂತೆ ಸುತ್ತಮುತ್ತಲಿನ ಕೆಲ ಸ್ಮಶಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ತಮ್ಮ ಜೆನ್‌ಎಕ್ಸ್ಟ್ ಚಾರಿಟೆಬಲ್ ಟ್ರಸ್ಟ್ ಸದಸ್ಯರ ಜೊತೆಗೂಡಿ ಆಹಾರ ಪದಾರ್ಥ ಕಿಟ್ ಹಂಚಿದ್ದಾರೆ. 'ಸ್ಮಶಾನದಲ್ಲಿದ್ದ ಸಂದರ್ಭದಲ್ಲಿ ಅಲ್ಲಿಗೆ ಬರುತ್ತಿದ್ದ ಮೃತದೇಹಗಳ ಸಂಖ್ಯೆಯನ್ನು ನೋಡಿ ಹೃದಯ ಕಲಕುವಂತಿತ್ತು. ನನ್ನ ಕುಟುಂಬದ ನಿಕಟ ಸದಸ್ಯರನ್ನೂ ನಾನು ಕಳೆದುಕೊಂಡಿದ್ದೇನೆ. ಅವರನ್ನು ನೋಡುವ ಭಾಗ್ಯವೂ ನನಗಿರಲಿಲ್ಲ. ಇಲ್ಲಿನ ಸಿಬ್ಬಂದಿ ಕೆಲಸ ಶ್ಲಾಘನೀಯ' ಎಂದಿದ್ದಾರೆ.

ತಂದೆ, ತಾಯಿಗೆ ಕೋವಿಡ್ ದೃಢಪಟ್ಟಿದ್ದರೂ ನಟಿ ಸಂಯುಕ್ತಾ ಹೆಗ್ಡೆ ಅವರೂ ಕುಟುಂಬದ ಸದಸ್ಯರ ಕಾಳಜಿಯ ಜೊತೆಗೆ ಜನರ ಸೇವೆಯನ್ನೂ ಮಾಡುತ್ತಿದ್ದಾರೆ. ಕೋವಿಡ್ ದೃಢಪಟ್ಟವರ ಆರೈಕೆ ಹೇಗೆ ಎನ್ನುವುದರಿಂದ ಹಿಡಿದು ಎಲ್ಲೆಲ್ಲಿ ಔಷಧಿ, ಆಮ್ಲಜನಕ ಲಭ್ಯವಿದೆ ಎನ್ನುವುದರ ಮಾಹಿತಿ, ಸಂಪರ್ಕ ಸಂಖ್ಯೆಯನ್ನೂ ಜನರಿಗೆ ನೀಡುತ್ತಿದ್ದಾರೆ. ಜನಸಾಮಾನ್ಯರ ನೆರವಿಗೆ ಮುಂದಾಗಿರುವ ನಟ ಅರ್ಜುನ್ ಗೌಡ ಆಂಬುಲೆನ್ಸ್ ಚಾಲಕರಾಗಿ ತಮ್ಮ ಕೈಲಾದ ನೆರವು ನೀಡುತ್ತಿದ್ದಾರೆ. ನಟಿ ಸಂಯುಕ್ತ ಹೊರನಾಡು ಅವರೂ ಹಲವರಿಗೆ ನೆರವಾಗಿದ್ದಾರೆ. ಇನ್ನೂ ಹಲವು ಕಲಾವಿದರು ಮುಂದಕ್ಕೆ ಕಾಣಿಸಿಕೊಳ್ಳದೆ ಜನರಿಗೆ ಸಹಾಯಹಸ್ತ ಚಾಚುತ್ತಿದ್ದಾರೆ. ❖

ಕಾನ್ ಚಿತ್ರೋತ್ಸವದಲ್ಲಿ

'ದೇವರ ಕನಸು'



ಸಿನಿ ಸಂಕ್ಷಿಪ್ತ

'ದೇವರ ಕನಸು' ಸಿನಿಮಾ ಪ್ರತಿಷ್ಠಿತ ಕಾನ್ ಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಮಿಲೇನಿಯಮ್ ಪ್ರೊಡಕ್ಷನ್ಸ್ ಲಾಂಛನದ ಅಡಿ ಸುರೇಶ್ ಲಕ್ಕೂರ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

12 ವರ್ಷದ ಬಾಲಕನ ಸೈಕಲ್ ಕೊಳ್ಳುವ ಕನಸು ಈ ಚಿತ್ರದ ಕಥೆ. ಸ್ವಂತ ಸೈಕಲ್ ಖರೀದಿಸಿ ಊರಿನ ಸೈಕಲ್ ರೇಸ್‌ನಲ್ಲಿ ಗೆಲುವು ಸಾಧಿಸುವುದು ಆತನ ಮುಖ್ಯ ಉದ್ದೇಶ. ಅದನ್ನು ಈಡೇರಿಸಿಕೊಳ್ಳಲು ಬಾಲಕ ಏನೆಲ್ಲ ಹರಸಾಹಸ ಮಾಡುತ್ತಾನೆ ಎಂಬುದೇ ದೇವರ ಕನಸು ಚಿತ್ರದ ಎಳೆ.

2019ರಲ್ಲಿಯೇ ಚಿತ್ರೀಕರಣ ಆರಂಭವಾಗಿತ್ತು. ಒಟ್ಟು 29 ದಿನಗಳಲ್ಲಿ ಸಂಪೂರ್ಣ ಶೂಟಿಂಗ್ ಮುಗಿದಿದೆ. ಮೇ ಅಂತ್ಯದಲ್ಲಿ ಚಿತ್ರ ಪ್ರದರ್ಶನವಾಗಲಿದೆ. ಬೇರೆ ಬೇರೆ ಸಿನಿಮೋತ್ಸವಗಳಿಂದಲೂ ಆಹ್ವಾನ ಬರುತ್ತಿವೆ ಎಂದು ಚಿತ್ರತಂಡ ಹೇಳಿದೆ.

ರತ್ನಜಿತ್ ರಾಯ್ ಅವರ ಛಾಯಾಗ್ರಹಣವಿದೆ. ಅನಿರ್ಬನ್ ಗಂಗೂಲಿ ಧ್ವನಿವಿನ್ಯಾಸ, ಜಿಸ್ನು ಸೇನ್ ಸಂಕಲನ ಮಾಡಿದ್ದಾರೆ. ಇವರೆಲ್ಲ ಪಶ್ಚಿಮ ಬಂಗಾಳದವರು. ಚೆನ್ನೈ ಮೂಲದ ನಿತ್ಯಾನಂದ ಸೌಂಡ್, ಸುಂದರ್ ಆರ್. ಅವರು ಸಂಗೀತ ನೀಡಿದ್ದಾರೆ. ಕೇರಳ ಮೂಲದ ಜಿಷಾ ಮ್ಯಾಥ್ಯು ವಸ್ತ್ರ ವಿನ್ಯಾಸ ಮಾಡಿದ್ದು, ಮನೋಜ್ ಅಂಗಮಾಲಿ ಮೇಕಪ್ ಜವಾಬ್ದಾರಿ ನಿಭಾಯಿಸಿದ್ದಾರೆ. ಕರ್ನಾಟಕದ ಲಿಂಗರಾಜ್ ಇತಿಹಾಸ್ ಸಂಭಾಷಣೆ ಮತ್ತು ಸಾಹಿತ್ಯ ಬರೆದಿದ್ದಾರೆ. ಚನ್ನಬಸವ ಪ್ರೊಡಕ್ಷನ್ ಡಿಸೈನರ್ ಆಗಿ ಈ ಚಿತ್ರಕ್ಕೆ ಕೆಲಸ ಮಾಡಿದ್ದಾರೆ. ಈ ಸಿನಿಮಾಕ್ಕೆ ಸುನಿಲ್ ರಾಮ್ ಕಥೆ ಬರೆದಿದ್ದಾರೆ.

ನಿರ್ದೇಶಕ ಸುರೇಶ್ ಲಕ್ಕೂರ್ ನ್ಯೂಯಾರ್ಕ್ ಸಿನಿಮಾ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ಮೊದಲ ಚಿತ್ರವಾಗಿ ದೇವರ ಕನಸು ಅವರ ಬತ್ತಳಿಕೆಯಿಂದ ಹೊರಬಂದಿದ್ದು, ಮಕ್ಕಳ ಸಿನಿಮಾ ಮೂಲಕ ಆಗಮಿಸಿದ್ದಾರೆ. ಅವರು ಈ ಮೊದಲು ಕನ್ನಡದ 'ದೃಶ್ಯ' ಸಿನಿಮಾದಲ್ಲಿ ಕೆಲಸ ಮಾಡಿದ್ದು, ತಮಿಳು ಮತ್ತು ಮಲಯಾಳಂ ಚಿತ್ರಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ. ದೀಪಕ್, ಅಮೂಲ್ಯ, ಯುವರಾಜ್ ಕಿಣಿ, ಆರುಷಿ ವೇದಿಕಾ, ಮಣಿ, ರೂಪಾ, ವಿಜಯ್ ರಾಕೇಶ್ ಪಾತ್ರವರ್ಗದಲ್ಲಿದ್ದಾರೆ. ಈ ಚಿತ್ರಕ್ಕೆ ಉದ್ಯಮಿಗಳಾದ ಸಿ. ಜಯಕುಮಾರ್, ಸಿ ಶೇಖರ್ ಬಂಡವಾಳ ಹೂಡಿದ್ದಾರೆ. ❖

'ಮೊಗ್ಗಿನ ಮನಸು' ಚಿತ್ರದ ನಿರ್ದೇಶಕರ ಹೊಸ ಸಾಹಸ



ಪ್ರವೀಣ್, ಶಶಾಂಕ್

'ಮೊಗ್ಗಿನ ಮನಸು' ಚಿತ್ರದ ನಂತರ ನಿರ್ದೇಶಕ ಶಶಾಂಕ್ ಹೊಸ ಪ್ರತಿಭೆಗಳೊಂದಿಗೆ ಚಿತ್ರ ನಿರ್ದೇಶಿಸಲು ಸಜ್ಜಾಗಿದ್ದಾರೆ. 'ಶಶಾಂಕ್ ಸಿನೆಮಾಸ್' ಬ್ಯಾನರ್ ಅಡಿ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಈ ಚಿತ್ರ ನಿರ್ಮಾಣವಾಗಲಿದೆ. ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಪ್ರವೀಣ್ ಈ ಚಿತ್ರದ ನಾಯಕ. ಹೊಸಪೇಟೆಯವರಾದ ಪ್ರವೀಣ್ ವೃತ್ತಿಯಲ್ಲಿ ವೈದ್ಯ. ನಟನೆಯ ತರಬೇತಿ ಪಡೆದು ಕ್ಯಾಮೆರಾ ಎದುರಿಸುತ್ತಿದ್ದಾರೆ. ನಾಯಕಿಯ ಹುಡುಕಾಟ ನಡೆದಿದೆ.

ಲಾಕ್‌ಡೌನ್ ಮುಗಿದ ಬಳಿಕ ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್‌ಲುಕ್ ಬಿಡುಗಡೆ ಮಾಡುವುದಾಗಿ ಚಿತ್ರತಂಡ ಹೇಳಿದೆ. ಜೂನ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಈ ಹೊಸ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಲಿದ್ದಾರೆ ಎಂದು ಚಿತ್ರತಂಡ ಹೇಳಿದೆ. ❖

'ಪಟಾಕಿ ಪೋರಿ'ಯ ಮನದಾಳ



ಚಂದನವನದ ಗ್ಲ್ಯಾಮರಸ್ ಬೆಡಗಿ ನಟಿ ಆಶಿಕಾ ರಂಗನಾಥ್ 'ಮದಗಜ' ಚಿತ್ರದಲ್ಲಿ ಪಕ್ಕಾ ಹಳ್ಳಿ ಹುಡ್ಗಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಚಿತ್ರೀಕರಣ ಕೊನೆಯ ಹಂತದಲ್ಲಿದೆ. ಆಶಿಕಾ ನಟಿಸಿರುವ 'ಅವತಾರ ಪುರುಷ', 'ರೆಮೊ' ಚಿತ್ರದ ಚಿತ್ರೀಕರಣ ಮುಗಿದಿದ್ದು, ಚುಟುಚುಟು ಹುಡ್ಗಿ ಇದೀಗ ಪಟಾಕಿ ಪೋರಿಯಾಗಿ 'ಸಿನಿಮಾ ಪುರವಣಿ' ಜೊತೆಗೆ ತಮ್ಮ ಮನದಾಳದ ಮಾತುಗಳನ್ನಾಡಿದ್ದಾರೆ.

ಸಂದರ್ಶನ: ಎ.ಪಿ.ಎಸ್.

- **ಚಿತ್ರೀಕರಣವೆಲ್ಲ ಸ್ತಬ್ಧವಾಗಿದೆ. ಮತ್ತೆ ಲಾಕ್‌ಡೌನ್ ರೀತಿಯ ಅನುಭವ?**

ಚಿತ್ರೀಕರಣದಲ್ಲೇ ತಲ್ಲೀನರಾಗಿದ್ದ ನಮಗೆ ಮನೆಯಲ್ಲೇ ಕೈಕಾಲು ಕಟ್ಟಿಹಾಕಿದಂತಿದೆ. ಬೇಜಾರಾಗುತ್ತದೆ. ಆದರೆ ಪರಿಸ್ಥಿತಿ ಹಿಂದಿನಂತಿಲ್ಲ. ದಿನವೂ ಮನೆಯಲ್ಲೇ ವರ್ಕ್‌ಔಟ್ ಮಾಡುತ್ತಾ, ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವುದರತ್ತ ನನ್ನ ಗಮನವಿದೆ. ಈ ಹಿಂದಿನ ಲಾಕ್‌ಡೌನ್ ಎಲ್ಲರಿಗೂ ಒಂದು ರೀತಿ ಹೊಸದಾಗಿತ್ತು. ಈ ಬಾರಿ ಮತ್ತೆ ಲಾಕ್‌ಡೌನ್ ಆಗುತ್ತದೆ ಎನ್ನುವುದು ಬಹುತೇಕ ಜನರಿಗೆ ಖಚಿತವಾಗಿತ್ತು. ಕುಟುಂಬ ಸದಸ್ಯರ ಜೊತೆಗೆ ಕುಳಿತು ಒಟಿಟಿಯಲ್ಲಿ ಸಿನಿಮಾ ನೋಡುವ ಹೊಸ ಅಭ್ಯಾಸ ಶುರುವಾಗಿದೆ. ಕೋವಿಡ್ ಎರಡನೇ ಅಲೆ ತುಂಬಾ ತೀವ್ರವಾಗಿದೆ. ಮಕ್ಕಳಿಗೆ ಕೋವಿಡ್ ದೃಢಪಟ್ಟರೆ ಹೆತ್ತ ತಂದೆತಾಯಿಯೂ ಜೊತೆಗೆ ಇರಲು ಸಾಧ್ಯವಾಗದಷ್ಟು ಗಂಭೀರವಾಗಿದೆ ಈ ಸೋಂಕು. ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಸಾಮಾಜಿಕ ಜಾಲತಾಣದ ವೇದಿಕೆಗಳಲ್ಲಿ ನನಗೆ ಬಹಳಷ್ಟು ಫಾಲೊವರ್ಸ್ ಇದ್ದಾರೆ. ಸಾಕಷ್ಟು ಜನರು ನೆರವು ಕೋರಿ ಸಂದೇಶ ಕಳುಹಿಸಿದ್ದಾರೆ. ಇದು ನೈಜವಾಗಿದೆಯೇ ಎಂದು ಪರಿಶೀಲಿಸಿ, ನನ್ನ ಖಾತೆಯಲ್ಲಿ ಶೇರ್ ಮಾಡಿದ್ದೇನೆ. ಖಾತೆಯಲ್ಲಿರುವ ನನ್ನ ಸ್ನೇಹಿತರು, ಅಭಿಮಾನಿಗಳು ಇವರಿಗೆ ಸಹಾಯ ಮಾಡಿದ್ದಾರೆ.

- **ಚುಟುಚುಟು ಹುಡ್ಗಿ ಈಗ ಪಟಾಕಿ ಪೋರಿಯಾಗಿದ್ದೀರಿ. ಹೇಗಿದೆ ಹೊಸ ಹೆಸರು?**

ಕೋಟಿಗೊಬ್ಬ–3 ಚಿತ್ರದ 'ಪಟಾಕಿ ಪೋರಿ'... ಊಹಿಸದೇ ಬಂದ ಅವಕಾಶ. ವಿಶೇಷ ಹಾಡಿಗೆ ನನ್ನನ್ನು ಆಯ್ಕೆ ಮಾಡುತ್ತಾರೆ ಎಂದು ಅಂದುಕೊಂಡಿರಲಿಲ್ಲ. ಇದುವರೆಗೂ ನಾಯಕಿಯಾಗಷ್ಟೇ ಉತ್ತಮ ಪಾತ್ರಗಳಲ್ಲಿ ನಾನು ಗುರುತಿಸಿಕೊಂಡಿದ್ದೆ. ಮೊದಲಿಗೆ ಈ ರೀತಿ ಹಾಡಿನಲ್ಲಿ ಅಭಿನಯಿಸಬೇಕೇ ಬೇಡವೇ ಎನ್ನುವ ಗೊಂದಲ ನನ್ನಲ್ಲಿ ಮೂಡಿತ್ತು. ನನ್ನ ಸಿನಿಮಾ ಪಯಣದಲ್ಲಿ ಇಷ್ಟು ಬೇಗ ಈ ರೀತಿ ಹಾಡಿನಲ್ಲಷ್ಟೇ ಕಾಣಿಸಿಕೊಳ್ಳುವುದು ಅಗತ್ಯವಿದೆಯೇ ಎಂದು ನನಗೆ ಅನ್ನಿಸಿತ್ತು. ಸುದೀಪ್ ಅವರ ಜೊತೆಗೆ ನಟಿಸುವ ಅವಕಾಶ ಹಾಗೂ ನೃತ್ಯದಲ್ಲಿ ನನಗಿರುವ ಆಸಕ್ತಿಯಿಂದ ಕೊನೆಗೆ ಒಪ್ಪಿಕೊಂಡೆ.

ಜನರೂ ಚುಟುಚುಟು ಆದಮೇಲೆ ಯಾವ ಹಾಡು ಎಂದು ಕೇಳುತ್ತಿದ್ದರು. ಖ್ಯಾತ ನೃತ್ಯ ನಿರ್ದೇಶಕ ರಾಜು ಸುಂದರಂ ಹಾಗೂ ಅದ್ಭುತವಾದ ಚಿತ್ರತಂಡದ ಜೊತೆ ಕೆಲಸ ಮಾಡಿದ ಅನುಭವ ಅದ್ಭುತ. ಕೋಟಿಗೊಬ್ಬ–3 ಎಂದಾಕ್ಷಣ ಆಶಿಕಾ ಕೇವಲ ಈ ಹಾಡಿಗಷ್ಟೇ ಸೀಮಿತ ಎಂದು ಅಭಿಮಾನಿಗಳೂ ಅಂದುಕೊಂಡಿಲ್ಲ. ಐಟಂ ಸಾಂಗ್ ಆಗಿದ್ದರೆ ಐಟಂ ಸಾಂಗ್‌ಗೆ ನೃತ್ಯ ಮಾಡುವವರನ್ನೇ ಕರೆದುಕೊಂಡು ಬರುತ್ತಿದ್ದರು. ಐಟಂ ಸಾಂಗ್‌ನಿಂದಲೇ ಹಿಟ್ ಆದ ನಟಿಯರಿದ್ದಾರೆ. ಆದರೆ, ಈ ಹಾಡು ಚಿತ್ರದ ಆರಂಭದಲ್ಲೇ ಬರುತ್ತದೆ. ಎಲ್ಲೂ ನನ್ನನ್ನು ಐಟಂ ಸಾಂಗ್ ರೀತಿ ಪ್ರದರ್ಶಿಸಿಲ್ಲ. ಗ್ಲ್ಯಾಮರಸ್ ಲುಕ್‌ನಲ್ಲಿ ನಾನು ಕಾಣಿಸಿಕೊಂಡಿದ್ದೇನೆ.

- **ಕಾಶ್ಮೀರದಲ್ಲಿ ರೆಮೊ ಚಿತ್ರದ ಚಿತ್ರೀಕರಣದ ಅನುಭವ ಹೇಗಿತ್ತು?**

ನಾವು ರೆಮೊ ಚಿತ್ರದ ಚಿತ್ರೀಕರಣಕ್ಕೆಂದು ಕಾಶ್ಮೀರಕ್ಕೆ ಹೋದ ಸಂದರ್ಭ ಬಹಳ ಅಪಾಯದ ಅವಧಿಯಾಗಿತ್ತು. ಹೋಗುವುದೋ ಬೇಡವೋ ಎಂಬ ಗೊಂದಲ ನಮ್ಮಲ್ಲಿ ಇತ್ತು. ಆದರೆ, ಜವಾಬ್ದಾರಿಯುತ ಕಲಾವಿದರಾಗಿ ನಾವು ಹೋಗಬೇಕಾಯಿತು. ಮೂರು ದಿನ ಚಿತ್ರೀಕರಣ ಮುಗಿಸಿಕೊಂಡು ಬಂದೆವು. ಕಾಶ್ಮೀರದ ಸೋನ್‌ಮಾರ್ಗ್ ಹಳ್ಳಿಯೊಂದರಲ್ಲಿ ಚಿತ್ರೀಕರಣವಿದ್ದ ಕಾರಣ ಅಷ್ಟು ಅಪಾಯ ಇರಲಿಲ್ಲ. ಮೊದಲು ಕಾಶ್ಮೀರದಲ್ಲಿ ಚಿತ್ರೀಕರಣವಾಗಬೇಕಿದ್ದ ದೃಶ್ಯಗಳನ್ನು ಗ್ರಾಫಿಕ್ಸ್‌ನಲ್ಲಿ ಮಾಡಿದ್ದೆವು. ಇದು ಸೂಕ್ತವಾಗಿ ಕಾಣಿಸದೇ ಇದ್ದ ಕಾರಣ ಕಾಶ್ಮೀರಕ್ಕೆ ಪ್ರಯಾಣ ಬೆಳೆಸಿದೆವು. ಹಾಡು ಚೆನ್ನಾಗಿ ಮೂಡಿಬಂದಿದೆ.

- **ಶ್ರೀಮುರಳಿ ಅವರ ಜೊತೆಗಿನ 'ಮದಗಜ'ದ ಮೇಲೆ ಬಹಳಷ್ಟು ನಿರೀಕ್ಷೆ ಇದೆ. ನಿಮ್ಮ ಪಾತ್ರದ ಬಗ್ಗೆ?**

ಈ ಹಿಂದಿನ ಸಿನಿಮಾಗಳಲ್ಲಿ ನಾನು ಈ ರೀತಿಯ ಪಾತ್ರ ಮಾಡಿರಲಿಲ್ಲ. ಪಕ್ಕಾ ಹಳ್ಳಿ ಹುಡುಗಿಯ ಪಾತ್ರ ಇದು. ಗ್ಲ್ಯಾಮರಸ್ ಆಗಿ, ಕಾಲೇಜು ಹುಡುಗಿ ಪಾತ್ರದಲ್ಲಿ ಮಾಡರ್ನ್ ಯುವತಿಯಾಗಿ ಕಾಣಿಸಿಕೊಂಡಿದ್ದೆ. ಹೀಗಾಗಿ ಮೊದಲು ನಿರ್ದೇಶಕರಿಗೂ ನಾನು ಈ ಪಾತ್ರ ನಿಭಾಯಿಸಬಲ್ಲೆನೇ ಎಂಬ ಸಂಶಯವಿತ್ತು. ಆದರೆ ಎರಡು ದೃಶ್ಯದ ಚಿತ್ರೀಕರಣವಾದ ಬಳಿಕ ಅವರೇ ನನ್ನ ಪಾತ್ರವನ್ನು ಮೆಚ್ಚಿಕೊಂಡರು. ಕೃಷಿ ಶಿಕ್ಷಣ ಪದವಿ ಪಡೆದು ವ್ಯವಸಾಯ ಮಾಡುವ ಹುಡುಗಿಯ ಪಾತ್ರ ನನ್ನದು. ಅವಳೇ ಇಷ್ಟಪಟ್ಟು ಕೃಷಿ ಶಿಕ್ಷಣ ಪಡೆದು ಈ ಕ್ಷೇತ್ರಕ್ಕೆ ಇಳಿದಿರುತ್ತಾಳೆ. ಆಧುನಿಕ ಯೋಚನೆಗಳಿದ್ದರೂ, ಹಳ್ಳಿಯಲ್ಲೇ ಜೀವನ ಮಾಡಬೇಕು ಎನ್ನುವ ಗುಣದವಳು. ಹಳ್ಳಿ ಸೊಗಡು, ಮಾತೂ ಕೂಡಾ ಹಳ್ಳಿಯದ್ದೇ. ಇದು ವಿಭಿನ್ನ ಅನುಭವವಾಗಿದೆ.

- **ಆಶಿಕಾ ಮುಂದಿನ ಪ್ರಾಜೆಕ್ಟ್ಸ್?**

ಸದ್ಯಕ್ಕೆ 'ರೆಮೊ' ಹಾಗೂ 'ಅವತಾರ ಪುರುಷ' ಚಿತ್ರದ ಚಿತ್ರೀಕರಣ ಮುಗಿಸಿದ್ದೇನೆ. 'ಮದಗಜ' ಚಿತ್ರದ 10–15 ದಿನದ ಇನ್ನೊಂದು ಶೆಡ್ಯೂಲ್ ಇದೆ. ಮೈಸೂರಿನಲ್ಲೇ ಕೊನೆಯ ಹಂತದ ಚಿತ್ರೀಕರಣ ನಡೆಯಲಿದೆ. ಇದಾದರೆ ಒಪ್ಪಿಕೊಂಡ ಚಿತ್ರಗಳ ಶೂಟಿಂಗ್ ಮುಗಿಯುತ್ತದೆ. ಈ ಚಿತ್ರಗಳ ಮೇಲೆಯೇ ನನಗೆ ಬಹಳಷ್ಟು ನಿರೀಕ್ಷೆಯಿದೆ. ಇಲ್ಲಿಯವರೆಗೂ ಹೊಸ ಸಿನಿಮಾಗಳಿಗೆ ಸಹಿ ಹಾಕಿಲ್ಲ. 2–3 ಚಿತ್ರಗಳ ಚರ್ಚೆ ನಡೆಯುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಯಾವುದೇ ಚಿತ್ರಗಳು ಚಿತ್ರೀಕರಣ ಆರಂಭಿಸುವುದು ಅನುಮಾನವಾಗಿದೆ. ಇಲ್ಲಿಯವರೆಗೂ ಒಳ್ಳೆಯ ಪಾತ್ರಗಳನ್ನು ಮಾಡಿದ್ದೇನೆ. ಇದೇ ರೀತಿಯ ಸಿನಿಮಾಗಳು ಅಥವಾ ಇದಕ್ಕಿಂತ ಸವಾಲಿನ ಪಾತ್ರ ಬರುವುದಕ್ಕೆ ಕಾಯುತ್ತಿದ್ದೇನೆ. ❖

ಕಿರುತೆರೆ

ಮನೋಲ್ಲಾಸದ ಕಾರ್ಯಕ್ರಮಗಳಿಗೆ ವಾಹಿನಿಗಳು ಸಜ್ಜು



ನಂಬರ್ 1 ಸೊಸೆ ಧಾರಾವಾಹಿಯ ಪೋಸ್ಟರ್

ಲಾಕ್‌ಡೌನ್ ಅವಧಿಯಲ್ಲಿ ಮನರಂಜನಾ ವಾಹಿನಿಗಳಿಗಂತೂ ಸಾಕಷ್ಟು ಬೇಡಿಕೆ ಬಂದಿದೆ. ಸುದ್ದಿವಾಹಿನಿಗಳಲ್ಲಂತೂ ಕೋವಿಡ್ ಸಂಬಂಧಿತ ಸಾವು, ನೋವಿನ ಸುದ್ದಿ ನೋಡಿ ರೋಸಿಹೋದ ಮನಸ್ಸುಗಳಿಗೆ ಸಾಂತ್ವನ ನೀಡಲು ಈ ವಾಹಿನಿಗಳು ಮುಂದಾಗಿವೆ.

ಶೂಟಿಂಗ್ ಮೇಲೆ ಪರಿಣಾಮ ಬೀರಿದ್ದರೂ ಹಳೆಯ ಸಂಗ್ರಹಗಳ ದೃಶ್ಯಾವಳಿಗಳಿಗೊಂದಿಷ್ಟು ಮಸಾಲೆ ಬೆರೆಸಿ ಹೊಸತನವನ್ನು ಮುಂದಿಡುವ ಪ್ರಯತ್ನವೂ ಕೆಲವು ವಾಹಿನಿಗಳದ್ದು.

ಕಲರ್ಸ್ ಕನ್ನಡ ವಾಹಿನಿಯ 'ಬಿಗ್‌ಬಾಸ್' ಆರಂಭದಿಂದಲೂ ವೀಕ್ಷಕರ ಪ್ರಮಾಣದಲ್ಲಿ ಸ್ಥಿರತೆ ಹಾಗೂ ಕುತೂಹಲವನ್ನು ಉಳಿಸಿಕೊಂಡೇ ಮುಂದುವರಿಯುತ್ತಿದೆ. ಉದಯ ಟಿವಿ ಧಾರಾವಾಹಿಗಳ ಜನಪ್ರಿಯತೆಯೂ ಅದೇ ಮಟ್ಟದಲ್ಲಿ ಇದೆ. ಝೀ ವಾಹಿನಿ ಟಿವಿ ಪ್ರಸಾರ ಮಾತ್ರವಲ್ಲದೆ ತನ್ನದೇ ಆದ ಒಟಿಟಿ ವೇದಿಕೆ ಮೂಲಕವೂ ವೀಕ್ಷಕರನ್ನು ತಲುಪುವ ಪ್ರಯತ್ನ ಮಾಡುತ್ತಿದೆ. ಏನಿದ್ದರೂ ಮನೋರಂಜನೆ ಅಂಗೈಗೆ ಬಂದುಬಿಟ್ಟಿದೆ. ಕಲರ್ಸ್‌ನ ಹಾಸ್ಯ ರಿಯಾಲಿಟಿ ಷೋಗಳ ಜನಪ್ರಿಯತೆಯೂ ಏರುತ್ತಲೇ ಇದೆ.

ಅನ್‌ಲಿಮಿಟೆಡ್ ಮನರಂಜನೆ

ಮನರಂಜನೆಯ ಮಹಾಪೂರ ಹರಿಸಲು ಸಿದ್ಧವಾಗಿದೆ ಝೀ ಕನ್ನಡ ವಾಹಿನಿ. ಆ ಪರಿಕಲ್ಪನೆಯ ಹೆಸರು 'ಅನ್‌ಲಿಮಿಟೆಡ್ ಮನರಂಜನೆ'. ಕೋವಿಡ್ ಸಂಬಂಧಿಸಿದ ನಕಾರಾತ್ಮಕ ಸುದ್ದಿ, ವಿಚಾರಗಳೇ ತುಂಬಿರುವ ಈ ಹೊತ್ತಿನಲ್ಲಿ ಸಕಾರಾತ್ಮಕ ವಿಚಾರ ಬಿತ್ತಿ ಮನೋಲ್ಲಾಸ ತುಂಬುವುದು ನಮ್ಮ ಉದ್ದೇಶ ಎಂದು ವಾಹಿನಿ ಹೇಳಿದೆ. ಸೋಮವಾರದಿಂದ - ಶನಿವಾರದವರೆಗೆ ಧಾರಾವಾಹಿಗಳು, ವಿಶೇಷ ಕಾರ್ಯಕ್ರಮಗಳು ವೀಕ್ಷಕರನ್ನು ರಂಜಿಸಲಿವೆ ಎಂದು ವಾಹಿನಿ ಹೇಳಿದೆ.

ಬರುತ್ತಿದ್ದಾನೆ 'ಹೀರೋ'

ರಿಷಬ್ ಶೆಟ್ಟಿ ನಿರ್ಮಿಸಿ ನಟಿಸಿರುವ, ಭರತ್ ರಾಜ್ ನಿರ್ದೇಶನದ ಚಿತ್ರ 'ಹೀರೋ' ಮೇ 9ರ ಭಾನುವಾರ ರಾತ್ರಿ 7ಕ್ಕೆ ಝೀ ಕನ್ನಡ ಹಾಗೂ ಝೀ ಕನ್ನಡ ಎಚ್‌ಡಿ ವಾಹಿನಿಯಲ್ಲಿ ಪ್ರಸಾರ ಆಗಲಿದೆ.

'ನಂಬರ್ 1 ಸೊಸೆ'

ಹೊಸ ಧಾರಾವಾಹಿ 'ನಂಬರ್ 1 ಸೊಸೆ' ಮೇ 10ರಿಂದ ಮಧ್ಯಾಹ್ನ 1 ಗಂಟೆಗೆ ಪ್ರಸಾರವಾಗಲಿದೆ. 'ಯಜಮಾನಿ ವಾಗ್ದೇವಿಯ ಮನೆಗೆ ಅನಕ್ಷರಸ್ಥ ಹುಡುಗಿ ಸೊಸೆಯಾಗಿ ಬರುತ್ತಾಳೆ. ಆ ಬಳಿಕ ನಡೆಯುವ ಘಟನಾವಳಿಗಳೇ ಧಾರಾವಾಹಿಯ ಕಥಾಹಂದರ' ಎಂದು ವಾಹಿನಿ ತಿಳಿಸಿದೆ. ❖

ಒಟಿಟಿ

ಥ್ಯಾಂಕ್ಯೂ ಬ್ರದರ್ (ತೆಲುಗು)
ತಾರಾಗಣ: ಅನಸೂಯಾ ಭಾರಧ್ವಾಜ್, ವಿರಾಜ್ ಅಶ್ವಿನ್
ನಿರ್ದೇಶನ: ರಮೇಶ್ ರಾಪರ್ತಿ
ಪ್ರಸಾರ: ಆಹಾ ವಿಡಿಯೋ (ಮೇ 7ರಿಂದ)

ಅಪಾರ್ಟ್‌ಮೆಂಟ್‌ನಲ್ಲಿ ಇದ್ದಕ್ಕಿದ್ದಂತೆಯೇ ಸ್ಥಗಿತಗೊಳ್ಳುವ ಲಿಫ್ಟ್‌ನ ಒಳಗೆ ಒಬ್ಬ ಯುವಕ ಮತ್ತು ತುಂಬು ಗರ್ಭಿಣಿ ಮಹಿಳೆ ಸಿಲುಕಿಕೊಳ್ಳುವ ಕಥೆಯ ಚಿತ್ರವಿದು. ಕೊನೆಯವರೆಗೂ ಕುತೂಹಲ ಉಳಿಸಿಕೊಳ್ಳುತ್ತಾ ಹೋಗುತ್ತದೆ. ಮಧ್ಯೆ ಒಂದಿಷ್ಟು ಭಾವನಾತ್ಮಕ ಸನ್ನಿವೇಶ, ಹಾಸ್ಯ ಅಲ್ಲಲ್ಲಿ ಕಾಣಿಸಿಕೊಳ್ಳುತ್ತದೆ. ಗರ್ಭಿಣಿಗೆ ಲಿಫ್ಟ್‌ನ ಒಳಗೇ ಹೆರಿಗೆ ಆಗುವ ಸಂದರ್ಭವನ್ನು ಯುವಕ (ವಿರಾಜ್ ಅಶ್ವಿನ್) ಹೇಗೆ ನಿಭಾಯಿಸಿದ ಅನ್ನುವುದೇ ಉಳಿಯುವ ಕುತೂಹಲ. ಏಪ್ರಿಲ್ 30ರಂದು ಈ ಚಿತ್ರ ಬಿಡುಗಡೆಯಾಗಬೇಕಿತ್ತು. ಕೋವಿಡ್ ಕಾರಣಕ್ಕಾಗಿ ಒಟಿಟಿಯಲ್ಲಿ ಬಿಡುಗಡೆಯಾಗುತ್ತಿದೆ.

ಹೀರೋ (ಕನ್ನಡ)
ತಾರಾಗಣ: ರಿಷಬ್ ಶೆಟ್ಟಿ, ಪ್ರಮೋದ್ ಶೆಟ್ಟಿ, ಗಾನವಿ ಲಕ್ಷ್ಮಣ್.
ನಿರ್ದೇಶನ: ಎಂ. ಭರತ್‌ರಾಜ್
ಪ್ರಸಾರ: ಝೀ 5 (ಮೇ 9ರಿಂದ)

ಇದು ಒಂದೇ ದಿನದಲ್ಲಿ ನಡೆಯುವ ಕಥೆ. ಇದರಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಸೇರಿ ಸಿನಿಮಾದ ಎಲ್ಲ ಅಂಶಗಳೂ ಇವೆ. ಕಳೆದ ಲಾಕ್‌ಡೌನ್ ಅವಧಿಯಲ್ಲಿ ಇದರ ಚಿತ್ರೀಕರಣ ನಡೆದಿತ್ತು.

'ಪುರುಷೋತ್ತಮ'ನ ಹಾಡುಗಳಷ್ಟೇ ಬಾಕಿ



ಜಿಮ್ ರವಿ ಹಾಗೂ ಅಪೂರ್ವ

ರವೀಸ್ ಜಿಮ್ ಬ್ಯಾನರ್ ಅಡಿ ನಿರ್ಮಾಣವಾಗುತ್ತಿರುವ ದೇಹದಾರ್ಢ್ಯಪಟು ಜಿಮ್ ರವಿ ಅಭಿನಯದ 'ಪುರುಷೋತ್ತಮ' ಚಿತ್ರದ ಮೈಸೂರು ಪರಿಸರದ ಚಿತ್ರೀಕರಣ ಮುಕ್ತಾಯವಾಗಿದೆ. ಆಕಾರ್ ಅಪಾರ್ಟ್‌ಮೆಂಟ್ಸ್, ವಕೀಲ ಮಹದೇವ್ ದೇಸಿಕ್ ಅವರ ಕಚೇರಿ, ಕೆಆರ್‌ಎಸ್ ಹಿನ್ನೀರು ಪ್ರದೇಶ, ಚಾಮುಂಡಿಬೆಟ್ಟ, ಅರಮನೆ, ಸಾಗರಕಟ್ಟೆ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಅಮರನಾಥ್ ಎಸ್.ವಿ. ಈ ಚಿತ್ರದ ನಿರ್ದೇಶಕರು. ಚಿತ್ರಕತೆ, ಸಂಭಾಷಣೆಯೂ ಅವರದ್ದೇ.

ಬಾಕಿ ಎರಡು ಹಾಡುಗಳ ಚಿತ್ರೀಕರಣವನ್ನು ಲಾಕ್‌ಡೌನ್ ಮುಗಿದ ನಂತರ ಮುಗಿಸಿ, ಚಿತ್ರವನ್ನು ದಸರಾಗೆ ಬಿಡುಗಡೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ರವಿ ಹೇಳಿದ್ದಾರೆ.

ಅಪೂರ್ವ ಈ ಚಿತ್ರದ ನಾಯಕಿ. ಮೈಸೂರಿನ ನಿವೇದಿತಾ ಇನ್ನೊಬ್ಬ ನಾಯಕಿ. ಇವರೊಂದಿಗೆ ಎ.ವಿ.ಹರೀಶ್, ಪ್ರಭು ಆಲೂರು ಚಿಕ್ಕಬಸವಯ್ಯ, ಕಿರಣ್, ಶರುಣ್, ಕೃಷ್ಟಿ, ಹಾಗೂ ಅಲ್ಲಿನ ಭಾಗದ ರಂಗಭೂಮಿ ಕಲಾವಿದರು ತಾರಾಗಣದಲ್ಲಿದ್ದಾರೆ. ಆನಂದ್‌ಪ್ರಿಯಾ, ಪ್ರಮೋದ್ ಮರವಂತೆ ಹಾಗೂ ನಿರ್ದೇಶಕರು ರಚಿಸಿರುವ ಸಾಹಿತ್ಯಕ್ಕೆ ಶ್ರೀಧರ್ ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ಸಹ ನಿರ್ದೇಶನ ಚಲ, ಛಾಯಾಗ್ರಹಣ ಕುಮಾರ್ ಎಂ., ಸಂಕಲನ ಅರ್ಜುನ್ ಕಿಟ್ಟು ಅವರದ್ದು. ❖



ಹುಲಿಗೆಮ್ಮ ದೇವಿ ಸನ್ನಿಧಿಯಲ್ಲಿ ಶ್ರೇಯಸ್

ಖ್ಯಾತ ನಿರ್ಮಾಪಕ ಕೆ.ಮಂಜು ಅವರ ಪುತ್ರ ಶ್ರೇಯಸ್ ಅವರ ಅಭಿನಯದ ಹೊಸ ಚಿತ್ರದ ಸ್ಕ್ರಿಪ್ಟ್ ಪೂಜೆ ಹೊಸಪೇಟೆ ಸಮೀಪದ ಹುಲಿಗಿಯ ಹುಲಿಗೆಮ್ಮ ದೇವಿ ಸನ್ನಿಧಿಯಲ್ಲಿ ಇತ್ತೀಚೆಗೆ ನಡೆಯಿತು.

ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ನಂದ ಕಿಶೋರ್ (ಪೊಗರು ನಿರ್ದೇಶಕ) ಅವರು ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಕೊರೊನಾ ಹಾವಳಿ ಕಡಿಮೆ ಆದ ಬಳಿಕ ಚಿತ್ರದ ಶೀರ್ಷಿಕೆ ಅನಾವರಣ ಮಾಡುವುದಾಗಿ ಚಿತ್ರತಂಡ ಹೇಳಿದೆ. ಗುಜ್ಜಲ್ ಪುರುಷೋತ್ತಮ ಈ ಚಿತ್ರದ ನಿರ್ಮಾಪಕರು. ಅವರು ಟಗರು ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದವರು. ಗುಜ್ಜಲ್ ಟಾಕೀಸ್ ಬ್ಯಾನರ್ ಅಡಿ ಈ ಚಿತ್ರ ನಿರ್ಮಾಣವಾಗುತ್ತಿದೆ.

ಚಂದನ್ ಶೆಟ್ಟಿ ಸಂಗೀತ ನೀಡುತ್ತಿದ್ದಾರೆ. ಶೇಖರ್ ಚಂದ್ರು ಛಾಯಾಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನವಿದೆ. ಪ್ರಶಾಂತ್ ರಾಜಪ್ಪ ಸಂಭಾಷಣೆ ಬರೆಯುತ್ತಿದ್ದಾರೆ. ❖




ಸುಭಾಷಿತ

ಒಂದು ಕಾರ್ಯವನ್ನು ನಿನ್ನೆ ನಿಮಗೆ ಮಾಡಲಾಗಲಿಲ್ಲ ಎಂಬ ಒಂದೇ ಕಾರಣಕ್ಕೆ, ಇಂದು ನೀವು ಅದನ್ನು ಮಾಡಲಾರಿರಿ ಎಂದು ಅರ್ಥವಲ್ಲ.

-ರಾಬಿನ್ ಶರ್ಮಾ

ಭ್ರಷ್ಟಾಚಾರದ ತನಿಖೆ ನಡೆಯಲಿ ಕೋಮುಬಣ್ಣ ನೀಡುವ ಕೆಲಸ ನಿಲ್ಲಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೋವಿಡ್-19 ಪೀಡಿತರಿಗೆ ಹಾಸಿಗೆಗಳನ್ನು ಹಂಚುವ ಪ್ರಕ್ರಿಯೆಯಲ್ಲಿ ನಡೆಯುತ್ತಿದ್ದ 'ಭ್ರಷ್ಟಾಚಾರ' ಜಾಲವನ್ನು ಬಯಲಿಗೆ ಎಳೆದಿದ್ದೇವೆ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ, ಬೆಂಗಳೂರಿನ ಶಾಸಕರಾದ ಸತೀಶ ರೆಡ್ಡಿ, ಎಲ್.ಎ.ರವಿ ಸುಬ್ರಹ್ಮಣ್ಯ ಮತ್ತು ಉದಯ್ ಗರುಡಾಚಾರ್ ಅವರು ಹೇಳಿಕೊಂಡಿದ್ದಾರೆ. ಸೋಂಕಿನ ಲಕ್ಷಣಗಳು ತೀವ್ರವಾಗಿಲ್ಲದ, ಮನೆ ಆರೈಕೆಯಲ್ಲಿ ಇರುವವರ ಹೆಸರಿನಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಿ, ನಂತರ ಅವುಗಳನ್ನು ತೀರಾ ಅಗತ್ಯ ಇರುವ ರೋಗಿಗಳಿಗೆ ಭಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿತ್ತು. ಇದರಲ್ಲಿ ಕೆಲವು ಆಸ್ಪತ್ರೆಗಳ ಸಿಬ್ಬಂದಿ, ಬಿಬಿಎಂಪಿ ಕೋವಿಡ್ ವಾರ್ ರೂಂ ಸಿಬ್ಬಂದಿ ಕೂಡ ಭಾಗಿಯಾಗಿರುವ ಅನುಮಾನ ಇದೆ ಎಂಬುದು ಬಿಜೆಪಿಯ ಈ ನಾಲ್ವರು ಮುಖಂಡರ ಆರೋಪದ ತಿರುಳು. ಈಗ, ಶಾಸಕರೂ ಬಿಜೆಪಿ ಮುಖಂಡರೂ ಆಗಿರುವ ಸತೀಶ ರೆಡ್ಡಿ ಅವರು, ವಾರ್ ರೂಂನಲ್ಲಿ ತಮ್ಮ ಬೆಂಬಲಿಗರನ್ನು ಇರಿಸಿ, ತಮಗೆ ಬೇಕಾದವರಿಗೆ ಹಾಸಿಗೆ ಬ್ಲಾಕ್ ಮಾಡಿಸುತ್ತಿದ್ದರು ಎಂಬ ಆರೋಪ ಕೇಳಿಬಂದಿದೆ. ಕೋವಿಡ್‌ಗೆ ಒಳಗಾದವರು ಸೂಕ್ತ ಚಿಕಿತ್ಸೆ ಇಲ್ಲದೆ, ಆಮ್ಲಜನಕ ಹಾಗೂ ಆರೈಕೆ ಮಾಡುವ ಹಾಸಿಗೆ ಸಿಗದೆ ಸಾಯುತ್ತಿರುವ ಸಂದರ್ಭದಲ್ಲಿ ಇಂತಹ ಅವ್ಯವಹಾರಗಳು ನಡೆದಿವೆ ಹಾಗೂ ಈ ಅವ್ಯವಹಾರದಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಕೈವಾಡ ಇದೆ ಎಂಬ ಆರೋಪಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಡೀ ಪ್ರಕರಣದ ಬಗ್ಗೆ ನ್ಯಾಯಾಂಗದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು. ಚಿಕಿತ್ಸೆ ಸಿಗದೆ ಜನ ಸಾವಿಗೀಡಾಗುತ್ತಿರುವ ಆರೋಗ್ಯ ತುರ್ತುಸ್ಥಿತಿಯ ಸಂದರ್ಭದಲ್ಲಿ, ಭ್ರಷ್ಟ ಮಾರ್ಗದಲ್ಲಿ ಕಾಸು ಮಾಡಿಕೊಳ್ಳುವ ಹಾದಿ ಹಿಡಿದಿದ್ದವರು ಯಾರೇ ಆಗಿರಲಿ ಅವರಿಗೆ ಕಠಿಣ ಶಿಕ್ಷೆಯಾಗಬೇಕು. ಅವರ ಕರಾಳಮುಖ ಸಮಾಜದ ಎದುರು ಅನಾವರಣಗೊಳ್ಳಬೇಕು.



ಆರೋಗ್ಯ ತುರ್ತುಸ್ಥಿತಿಯ ಈ ಸಂದರ್ಭದಲ್ಲಿ, ಭ್ರಷ್ಟ ಮಾರ್ಗದಲ್ಲಿ ಕಾಸು ಮಾಡಿಕೊಳ್ಳುವ ಹಾದಿ ಹಿಡಿದಿದ್ದವರು ಯಾರೇ ಆಗಿರಲಿ ಅವರಿಗೆ ಕಠಿಣ ಶಿಕ್ಷೆಯಾಗಬೇಕು. ಅವರ ಕರಾಳಮುಖ ಸಮಾಜದ ಎದುರು ಅನಾವರಣಗೊಳ್ಳಬೇಕು

ವಾರ್ ರೂಂಗೆ ದಿಢೀರ್ ಭೇಟಿ ನೀಡಿದ್ದ ಸಂದರ್ಭದಲ್ಲಿ ಬಿಜೆಪಿಯ ಜನಪ್ರತಿನಿಧಿಗಳು, ಮುಸ್ಲಿಂ ಸಮುದಾಯಕ್ಕೆ ಸೇರಿದ ಹದಿನಾರು ಜನರ ಹೆಸರುಗಳನ್ನು ಓದಿ, 'ಇವರನ್ನೆಲ್ಲ ಏಕೆ ನೇಮಕ ಮಾಡಿಕೊಂಡಿದ್ದೀರಿ' ಎಂದು ಪ್ರಶ್ನಿಸಿದ್ದಾರೆ. ಆ ಹದಿನಾರು ಜನ ನಿರ್ದಿಷ್ಟವಾಗಿ ಯಾವುದಾದರೂ ಅಪರಾಧ ಎಸಗಿದ್ದಾರೆಯೇ ಎಂಬುದನ್ನು ಹೇಳಿಲ್ಲ. ಅವರನ್ನು ಏಕೆ ನೇಮಕ ಮಾಡಿಕೊಳ್ಳಬಾರದಿತ್ತು, ಅವರ ಬದಲು ಯಾವ ಸಮುದಾಯಕ್ಕೆ ಸೇರಿದವರನ್ನು ನೇಮಕ ಮಾಡಿಕೊಳ್ಳಬೇಕಿತ್ತು ಎಂಬುದನ್ನೂ ಬಿಜೆಪಿಯ ಈ ನಾಯಕರು ಹೇಳಿಲ್ಲ. 'ನೀವೇನು ಮದರಸಾ ನಡೆಸುತ್ತಿದ್ದೀರಾ' ಎಂದು ಕೂಡ ಅವರು ಪ್ರಶ್ನಿಸಿದ್ದಾರೆ. ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಪ್ರಯತ್ನ ಮೆಚ್ಚುವಂಥದ್ದೇ. ಆದರೆ, ಅದರ ಹೆಸರಿನಲ್ಲಿ, ಒಂದು ಸಮುದಾಯಕ್ಕೆ ಸೇರಿದವರ ಹೆಸರನ್ನು ಮಾತ್ರ ಉಲ್ಲೇಖಿಸಿರುವುದರ ಮರ್ಮ ಏನು? ಬಿಜೆಪಿ ಮುಖಂಡರು ಓದಿ ಹೇಳಿದ ಹದಿನಾರು ಜನರನ್ನು ಕೆಲಸದಿಂದ ತೆಗೆಯಲಾಗಿದೆ ಎಂಬ ವರದಿಗಳು ಇವೆ. ಬಿಜೆಪಿ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ ಮಾತ್ರಕ್ಕೆ, ಸಿಬ್ಬಂದಿಯನ್ನು ಕೆಲಸದಿಂದ ತೆಗೆದಿರುವುದು ಸರಿಯೇ? ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ವಿವರಣೆ ನೀಡುವರೇ? ಇಡೀ ಪ್ರಕರಣವು ಬಿಜೆಪಿ ಆಡಳಿತದ ಮೂಗಿನ ಅಡಿಯಲ್ಲಿ ನಡೆದಿದೆ. ಬಿಜೆಪಿ ನಾಯಕರು ಓದಿ ಹೇಳಿದ ಹೆಸರುಗಳನ್ನು ಉಲ್ಲೇಖಿಸಿ, ಕೋಮು ಭಾವನೆ ಪ್ರಚೋದಿಸುವ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಇಂತಹ ಸಂದೇಶಗಳು ರಾಜ್ಯದಲ್ಲಿನ ಸಾಮರಸ್ಯಕ್ಕೆ ಕೊಳ್ಳಿ ಇಟ್ಟರೆ ಅದರ ಹೊಣೆಯನ್ನು ನಾಲಿಗೆ ಹರಿಬಿಟ್ಟ ನಾಯಕರೇ ಹೊತ್ತುಕೊಳ್ಳಬೇಕು. ಕೇಂದ್ರದಲ್ಲಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಇದೆ, ರಾಜ್ಯದಲ್ಲಿಯೂ ಬಿಜೆಪಿಯೇ ಅಧಿಕಾರ ಚಲಾಯಿಸುತ್ತಿದೆ. ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದ ಕಾರಣ ಬಿಬಿಎಂಪಿ ಕೂಡ ಈಗ ರಾಜ್ಯ ಸರ್ಕಾರದ ಅಧೀನದಲ್ಲಿದೆ. ಬಿಜೆಪಿ ಮುಖಂಡರು ಮಾಡಿರುವ ಆರೋಪದಲ್ಲಿ ಸತ್ಯಾಂಶವಿದ್ದರೆ ಅದರ ನೈತಿಕ ಹೊಣೆ ಹೊರಬೇಕಾದವರು ಯಾರು? ಕೇಂದ್ರದಲ್ಲಿ, ರಾಜ್ಯದಲ್ಲಿ ಬಿಜೆಪಿಯೇ ಅಧಿಕಾರದಲ್ಲಿ ಇದ್ದರೆ ರಾಜ್ಯದಲ್ಲಿ ಹಾಲು-ಜೇನಿನ ಹೊಳೆ ಹರಿದೀತು ಎಂಬ ಕನಸನ್ನು ಜನರಲ್ಲಿ ಬಿತ್ತಿದ್ದರು ಬಿಜೆಪಿ ಮುಖಂಡರು. ಈಗ ಅದೇ ಪಕ್ಷದ ಮುಖಂಡರೇ ಬಿಬಿಎಂಪಿ ಆಡಳಿತ ಸಂಪೂರ್ಣವಾಗಿ ಕುಸಿದುಬಿದ್ದಿದೆ ಎಂಬರ್ಥದಲ್ಲಿ ಮಾತನಾಡಿರುವುದು ಏನನ್ನು ಸೂಚಿಸುತ್ತದೆ? ಕೋವಿಡ್-19ರಿಂದ ಸೃಷ್ಟಿಯಾಗಿರುವುದು ಆರೋಗ್ಯ ಬಿಕ್ಕಟ್ಟು. ಈ ಆರೋಗ್ಯ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವ ಬದಲು, ಅದನ್ನು ಕೋಮು ಬಿಕ್ಕಟ್ಟನ್ನಾಗಿ ಪರಿವರ್ತಿಸಲು ಬಿಜೆಪಿಯ ಈ ಮುಖಂಡರು ಯತ್ನಿಸುತ್ತಿರುವಂತೆ ಭಾಸವಾಗುತ್ತಿದೆ. ಈಗಿನ ಸಂಕಟದ ಸಂದರ್ಭದಲ್ಲಿ ವೃಥಾ ಕಾಲಹರಣ, ಅಧಿಕಾರ ರಾಜಕಾರಣ ನಡೆಸದೆ ರಾಜ್ಯದ ಜನರ ಜೀವ ಉಳಿಸುವ ಕೆಲಸಕ್ಕೆ ಆದ್ಯತೆ ನೀಡಬೇಕು. ಇಂತಹ ಬಿಕ್ಕಟ್ಟಿನ ಸಂದರ್ಭಗಳನ್ನು ಯಾರಾದರೂ ರಾಜಕಾರಣಕ್ಕೆ ಬಳಸಿಕೊಂಡರೆ, ಅವರು ಯಾವುದೇ ಪಕ್ಷದವರಾಗಿರಲಿ ಕ್ಷಮೆಗೆ ಅರ್ಹರಲ್ಲ. ಅಂತಹವರ ಬಗ್ಗೆ ಜನ ಎಚ್ಚರದಿಂದ ಇರಬೇಕು.

ದಿನದ ಟ್ವೀಟ್

ಆತ್ಮಸ್ಥೈರ್ಯ ಕುಗ್ಗಿಸದಿರಿ



ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಸಮಾಜದಲ್ಲಿ ಕೆಟ್ಟ ರಾಜಕೀಯ ಮತ್ತು ಕ್ಷುಲ್ಲಕ ವಾಗ್ವಾದಗಳು ಮುಂದುವರಿದಿರುವುದು ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹದು. ಇದು ಅತ್ಯಂತ ನಕಾರಾತ್ಮಕವಾದುದು. ನಿಷ್ಪ್ರಯೋಜಕ ರಾಜಕಾರಣಿಗಳಿಗೆ ಹೊರತಾದ ಬೇರೆ ವರ್ಗದ ಜನರು ಇದನ್ನೆಲ್ಲಾ ಬದಿಗಿಟ್ಟು, ಅಗತ್ಯವಿರುವವರಿಗೆ ಪರಿಹಾರ ಒದಗಿಸುವ ಬಗ್ಗೆ ಏಕೆ ಗಮನ ಕೇಂದ್ರೀಕರಿಸಬಾರದು?

ಗಣೇಶ್ ಚೇತನ್, ನಾಗರಿಕ

25 ವರ್ಷಗಳ ಹಿಂದೆ

ಮಂಗಳವಾರ, 7-5-1996

- **ಕಂಡಲ್ಲಿ ಗುಂಡು: ಇಂದು 183 ಸ್ಥಾನಗಳಿಗೆ ಮತದಾನ**

ನವದೆಹಲಿ, ಮೇ 6 (ಪಿಟಿಐ, ಯುಎನ್‌ಐ)– ಹನ್ನೆರಡು ರಾಜ್ಯಗಳಲ್ಲಿ ವ್ಯಾಪಿಸಿರುವ 183 ಲೋಕಸಭೆ ಸ್ಥಾನಗಳು ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯ 154 ಸ್ಥಾನಗಳಿಗೆ ನಾಳೆ ಮೂರನೇ ಹಂತದಲ್ಲಿ ಮತದಾನ ನಡೆಸಲು ಸರ್ವ ಸಿದ್ಧತೆ ಮಾಡಲಾಗಿದ್ದು, ಬಿಹಾರ, ತ್ರಿಪುರಾ ರಾಜ್ಯಗಳಲ್ಲಿ ಮತ್ತು ಉತ್ತರಪ್ರದೇಶದ ಹಲವು ಭಾಗಗಳಲ್ಲಿ ಕಂಡಲ್ಲಿ ಗುಂಡಿಕ್ಕಲು ಆದೇಶಿಸಲಾಗಿದೆ.

- **ಗೃಹ ಮಂಡಳಿ ಬಾಕಿ ವಸೂಲಿ ವಿಕ್ರಮ**

ಬೆಂಗಳೂರು, ಮೇ 6– ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ಕೆಎಚ್‌ಬಿ) ಅಸ್ತಿತ್ವಕ್ಕೆ ಬಂದ ಈ ಎರಡೂವರೆ ದಶಕಗಳಲ್ಲಿ ಮೊದಲ ಬಾರಿಗೆ 57 ಕೋಟಿ ರೂಪಾಯಿ ಹಣವನ್ನು ವಸೂಲು ಮಾಡಿ ದಾಖಲೆ ಸೃಷ್ಟಿಸಿದೆ.

ತಾನು ಕಟ್ಟಿ ವಿತರಣೆ ಮಾಡಿದ ಮನೆಗಳ ಬಾಕಿಯನ್ನು ಗ್ರಾಹಕರು ಕಟ್ಟದೇ ಉಳಿದುಕೊಂಡಿರುವ ಪ್ರಕರಣಗಳನ್ನು ಒಂದೊಂದಾಗಿ ಬಯಲಿಗೆ ಎಳೆಯುತ್ತಿರುವ ಮಂಡಳಿಯ ಕ್ರಮದಿಂದಾಗಿ ಈ ಬಾರಿ ವಸೂಲಾತಿ ಮೊತ್ತ ಈ ಪ್ರಮಾಣಕ್ಕೆ ಏರಿದೆ. ಮಂಡಳಿಗೆ ಇದುವರೆಗೆ ಗರಿಷ್ಠ ಎಂದರೆ 32 ಕೋಟಿ ರೂಪಾಯಿವರೆಗೆ ವಸೂಲು ಮಾಡಲು ಸಾಧ್ಯವಾಗಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 7-5-1971

- **ಗಾಂಧೀಜಿ ಅವರ ಉಗ್ರ ಕ್ರಮದ ವಿರುದ್ಧ 1942ರಲ್ಲೇ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ**

ಲಂಡನ್, ಮೇ 6– ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧಿಯವರು ಬ್ರಿಟನ್ನಿಗೆ ಪ್ರತಿಕೂಲಕರವಾದ ಉಗ್ರ ಕ್ರಮಗಳನ್ನು ಕೈಗೊಳ್ಳುವ ಸಂಭವವಿದೆಯೆಂದು ಮುಂಬಯಿಯ ಗವರ್ನರ್ ಸರ್ ರೋಜನ್ ಲುಮ್ಲಯವರು 1942ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರು.

ಲುಮ್ಲಯವರು ಭಾರತದ ಆಗಿನ ವೈಸ್‌ರಾಯ್ ಅವರಿಗೆ ಬರೆದ ಪತ್ರದಲ್ಲಿ ಈ ವಿಷಯ ತಿಳಿಸಿದ್ದರೆಂದು ಇಲ್ಲಿ ಬಹಿರಂಗವಾದ ಅಪ್ರಕಟಿತ ಅಧಿಕೃತ ದಾಖಲೆಗಳಿಂದ ತಿಳಿದುಬಂದಿದೆ.

- **ಕಾಂಗ್ರೆಸ್ ಆಧುನೀಕರಣ ಪಕ್ಷಕ್ಕೆ ಪ್ರಧಾನಿ ಕರೆ**

ನವದೆಹಲಿ, ಮೇ 6– ಕಾಂಗ್ರೆಸ್ ಪಕ್ಷವು ಪ್ರತಿಗಾಮಿಶಕ್ತಿ ಮತ್ತು ಊಳಿಗಮಾನ್ಯ ತತ್ವಗಳ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಬೇಕಾದರೆ ಮತ್ತು ತನ್ನ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂತಾಗಲು ಪಕ್ಷಕ್ಕೆ ಆಧುನಿಕ ದೃಷ್ಟಿಕೋನ ನೀಡುವುದು ಅತ್ಯಗತ್ಯ ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಕರೆ ನೀಡಿದರು.

ಅಕ್ರಮ ಹಂಚಿಕೆ ಹಾಗೂ ಅತಿಕ್ರಮಣಕ್ಕೆ ಬಲಿಯಾಗುತ್ತಿರುವ 'ಗ್ರಾಮ ಸಾಮೂಹಿಕಭೂಮಿ'

ಮಲೆನಾಡಿನ ಮಾಯಾಮೃಗ ಶಿಕಾರಿ!



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಕೊರೊನಾ ವೈರಸ್ ಶ್ವಾಸಕೋಶವನ್ನೆಲ್ಲ ಆಕ್ರಮಿಸಿ, ಆರೋಗ್ಯ ವ್ಯವಸ್ಥೆಯನ್ನೇ ಉಸಿರುಗಟ್ಟಿಸುತ್ತಿದೆಯಲ್ಲವೇ? ನೈಸರ್ಗಿಕ ಸಂಪನ್ಮೂಲಗಳನ್ನು ಅವೈಜ್ಞಾನಿಕವಾಗಿ ನಿರ್ವಹಿಸುವ ಅವಿವೇಕವೆಂಬ ವೈರಸ್, ನಾಡಿನ ಪುಪ್ಪುಸದಂತಿರುವ ಮಲೆನಾಡನ್ನು ನಾಶ ಮಾಡಿ ಸೃಷ್ಟಿಸುತ್ತಿರುವ ಅನಾರೋಗ್ಯದ ಲಕ್ಷಣಗಳೂ ಢಾಳಾಗಿ ಗೋಚರಿಸುತ್ತಿವೆ!

ಈ ಅವಸ್ಥೆಯನ್ನು ನೋಡಲು ಮಸೂರವೇನೂ ಬೇಕಿಲ್ಲ. ಪರಿಸರದ ಹದದಲ್ಲಿದ್ದ ಲಯ ತಪ್ಪಿ, ಮಲೆನಾಡಿನ ತೋಟಗಾರಿಕೆ, ಕೃಷಿ, ಹೈನುಗಾರಿಕೆ, ಜೇನುಕೃಷಿ, ಒಳನೀರು ಮೀನುಗಾರಿಕೆಗಳ ಉತ್ಪಾದಕತೆ ಕುಸಿಯುತ್ತಿರುವುದನ್ನು ಅಧ್ಯಯನಗಳು ತೋರಿಸುತ್ತಿವೆ. ಪಶ್ಚಿಮಕ್ಕೆ ಹರಿಯುವ ನದಿತೊರೆಗಳಲ್ಲಿ ವರ್ಷದ ಹೆಚ್ಚಿನ ಸಮಯ ನೀರಿರದೆ, ಪೋಷಕಾಂಶಯುಕ್ತ ಸಿಹಿನೀರು ಸಮುದ್ರ ಸೇರದೆ ಮೀನುಗಳ ಸಂತತಿ ಕುಸಿದು, ಮತ್ಸ್ಯಕ್ಷಾಮ ತಲೆದೋರುತ್ತಿದೆ. ಕರಾವಳಿಯ ಒಳಪ್ರದೇಶದ ಜಮೀನುಗಳಿಗೆ ಸಾಗರದ ಉಪ್ಪುನೀರು ನುಗ್ಗಿ, ಭತ್ತ ಹಾಗೂ ತರಕಾರಿಗಳ ಪಾರಂಪರಿಕ ಕೃಷಿ ಕಣ್ಮರೆಯಾಗುತ್ತಿದೆ.

ಇತ್ತ, ಪೂರ್ವಕ್ಕೆ ಹರಿಯುವ ಸಹ್ಯಾದ್ರಿಮೂಲದ ನದಿಗಳೆಲ್ಲ ಬತ್ತಿ, ಬಯಲುನಾಡಿನ ಜಲಮೂಲಗಳೆಲ್ಲ ಒಣಗಿ, ಜೀವಪೋಷಕ ಒಕ್ಕಲುತನ ಹಾಗೂ ಹೈನುಗಾರಿಕೆ ಅಧ್ವಾನವಾಗುತ್ತಿವೆ. ನಾಡಿನ ಜಲ ಮತ್ತು ಹವಾಮಾನ ಸುರಕ್ಷತೆಯ ಆಧಾರಸ್ತಂಭವಾಗಿರುವ ಮಲೆನಾಡಿನ ಸೂಕ್ಷ್ಮಪರಿಸರ ನಾಶವಾಗುತ್ತಿರುವುದರ ಪರಿಣಾಮವಿದು.

ನೆಲ-ಜಲ, ಕಾಡಿನ ರಕ್ಷಣೆಗೆಂದು ಇರುವ ಎಷ್ಟೆಲ್ಲ ಕಾನೂನುಗಳು, ಸರ್ಕಾರಿ ಇಲಾಖೆಗಳು, ಭಾರಿ ಅನುದಾನದ ಯೋಜನೆಗಳು, ಮಾರ್ಗದರ್ಶನಕ್ಕೆಂದೇ ಇರುವ ತಜ್ಞರು, ಸಂಶೋಧನಾ ಸಂಸ್ಥೆಗಳು-ಎಲ್ಲ ಇದ್ದೂ ಹೀಗೇಕಾಗುತ್ತಿದೆ? ಈ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ಪರಿಶೀಲಿಸಿದರೆ, ಅಂತಿಮವಾಗಿ ದೊರಕುವ ಮೂಲಭೂತ ಕಾರಣವೊಂದೇ- ರಾಜ್ಯದಲ್ಲಿ ವೈಜ್ಞಾನಿಕ ಭೂಬಳಕೆ ನೀತಿಯೇ ಇರದಿರುವುದು!

ಪ್ರದೇಶವೊಂದರ ಮಣ್ಣಿನ ರಚನೆ, ಭೂಮೇಲ್ಮೈ ಪರಿಸರ, ಹಸಿರಿನ ಹೊದಿಕೆ, ಜೀವವೈವಿಧ್ಯದ ಹರವು, ನೀರಿನ ಲಭ್ಯತೆ, ಹವಾಗುಣ, ಕೃಷಿ ಸಂಸ್ಕೃತಿ- ಇವನ್ನೆಲ್ಲ ಆಧರಿಸಿ, ಭೂಸಂಪತ್ತನ್ನು ಸೂಕ್ತವಾಗಿ ನಿರ್ವಹಿಸುವ ನಿಖರ ಆಡಳಿತ ಸೂತ್ರಗಳಿರಬೇಕಿತ್ತು. ಕೃಷಿಭೂಮಿ, ನದಿ-ತೊರೆ, ಬೆಟ್ಟ-ಗುಡ್ಡ, ಕೆರೆ-ಗೋಮಾಳ, ಕಾಡು-ಕಣಿವೆಗಳ ವ್ಯವಸ್ಥಿತ ನಿರ್ವಹಣೆ ಆಗ ಸಾಧ್ಯವಾಗುತ್ತಿತ್ತು. ನೆಲಬಳಕೆಗೆ ಅಂಥ ಸ್ಪಷ್ಟ ನೀತಿಯೇ ಇಲ್ಲದಾಗಿ, ನಿಸರ್ಗದ ರಕ್ಷಣೆಯ ಬದಲು ಲೂಟಿಯಾಗುತ್ತಿದೆ. ಎಲ್ಲೆ ಮೀರಿರುವ ಈ ದುರಂತಕ್ಕೆ, ಸರ್ಕಾರಿ ನೀತಿಯೇ ಮೂಲಕಾರಣ ಆಗಿರುವುದು ನೋವಿನ ಸಂಗತಿಯಲ್ಲವೇ?

ಗ್ರಾಮಗಳಲ್ಲಿರುವ 'ಸಾಮೂಹಿಕಭೂಮಿ'ಯ ಇಂದಿನ ಪರಿಸ್ಥಿತಿ ಇದಕ್ಕೆ ಉತ್ತಮ ನಿದರ್ಶನ ಆಗಬಲ್ಲದು. ರಾಜ್ಯದ ಇತರೆಡೆಯ ಹಾಗೆ ಮಲೆನಾಡಿನಲ್ಲೂ ವಿಸ್ತಾರವಾದ ಸಾಮೂಹಿಕ ಭೂಮಿಯಿದೆ. ಕೃಷಿಭೂಮಿ ಹಾಗೂ ಕಾಡಿಗಿಂತ ಭಿನ್ನವಾದ, ಸಮುದಾಯದ ಬಳಕೆಗೆ ಮೀಸಲಿರುವ ಸಮೃದ್ಧ ನೈಸರ್ಗಿಕ ಪ್ರದೇಶವಿದು. ಅವು ಗೋಮಾಳ, ಕುರುಚಲು ಕಾಡು, ಕಾನು ಇತ್ಯಾದಿ ಸ್ವರೂಪದಲ್ಲಿವೆ. ಜಾನುವಾರುಗಳ ಮೇವು, ಉರುವಲು, ಕಾಡಿನ ಹಣ್ಣುಹಂಪಲುಗಳು, ಜೇನು ಇತ್ಯಾದಿ ನಿಸರ್ಗದ ಉತ್ಪನ್ನ ಹಾಗೂ ಸೇವೆಗಳನ್ನೆಲ್ಲ ಒದಗಿಸಿ, ಹಳ್ಳಿಗರನ್ನು ಸಲಹುವ ರಕ್ಷಣಾಪೊರೆಯದು. ಅರಣ್ಯದಿಂದ ಹೊಲಕ್ಕೆ ಕಾಡುಪ್ರಾಣಿಗಳ ದಾಳಿ ತಡೆಯುವ 'ಹಸಿರುಬೇಲಿ'ಯೂ ಹೌದು. ತನ್ನೊಡಲಿನ ಅಸಂಖ್ಯ ಹೊಳೆ-ಕೆರೆಗಳಿಂದ ನೀರು ಒದಗಿಸುವ ಜಲಮೂಲ ಸಹ. ಹೀಗಾಗಿಯೇ, ಈ ಸಮುದಾಯ ಸಂಪತ್ತಿನ ರಕ್ಷಣೆಗೆ ಮಹತ್ವವಿರುವುದು.

ಕೃಷಿಭೂಮಿಯು ಖಾಸಗಿ ಸ್ವತ್ತಾದರೆ, ಕಾಡು ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ದೇಶದ ಸಂಪತ್ತು. ಇವುಗಳ ನಡುವಿನ ಹಸಿರುವಲಯವಾದ ಈ ಸಾಮೂಹಿಕಭೂಮಿಯ ಮಾಲೀಕತ್ವ ಕಂದಾಯ ಇಲಾಖೆಯದ್ದು. ಆದರೆ, ದೂರದೃಷ್ಟಿಯಿರದ ನಿರ್ವಹಣಾ ನೀತಿಗೆ, ಆಡಳಿತದ ಭ್ರಷ್ಟಾಚಾರವೂ ಜೊತೆಯಾಗಿ, ಕಳೆದ ಮೂರು ದಶಕಗಳಿಂದ ಇದು ಕರಗುತ್ತಲೇ ಇದೆ. ಆ ಮೂಲಕ, ನೆರೆ ಹಾಗೂ ಬರಗಳ ವಿಷಚಕ್ರಕ್ಕೆ ನಾಡು ಸಿಲುಕಿಕೊಳ್ಳುವ 'ಪರಿಸರ ತುರ್ತುಪರಿಸ್ಥಿತಿ' ನಿರ್ಮಾಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರಗಳು ಎಸಗುತ್ತಿರುವ ಎರಡು ಪ್ರಮುಖ ಪ್ರಮಾದಗಳನ್ನು ಗಮನಿಸಬೇಕಿದೆ.

ಮೊದಲಿನದು, ಉದ್ಯಮ ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಸಾಮೂಹಿಕಭೂಮಿಯನ್ನು ಸರ್ಕಾರವು ವಿವೇಕವಿಲ್ಲದೆ ನೀಡುತ್ತಿರುವುದು. ಗಣಿಗಾರಿಕೆ, ಏಕಸಸ್ಯ ನೆಡುತೋಪು, ಕೈಗಾರಿಕೆ, ವಾಣಿಜ್ಯ ಬಡಾವಣೆ- ಹೀಗೆ ಸಾಗುತ್ತದೆ ಈ ಪಟ್ಟಿ. ಅರಣ್ಯ ಪ್ರದೇಶಗಳ ಜೊತೆಗೆ, ಈ ಸಮುದಾಯಭೂಮಿಯ ಹಸಿರೂ ಕಣ್ಮರೆಯಾಗುತ್ತಿರುವುದರಿಂದ, ನೀರಿನ ಕೊರತೆ ಹಾಗೂ ಮಾನವ-ಕಾಡುಪ್ರಾಣಿ ಸಂಘರ್ಷಗಳು ಹೆಚ್ಚುತ್ತಿರುವುದನ್ನು ಸಂಶೋಧನೆಗಳು ದಾಖಲಿಸುತ್ತಿವೆ. ಹಲವು ತಜ್ಞ ಸಮಿತಿಗಳು, ವಿಜ್ಞಾನಿಗಳು ಹಾಗೂ ರೈತ ಸಂಘಟನೆಗಳವರು ಈ ಕುರಿತು ಎಚ್ಚರಿಸುತ್ತಲೂ ಇದ್ದಾರೆ. ಕೈಗಾರಿಕೆ, ಹೆದ್ದಾರಿ ವಿಸ್ತರಣೆ, ಹೊಸ ರೈಲು ಅಥವಾ ವಿದ್ಯುತ್ ಮಾರ್ಗಗಳಂಥ ಕಾಡು ಸೀಳುವ ಯೋಜನೆಗಳ ಅನುಷ್ಠಾನಕ್ಕಾಗಿ, ವಿಸ್ತಾರವಾದ ವನ್ಯಪ್ರದೇಶಗಳನ್ನು ಮಿತಿಮೀರಿ ಬಳಸುತ್ತಿರುವ ಅಪಾಯದ ಕುರಿತು, ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್‌ನ 'ಉನ್ನತಾಧಿಕಾರ ಸಮಿತಿ' (ಸಿ.ಇ.ಸಿ.) ವಿಷಾದ ವ್ಯಕ್ತಪಡಿಸಿದೆ. ಇಷ್ಟಾಗ್ಯೂ ಸರ್ಕಾರಿ ನೀತಿ ಬದಲಾಗುತ್ತಿಲ್ಲ. ಬದಲಾಗಿ, ಈವರೆಗೂ ಗುತ್ತಿಗೆ ಆಧಾರದಲ್ಲಿ ನೀಡುತ್ತಿದ್ದ ಭೂಮಿಯನ್ನು, ಇದೀಗ ಉದ್ದಿಮೆಗಳಿಗೇ ಮಾರಿಬಿಡುವ ಅಪಾಯಕಾರಿ ನಿಲುವಿಗೆ ಸರ್ಕಾರ ಬಂದು ತಲುಪಿದೆ!



ಎರಡನೆಯದು, ಸಾಮೂಹಿಕ ಸಂಪತ್ತನ್ನು ಖಾಸಗಿ ಆಸ್ತಿಯನ್ನಾಗಿಸಿಕೊಳ್ಳಲು ಹಲವರಿಗೆ ಸರ್ಕಾರವೇ ಅನುವು ಮಾಡಿಕೊಡುತ್ತಿರುವ ಸಂಗತಿ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಉಡುಪಿ ಜಿಲ್ಲೆಗಳಲ್ಲೆಲ್ಲ ರಾತ್ರೋರಾತ್ರಿ ಹತ್ತಿಪ್ಪತ್ತು ಎಕರೆ ನೆಲಸವರಿ, ಬೇಲಿ ಹಾಕಿ, ಲಾಗಾಯ್ತಿನಿಂದ ಉಳುಮೆ ಮಾಡುತ್ತಿರುವಂತೆ ಅಥವಾ ಸ್ವಾತಂತ್ರ್ಯಪೂರ್ವದ ಆಡಳಿತ ನೀಡಿದ್ದ ಕೆಲವು ಸವಲತ್ತುಗಳನ್ನೇ ಹಕ್ಕೆಂದು ತಿದ್ದಿ ಸುಳ್ಳುದಾಖಲೆ ಸೃಷ್ಟಿಸಿ, ಹಕ್ಕುಪತ್ರ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ತಲೆಮಾರುಗಳಿಂದ ಉಳುಮೆ ಮಾಡಿಯೂ ಭೂ-ಒಡೆತನ ಇರದ ಬಡವರಿಗಾಗಿ ರೂಪಿಸಿರುವ 'ಬಗರ್‌ಹುಕುಂ' ಕಾಯ್ದೆಯನ್ನು ದುರುಪಯೋಗ ಮಾಡಿ, ಬಲಾಢ್ಯರೂ ನೂರಾರು ಎಕರೆ ಸರ್ಕಾರಿ ಕಂದಾಯಭೂಮಿಯನ್ನು ಆಕ್ರಮಿಸುತ್ತಿರುವುದು ನಿತ್ಯಸಂಗತಿಯಾಗುತ್ತಿದೆ. ಅಧಿಕಾರ ರಾಜಕಾರಣ ಹಾಗೂ ಆಡಳಿತದ ಭ್ರಷ್ಟಾಚಾರದ ನೆರವಿಲ್ಲದೆ ಇದು ಸಾಧ್ಯವೇ?

ಆದರೆ, ಸರ್ಕಾರದ ಸ್ಪಂದನೆಯಾದರೂ ಏನು? ಕಂದಾಯ ಇಲಾಖೆಯು 'ಸಿ' ಮತ್ತು 'ಡಿ' ಎಂದು ವರ್ಗೀಕರಿಸುವ ಸಾಮೂಹಿಕಭೂಮಿಗಳನ್ನು ಉದ್ಯಮಗಳಿಗೆ ಬಿಟ್ಟುಕೊಡುತ್ತಿದೆ. 'ಬಗರ್‌ಹುಕುಂ' ಅರ್ಜಿ ಸಲ್ಲಿಸುವ ಗಡುವನ್ನೇ ಪದೇಪದೇ ವಿಸ್ತರಿಸುತ್ತಿರುವುದರಿಂದ, ಹೊಸದಾಗಿ ಒತ್ತುವರಿಗಳಾಗುತ್ತಿವೆ. ಸಾರ್ವಜನಿಕ ಭೂಮಿಯ ರಕ್ಷಣೆಗೆಂದೇ 2014ರಲ್ಲಿ ಜಾರಿಗೆ ಬಂದ 'ಕರ್ನಾಟಕ ಭೂಕಬಳಿಕೆ ನಿಯಂತ್ರಣ ಕಾಯ್ದೆ'ಯನ್ನು ನಿಶ್ಶಕ್ತಗೊಳಿಸಲು ರಾಜಕಾರಣವೆಲ್ಲ ಪಕ್ಷಮೀರಿ ಒಂದಾಗುತ್ತಿದೆ!

ಇನ್ನು ಬೆಟ್ಟ, ಕುಮ್ಕಿ, ಕಾವಲ್, ಬಾಣೆ, ಕಾಣೆ, ಪೈಸಾರಿ, ಜಮ್ಮಾ ಇತ್ಯಾದಿ ಹೆಸರಿನಡಿ, ಸ್ವಾತಂತ್ರ್ಯಪೂರ್ವದ ಆಡಳಿತಗಳು ರೈತರಿಗೆ ಕೆಲವು ಸವಲತ್ತುಗಳನ್ನು ನೀಡಿರುವ ಸರ್ಕಾರಿ ಕಂದಾಯಭೂಮಿಗಳಿವೆ. ಈ ಸಾಮೂಹಿಕಭೂಮಿ ಅರಣ್ಯಗಳಲ್ಲೂ ಹಲವರು ಈಗ ಮಾಲೀಕತ್ವ ಸಾಧಿಸುತ್ತಿದ್ದಾರೆ! ಸುಪ್ರೀಂ ಕೋರ್ಟೇನೋ ಅವನ್ನು 'ಪರಿಭಾವಿತ ಅರಣ್ಯ' (ಡೀಮ್ಡ್) ತತ್ವದಡಿ ರಕ್ಷಿಸಲು ಪ್ರಯತ್ನಿಸುತ್ತಿದೆ. ಆದರೆ, ರಾಜ್ಯದಲ್ಲಿ 2010ರಲ್ಲಿದ್ದ ಸುಮಾರು ಹತ್ತು ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯವನ್ನು, 2017ರಲ್ಲಿ ಸರ್ಕಾರ 3.30 ಲಕ್ಷ ಹೆಕ್ಟೇರಿಗೆ ಇಳಿಸಿತು. ಇದೀಗ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವ ಅಂತಿಮ ಪರಿಷ್ಕೃತ ಪಟ್ಟಿಯಲ್ಲಿ, ಅಳಿದುಳಿದಿರುವ ಈ ಸಾಮೂಹಿಕಭೂಮಿ ಪ್ರಕಾರಗಳನ್ನೇ ಕೈಬಿಡಲು ಮುಂದಾಗಿದೆ! ದುರಂತದೆಡೆಗೆ ಒಯ್ಯುವ ನಿರ್ಧಾರವಿದು.

ಕಾಡು ಹಾಗೂ ಸಾಮೂಹಿಕಭೂಮಿಯು ಜನಜೀವನ ಕಾಯುವ ರಕ್ಷಣಾ ಕವಚವಲ್ಲವೇ? ಅವು ನಾಶವಾದರೆ, ಉಳಿಯುವುದು ಅಧಿಕಾರ ರಾಜಕಾರಣವು ಸೃಷ್ಟಿಸುತ್ತಿರುವ 'ಅಭಿವೃದ್ಧಿ ಮಾಯಾಮೃಗ'ದ ಹಿಂದಿನ ಓಟ ಮಾತ್ರ! ಇದು ಮುಂದೆ ಕೊರೊನಾಕ್ಕೂ ಮಿಗಿಲಾದ ಸಂಕಷ್ಟಗಳನ್ನು ತಂದೀತು.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ರಕ್ತಮಾಂತ್ರಿಕ!

• ಬಿ.ಎನ್.ಮಲ್ಲೇಶ್

'ಗುರೂ... ಇವತ್ತೇನಾತು ಗೊತ್ತಾ?' ಎಂದ ತೆಪರೇಸಿ.

'ಹೇಳಿದ್ರೆ ತಾನೇ ಗೊತ್ತಾಗೋದು...' ದುಬ್ಬೀರನ ಕೊಕ್ಕೆ.

'ನಮ್ಮನೆ ಮುಂದೆ ಎರಡು ಸಣ್ಣ ಮಳಿಗೆ ಬಾಡಿಗೆಗೆ ಕೊಟ್ಟೀನಲ್ಲ, ಅದ್ರಲ್ಲಿ ಒಬ್ಬ ಕೇರಳದ ರಕ್ತಮಾಂತ್ರಿಕ, ಭವಿಷ್ಯ ಹೇಳೋನು...'

'ಓ ಹೌದಾ? ನಿನ್ ಭವಿಷ್ಯ ಖರಾಬ್ ಐತೆ, ಶೀಘ್ರದಲ್ಲೇ ಪತ್ನಿಯಿಂದ ಪತಿಯ ಕೊಲೆ ಅಂತ ಹೇಳಿದ್ನಾ?'

'ನಿನ್ತಲಿ, ಅದೂ... ಲಾಕ್‌ಡೌನ್ ಆಗೇತಲ್ಲ. ಒಂದು ತಿಂಗಳು ಬಾಡಿಗೆ ಮನ್ನಾ ಮಾಡಿ ಅಂತ ಬಂದಿದ್ದ...'

'ಪಾಪ, ಗಿರಾಕಿ ಇಲ್ಲ ಅನ್ನುತ್ತೆ, ಮನ್ನಾ ಮಾಡ್ಬೇಕಿತ್ತು?'

'ತಡಿ ಹೇಳ್ತೀನಿ, 'ಅಲ್ಲಯ್ಯಾ ನಿನ್ನ ಬೋರ್ಡಲ್ಲಿ ಸ್ತ್ರೀ ಪುರುಷ ವಶೀಕರಣ, ಶತ್ರು ಬಾಧೆ, ರೋಗ ನಿಗ್ರಹ, ದಾಂಪತ್ಯ ಕಲಹ... ಎಲ್ಲದಕ್ಕೂ ಶಾಶ್ವತ ಪರಿಹಾರ ಅಂತ ಹಾಕ್ಕಂಡಿದೀಯಲ್ಲ, ಈ ಕೊರೊನಾ ಯಾವಾಗ ನಿಗ್ರಹ ಆಗುತ್ತೆ ಹೇಳು ನೋಡಾಣ' ಅಂದೆ. ಅದಕ್ಕವನು 'ಹಳೇದು ನಿಗ್ರಹ ಆಗಿದೆ. ಈಗಿರೋದು ಹೊಸ ಕೊರೊನಾ. ಮುಂದೆ ಇನ್ನೊಂದು ಬರಬಹುದು... ಹಿಡಿಯೋದು ಕಷ್ಟ' ಅಂದ'.

'ಬುದ್ಧಿವಂತ ಅನ್ನುತ್ತೆ, ಮುಂದೆ?'

'ಹೋಗ್ಲಿ, ಸ್ತ್ರೀ ವಶೀಕರಣ ಅಂತ ಬೋರ್ಡ್ ಹಾಕಿದೀಯಲ್ಲ, ನಾ ತೋರಿಸಿದ ಹುಡುಗೀನ ವಶೀಕರಣ ಮಾಡಿಕೊಡು, ನಿನ್ನ ಬಾಡಿಗೆ ಮಾಫಿ ಮಾಡ್ತೀನಿ' ಅಂದೆ. ಅದಕ್ಕವನು 'ಏನ್ಸಾ, ನಿಮ್ಮೆಂಡ್ತಿ ಕೈಯಲ್ಲಿ ನಂಗೆ ಒದೆಸೋ ಪ್ರೋಗ್ರಾಂ ಏನಾದ್ರು ಇಟ್ಕಂಡಿದೀರಾ?' ಅಂತ ಜಾರ್ಕಂಡ್ನಪ'.

'ಸರಿ ಕೊನೆಗೇನಾತು?'

'ಏನೂ ಬ್ಯಾಡಪ್ಪ, ರಕ್ತಮಾಂತ್ರಿಕ ಅಂತ ಕೊಚ್ಕೋತೀಯಲ್ಲ, ನಿನ್ನ ದಿವ್ಯ ಶಕ್ತಿ ಪ್ರಯೋಗಿಸಿ ಬೆಂಗಳೂರಲ್ಲಿ ಒಂದು ಆಕ್ಸಿಜನ್ ಬೆಡ್ ಕೊಡ್ಸೋಕಾಗುತ್ತಾ? ಅಂದೆ'.

'ವೆರಿಗುಡ್, ಅದಕ್ಕೇನಂದ?'

'ಸಾಯಂಕಾಲ ಬಾಡಿಗೆ ತಂದ್ಕೊಡ್ತೀನಿ ಅಂತ ಎದ್ದೋದ...'

ತೆಪರೇಸಿ ಮಾತಿಗೆ ದುಬ್ಬೀರನಿಗೆ ನಗು ತಡೆಯಲಾಗಲಿಲ್ಲ.

ಸಂಗತ

ಬುದ್ಧ, ಪ್ರಬುದ್ಧ ಜನವಿಜ್ಞಾನಿ

ಮಹಾಸೋಂಕಿನ ಈ ದುರ್ದಿನಗಳಲ್ಲಿ ಬೋಧಿಸತ್ವದ ಬಲವು ನಮ್ಮನ್ನು ಕಾಯಬಲ್ಲದು

• ಬಿ.ಎಸ್. ಭಗವಾನ್

ಬಯಸಿದ್ದು ಎಟಕುತ್ತಲೇ ಹೊಸ ಬಯಕೆಗಳು ಹುಟ್ಟಿಕೊಳ್ಳುತ್ತವೆ. ಆಸ್ತಿ, ಹಣ, ಅಂತಸ್ತುಗಳಂತಹ ಕೆಲವಕ್ಕೆ ಇತಿಮಿತಿಯೇ ಇಲ್ಲ. ಎಗ್ಗಿಲ್ಲದ ಅಪೇಕ್ಷೆ, ಕೋರಿಕೆಗಳು ಸಮಸಮಾಜಕ್ಕೆ ವಿಘ್ನಗಳು. ಹಾಗಾಗಿ ನೋವು, ನಿರಾಸೆ, ದುಃಖ. ಹಾಗಾಗಿ ಸುಖ, ಸಂತಸವು ಆಸೆಗಳ ವೃದ್ಧಿಯಲ್ಲಿಲ್ಲ, ಬದಲಿಗೆ ಅವುಗಳ ಕ್ಷಯದಲ್ಲಿದೆ ಎಂದು ಸುಮಾರು ಎರಡೂವರೆ ಸಹಸ್ರಮಾನಗಳ ಹಿಂದೆಯೇ ಸಾರಿದ ಪ್ರಖರ ವಿಚಾರವಾದಿ ಬುದ್ಧ.


ಸಾವನ್ನು ನಿರೀಕ್ಷಿಸಬೇಕು, ಅರ್ಥೈಸಿಕೊಳ್ಳಬೇಕು ಹಾಗೂ ಸಮ್ಮತಿಸಬೇಕೆಂದ ಅವನ ವಿಚಾರನಿಷ್ಠುರತೆ, ನೇರ ಮತ್ತು ಪಾರದರ್ಶಕ ನುಡಿಗಳು ನಿತ್ಯ ಪ್ರಸ್ತುತವಾಗಿವೆ, ಸರ್ವರನ್ನೂ ಆತ್ಮಾವಲೋಕನಕ್ಕೆ ಪ್ರೇರೇಪಿಸುತ್ತವೆ. 'ನಿಮ್ಮ ರೂವಾರಿಗಳು ನೀವೇ. ಪ್ರಶ್ನಿಸದೆ ಏನನ್ನೂ ಒಪ್ಪಬೇಡಿ' ಎಂದ ಈ ಮಹಾನ್ ದಾರ್ಶನಿಕನಿಗೆ ಮನುಕುಲದ ಮೊದಲ ವಿಜ್ಞಾನಿಯೆಂಬ ಜಾಗತಿಕ ಮನ್ನಣೆಯಿದೆ.

ಅರಿವಿನ ವಿಕಾಸಕ್ಕೆ ಜಿಜ್ಞಾಸೆಯೇ ಮೂಲ. ಯಾವುದೇ ಸಂಗತಿಯನ್ನು ಅವಲೋಕಿಸದೆ ಅನುಮೋದಿಸುವುದು ಒಂದು ದೌರ್ಬಲ್ಯ. ಎಲ್ಲರೂ ಅನುಸರಿಸುತ್ತಿದ್ದಾರೆಂದು, ತಾರ್ಕಿಕವಾಗಿದೆಯೆಂದು ನಂಬಬೇಡಿ. ನಿಮ್ಮ ಅನುಭವಕ್ಕೆ ಬಂದು ಅದು ನಿಮಗೂ ಇತರರಿಗೂ ಉತ್ತಮವೆಂದು ತೋರಿದರೆ ಮಾತ್ರವೇ ನಂಬಿ ಎನ್ನುವುದು ಈ ಜನವಿಜ್ಞಾನಿಯ ಹಿತವಾದ. ಕೇವಲ ಪರಸ್ಪರ ಪ್ರಶಂಸೆಯು ಸಮಾಜವನ್ನು ಪ್ರವಹಿಸಗೊಡದೆ ನಿಂತ ನೀರಾಗಿಸುವುದು.

ಬುದ್ಧ 'ಬೌದ್ಧಧರ್ಮ' ಸ್ಥಾಪಿಸಿದ ಎನ್ನುವುದಕ್ಕೂ ಮೀರಿ ಆತ ಜಾತ್ಯತೀತ ಆಧ್ಯಾತ್ಮಿಕ ಶೋಧನೆಗೆ ಅಡಿಪಾಯ ಹಾಕಿದ್ದು ಮುಖ್ಯವಾಗುತ್ತದೆ. ಮನುಷ್ಯನ ಬದುಕು ಘನವಾಗಲು ಅದು ಎಂತಿರಬೇಕು ಎಂಬ ಕುರಿತು ಬುದ್ಧ ಆಳವಾಗಿ ವಿಶ್ಲೇಷಿಸಿದ. ಜನರಿಂದ ಅಗತ್ಯ ಪರಿಷ್ಕಾರಗಳನ್ನು ಸ್ವಾಗತಿಸಿದ ಕಾರಣಕ್ಕೆ ಅವನ ಮಹತ್ವದ ಗ್ರಹಿಕೆಗಳು 'ಜನಧರ್ಮ' ಎನ್ನಿಸಿದ್ದೇ ಹೆಚ್ಚು. ಬುದ್ಧನ ಚಿಂತನೆಗಳು ಅನ್ಯ ಧರ್ಮ, ಸಿದ್ಧಾಂತಗಳೊಂದಿಗೆ ಸಂಘರ್ಷಕ್ಕಿಳಿಯಲಿಲ್ಲ, ಬದಲಿಗೆ ಪರಸ್ಪರ ವಿಚಾರವಿನಿಮಯಕ್ಕಿಳಿದವು.

ಜೀವನವು ವ್ಯಾಧಿ, ದುಗುಡ, ವ್ಯಥೆ, ಆತಂಕ, ಸಾವು, ನೋವುಗಳ ಸರಮಾಲೆ ಎಂದ ಬುದ್ಧ. ಹಾಗೆಂದಮಾತ್ರಕ್ಕೆ ಆತ ನಿರಾಶಾವಾದಿಯಲ್ಲ. ಅವಕ್ಕೆ ತಕ್ಕ ಚಿಕಿತ್ಸೆಯನ್ನೂ ಸೂಚಿಸುವ ಕುಶಲ ವೈದ್ಯನೂ ಆದ. ದುಃಖ, ಅಸೌಖ್ಯಗಳಿದ್ದೂ ಅವು ಬಾಧಿಸದಂತೆ ಬದುಕನ್ನು ಸಾಗಿಸುವುದನ್ನು ಜನಮಾನಸಕ್ಕೆ ಕಲಿಸಿದ. ಆ ಪ್ರಬುದ್ಧತೆಯೆ 'ನಿರ್ವಾಣ'. ಆರೋಗ್ಯದ ರಹಸ್ಯವೆಂದರೆ ವರ್ತಮಾನದಲ್ಲಿ ಬದುಕುವುದು. ನಿಮ್ಮ ಕೋಪಕ್ಕೆ ನಿಮ್ಮನ್ನು ಯಾರೂ ಶಿಕ್ಷಿಸುವುದಿಲ್ಲ, ನಿಮ್ಮ ಕೋಪವೇ ನಿಮ್ಮನ್ನು ಶಿಕ್ಷಿಸುವುದು. ಕಲಹಪ್ರಿಯ ತನ್ನ ಎದುರಾಳಿಯೊಂದಿಗೆ ಕಲಹವಾಡುವುದಿಲ್ಲ, ಅವನ ಕಲಹ ತನ್ನೊಂದಿಗೇ!

ಸಂಪ್ರದಾಯ, ಪರಂಪರೆ, ಆರಾಧನೆ, ಆಚರಣೆಗಳಿಗಿಂತ ನೈತಿಕ ಹೊಣೆಗಾರಿಕೆಗಳು ಹಾಗೂ ಸಾಧ್ಯತೆಗಳತ್ತ ಗಮನಹರಿಸುವುದೇ ಶ್ರೇಯಸ್ಸು. ಅಹಮಿಕೆ ಎಂಬುದು ನಮ್ಮ ಭಾರವನ್ನು ನಾವೇ ಹೊತ್ತಂತೆ. ಪ್ರಾರ್ಥನೆಗೆ ಓಗೊಡುವ ಯಾವ ಶಕ್ತಿಯೂ ಜಗತ್ತಿನಲ್ಲಿ ಇಲ್ಲ. ಫಲ ಸಿಗುವುದು ಕೋರಿಕೆಯಿಂದಲ್ಲ, ಕಾಯಕದಿಂದ. ಎಲ್ಲ ವಿದ್ಯಮಾನಗಳೂ ಕಾರ್ಯಕಾರಣ ನಿಯಮಕ್ಕೊಳಪಟ್ಟಿವೆ. ಜೀವನ ತೀರಾ ವೈಭವದ್ದಾಗಲಿ ಅಥವಾ ತೀರಾ ದಾರಿದ್ರ್ಯದ್ದಾಗಲಿ ಸಲ್ಲದು. ಇವೆರಡರ ನಡುವಿನ ಪಥವನ್ನು ಆರಿಸಿಕೊಳ್ಳುವುದು ಜಾಣ್ಮೆ... ಹೀಗೆ ಆಪ್ತ ಹಿರೀಕರೊಬ್ಬರು ನಮ್ಮ ಬೆನ್ನು ಸವರಿ ಕಿವಿಯಲ್ಲಿ ಉಸುರಿದಂತೆ ಭಾಸವಾಗುತ್ತವೆ ಬುದ್ಧನ ಜಾಣ ಮಾತುಗಳು. ಆತನ ಬೋಧನೆಗಳನ್ನು ಇಂದಿನ ಸಾಮಾಜಿಕ, ರಾಜಕೀಯ ವಿವಾದಾಂಶಗಳ ಪರಿಹಾರಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.



ಬುದ್ಧನ ಸಿದ್ಧಾಂತ ಎಲ್ಲದರಲ್ಲೂ ಅಂತರ್‌ಸಂಬಂಧವನ್ನು ಗುರುತಿಸುತ್ತದೆ. ಅದಿಲ್ಲದೆ ಇದಿಲ್ಲ. ಇದಿದ್ದರೇನೆ ಅದು. ಒಬ್ಬರೇ ಒಂಟಿಯಾಗಿ ಸಂತಸವಾಗಿರುವುದು ಹೇಗೆ ತಾನೆ ಸಾಧ್ಯ? ದುಃಖವೆಂಬ ಕಡಲಿನಲ್ಲಿ ಸೌಖ್ಯವೆಂಬ ಒಂದು ನಡುಗಡ್ಡೆಯನ್ನು ಊಹಿಸಲೂ ಆಗದು. ಕುಟುಂಬದಲ್ಲಿ, ಸಮಾಜದಲ್ಲಿ, ಸಂಸ್ಕೃತಿಯಲ್ಲೇ ಸಂತೋಷವನ್ನು ಅರಸಬೇಕು.

ಕೋವಿಡ್ ಖಂಡಾಂತರ ವ್ಯಾಧಿ ಕಾಡುತ್ತಿರುವ ಈ ದುರ್ದಿನಗಳನ್ನು ಧೈರ್ಯಗೆಡದೆ ನಿಭಾಯಿಸಲು ಬುದ್ಧನಿಂದ ನಾವು ಪ್ರಭಾವಿತರಾಗುವುದು ಹೇಗೆ? ಅಂತರ ಕಾಪಾಡಿಕೊಳ್ಳಬೇಕಾದದ್ದು ಭೌತಿಕವಾಗಿಯೇ ವಿನಾ ಮಾನಸಿಕವಾಗಿ ಅಲ್ಲವೆಂಬ ಪ್ರಜ್ಞೆ. ತನ್ನದಲ್ಲದೆ ಪರರ ಭದ್ರತೆಯ ದೃಷ್ಟಿಯಿಂದಲೂ ಮುಖಗವಸು ಧಾರಣೆ, ಸ್ಯಾನಿಟೈಸರ್ ಲೇಪನ ಎನ್ನುವ ಜಾಗೃತಿ. 'ಬೋಧಿಸತ್ವ' ಎಂದರೆ ಜ್ಞಾನೋದಯಕ್ಕೆ ಸರ್ವ ಶಕ್ತಿಯನ್ನೂ ಮೈಗೂಡಿಸಿಕೊಂಡು ಅಣಿಯಾಗುವ ಪರಿಕಲ್ಪನೆ. ಎಂದಮೇಲೆ ಕೊರೊನಾ ಎದುರಿಸಲು ಬೋಧಿಸತ್ವ ಅರ್ಥಾತ್ ಜಾಗೃತಿ ಮತ್ತು ಯೋಧನ ಬಲ ಒಗ್ಗೂಡಿಸಿಕೊಳ್ಳುವುದು ಇಂದಿನ ಜರೂರು.

ಬುದ್ಧ ತನ್ನನ್ನು 'ದೇವರು' ಎಂದುಕೊಳ್ಳಲಿಲ್ಲ. ವಿಪರ್ಯಾಸವೆಂದರೆ, ಆತನ ಆದರ್ಶಗಳ ಪಾಲನೆಗಿಂತ ಜಗತ್ತಿನೆಲ್ಲೆಡೆ ಅವನ ಮೂರ್ತಿಗಳ ಸ್ಥಾಪನೆಯೇ ಮೇಲುಗೈ ಸಾಧಿಸಿದೆ. ಇಷ್ಟು ಎತ್ತರ, ಅದಕ್ಕೂ ಎತ್ತರ ಎನ್ನುವ ಪೈಪೋಟಿ, ಪ್ರತಿಷ್ಠೆಯ ತಾಂಡವ. ಭಾವಿ ಪೀಳಿಗೆಗಳು ಸಂಪನ್ನರ ಮಾದರಿ ನಡೆ, ನುಡಿಗಳಿಂದ ಪ್ರಭಾವಿತಗೊಳ್ಳುವುವೇ ಹೊರತು ಅವರ ಪ್ರತಿರೂಪಗಳಿಂದಲ್ಲ. ಇತಿಹಾಸದಲ್ಲಿ ಸಂದ ಸಂತರೆಲ್ಲ ಸ್ಥಾವರದ ಕಡುವಿರೋಧಿಗಳೇ. ಕಾರಣ ಸ್ಪಷ್ಟವಿದೆ, ಕಾಲದ ನಾಗಾಲೋಟದಲ್ಲಿ ಸ್ಥಾವರ ಭಗ್ನವಾಗುವುದು ಖಾತರಿ. ಆದರೆ ಜಂಗಮ ಅಳಿವಿಗೆ ಅತೀತ. ಹಾಗಾಗಿ ಬುದ್ಧ ಅಥವಾ ಅವನಂತಹ ಶ್ರೇಷ್ಠರ ನಡೆ, ನುಡಿಗಳು ಅಂತರಂಗವನ್ನು ಬೆಳಗಿದರೆ ಪುತ್ಥಳಿಯ ಹಂಗೇಕೆ?

ವಾಚಕರ ವಾಣಿ

ಆಮ್ಲಜನಕ ಪೂರೈಕೆ: ಅವಿವೇಕತನದ ನಡೆ

ಕರ್ನಾಟಕದಲ್ಲೇ ಉತ್ಪಾದನೆಯಾಗುವ ಆಮ್ಲಜನಕದ ಒಂದು ಪಾಲು ಬೇರೆ ರಾಜ್ಯಗಳಿಗೆ ಸರಬರಾಜಾಗುತ್ತಿದ್ದು, ಈಗ ಇಲ್ಲಿನ ಅವಶ್ಯಕತೆಗೆ ದೂರದ ವಿಶಾಖಪಟ್ಟಣದಿಂದ ಆಮ್ಲಜನಕ ನಮಗೆ ಬರಬೇಕಾಗಿದೆ, ಇದು ಅಸಂಬದ್ಧ ಎಂದು ಪತ್ರಿಕೆಯು ಸಂಪಾದಕೀಯದಲ್ಲಿ (ಪ್ರ.ವಾ., ಮೇ 6) ಟೀಕಿಸಿದೆ. ಆದರೆ, ಇದು ಅಸಂಬದ್ಧವಷ್ಟೇ ಅಲ್ಲ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅವಿವೇಕತನವನ್ನು ಸಹ ಎತ್ತಿ ತೋರಿಸುತ್ತದೆ. ನಮ್ಮ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯಾಗುತ್ತಿದ್ದ ಈ ಜೀವಪೋಷಕವನ್ನು ಬೇರೆ ರಾಜ್ಯಗಳಿಗೆ ಸಾಮಾನ್ಯ ಸಂದರ್ಭಗಳಲ್ಲಿ ವಿತರಿಸುತ್ತಿದ್ದುದು ಸಮಂಜಸವೇ ಸರಿ. ಆದರೆ ಈಗ ರಾಜ್ಯದಲ್ಲಿರುವುದು ಅತಿ ದಾರುಣವಾದ ಪರಿಸ್ಥಿತಿ. ರಾಜ್ಯದಲ್ಲಿ ಆಮ್ಲಜನಕದ ಗರಿಷ್ಠ ಪ್ರಮಾಣದ ಉತ್ಪಾದನೆಯೇ ನಮ್ಮ ಇಂದಿನ ಅಗತ್ಯವನ್ನು (1,792 ಟನ್ನುಗಳು) ಲೆಕ್ಕಕ್ಕೆ ಹಿಡಿದರೆ ಸುಮಾರು 750 ಟನ್ನುಗಳಷ್ಟು ಕಡಿಮೆ! ಹೀಗಿರುವಾಗ ಯಾವುದೋ ಸಂದರ್ಭದಲ್ಲಿ ಗೊತ್ತುಮಾಡಿದ್ದ ವ್ಯವಸ್ಥೆಗೇ ಜೋತುಬಿದ್ದು 'ಮನೆಗೆ ಮಾರಿ...'ಯಾಗುವ ದಯನೀಯ ಸ್ಥಿತಿಯನ್ನು ರಾಜ್ಯವು ಮೈಮೇಲೆ ಹಾಕಿಕೊಂಡಿದೆ.

ಯಾವಾಗ ಇಲ್ಲಿನ ಅಗತ್ಯವು ನಮ್ಮ ಉತ್ಪಾದನೆಯ ಪ್ರಮಾಣವನ್ನು ಮೀರಿತೋ ಆಗಿನಿಂದಲೇ ರಾಜ್ಯ ಎಚ್ಚೆತ್ತುಕೊಳ್ಳದೆ ಹಿಂದಿನ ವ್ಯವಸ್ಥೆಗೇ ಕಟ್ಟುಬಿದ್ದು, ಈಗ ಕೇಂದ್ರದ ಮುಂದೆ ಭಿಕ್ಷೆ ಬೇಡುವ ಪರಿಸ್ಥಿತಿಯನ್ನು ತಂದುಕೊಂಡಿರುವುದು ಅವಿವೇಕವಲ್ಲದೆ ಮತ್ತೇನು? ಕೇವಲ ಆಮ್ಲಜನಕದ ಕೊರತೆಯಷ್ಟೇ ಅಲ್ಲ, ಲಸಿಕೆಗಳ ಕೊರತೆ ಕೂಡ ಬಾಯ್ದೆರೆದು ಒರಲುತ್ತಿದೆ. ನಮ್ಮ ಸಂಸದರು ಏನು ಮಾಡುತ್ತಿದ್ದಾರೆ? ಕೇಂದ್ರದ ವರಿಷ್ಠರ ಮುಂದೆ ಬಾಗಿ ನಿಲ್ಲಲೆಂದೇ ಇವರನ್ನು ಆಯ್ಕೆ ಮಾಡಿದ್ದು?

ಸಾಮಗ ದತ್ತಾತ್ರಿ, ಬೆಂಗಳೂರು

'ಆಪರೇಷನ್' ಕೃತ್ಯಗಳಿಗೆ ಪಾಠವಾಗಲಿ

'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕಾರ್ಯವೈಖರಿ ಮತ್ತು ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿರುವ ಎಚ್.ವಿಶ್ವನಾಥ್ ಅವರು ಪಕ್ಷವಿರೋಧಿ ಹೇಳಿಕೆ ನೀಡುತ್ತಿರುವುದನ್ನು ನಿಲ್ಲಿಸಲಿ, ಇಲ್ಲವಾದರೆ ಪಕ್ಷವನ್ನು ಬಿಡಲಿ' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿರುವುದು ವರದಿಯಾಗಿದೆ (ಪ್ರ.ವಾ., ಮೇ 6).

ಎಚ್.ವಿಶ್ವನಾಥ್ ಅವರು ಹೇಳುತ್ತಿರುವುದರಲ್ಲಿ ನಿಜವೇ ಇದ್ದರೆ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಸರಿಪಡಿಸಿ ಜನರಿಗೆ ಉತ್ತಮ ಆಡಳಿತ ನೀಡಲಿ ಅಥವಾ ಅವರು ಹೇಳಿದ್ದರಲ್ಲಿ ತಪ್ಪಿದ್ದರೆ ಆಡಳಿತಾರೂಢ ಪಕ್ಷವು ಅವರ ವಿರುದ್ಧವೇ ಕ್ರಮ ಕೈಗೊಳ್ಳಲಿ. ಪಕ್ಷವಿರೋಧಿ ಹೇಳಿಕೆ ನೀಡುತ್ತಿದ್ದು ಪಕ್ಷಕ್ಕೆ ಮುಜುಗರ ಆಗುತ್ತಿದ್ದರೆ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಕೈತೊಳೆದುಕೊಳ್ಳಲಿ.

ಎಚ್.ವಿಶ್ವನಾಥ್ ಅವರು ಈ ಹಿಂದೆ ಇದ್ದ ಎರಡು ಪಕ್ಷಗಳಲ್ಲೂ ಇದೇ ರೀತಿ ವರ್ತಿಸಿದ್ದರು. ಅದನ್ನು ನೋಡಿಯೂ ಬಿಜೆಪಿ ಕೇವಲ ಅಧಿಕಾರದಾಹದಿಂದ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡು ಈಗ ಮುಜುಗರ ಅನುಭವಿಸುವಂತಾಗಿದೆ. ಕೇವಲ ಅಧಿಕಾರಕ್ಕಾಗಿ ಆಪರೇಷನ್ ಕಮಲ, ಆಪರೇಷನ್ ಹಸ್ತದಂತಹ ಕೃತ್ಯಗಳಿಗೆ ಮುಂದಾಗುವ ಪಕ್ಷಗಳಿಗೆ ಇದೊಂದು ಪಾಠವಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕೋಮಿನ ಬಣ್ಣವೇಕೆ?

ಜಾತಿ- ಧರ್ಮಗಳ
ಬೇಲಿ ದಾಟಿ ಎತ್ತರಕ್ಕೆ
ಬೆಳೆದು ನಿಂತಿದೆ ಭ್ರಷ್ಟಾಚಾರ,
ತಪ್ಪು ಯಾರೇ ಮಾಡಿದ್ದರೂ
ಆಗಲೇಬೇಕು ತಕ್ಕಶಿಕ್ಷೆ
ಭ್ರಷ್ಟತೆಗೆ ಇಲ್ಲ
ಕೋಮಿನ ಶಿಷ್ಟಾಚಾರ!

ಎಚ್.ಕೆ.ಕೊಟ್ರಪ್ಪ, ಹರಿಹರ

ರಾಗಿ ಬೆಳೆಯುವವರಿಗೆ ಏಕೆ 'ರಾಗಿ ಭಾಗ್ಯ'?

ಪಡಿತರ ವಲಯಕ್ಕೆ 'ರಾಗಿ ಭಾಗ್ಯ'ವಿರಲಿ ಎಂದು ಲೇಖನದಲ್ಲಿ (ಸಂಗತ, ಮೇ 6) ಹೇಳಿರುವ ಹೊರೆಯಾಲ ದೊರೆಸ್ವಾಮಿ ಅವರು ರಾಗಿಯ ಬಗೆಗಿನ ಉಪಯೋಗಗಳನ್ನು ವಿವರಿಸಿದ್ದಾರೆ. ಜೊತೆಗೆ ರಾಗಿ ಹಾಗೂ ಅಕ್ಕಿಯ ನಡುವೆ ತಾರತಮ್ಯ ಏಕೆ ಎಂಬ ಪ್ರಶ್ನೆಯನ್ನೂ ಕೇಳಿದ್ದಾರೆ. ಆದರೆ ವಾಸ್ತವವಾಗಿ ನೋಡಿದರೆ, ದಕ್ಷಿಣ ಕರ್ನಾಟಕ ಭಾಗದ ಬಹುತೇಕ ಪಡಿತರ ಚೀಟಿದಾರರು ರಾಗಿಯ ಬದಲು 5 ಕೆ.ಜಿ.ಯಷ್ಟು ಅಕ್ಕಿಯನ್ನೇ ಕೊಡಲಿ ಎಂಬ ನಿಲುವನ್ನು ಹೊಂದಿದ್ದಾರೆ.

ದಕ್ಷಿಣ ಕರ್ನಾಟಕ ಭಾಗದ ಜನ, ಅದರಲ್ಲೂ ಮೈಸೂರು ಭಾಗದವರು (ಮೈಸೂರು, ಮಂಡ್ಯ, ರಾಮನಗರ, ತುಮಕೂರು, ಹಾಸನ, ಚಾಮರಾಜನಗರ) ರಾಗಿಯನ್ನು ಹೆಚ್ಚು ಬಳಸುತ್ತಾರೆ. ರಾಗಿ ಮುದ್ದೆ ಈ ಭಾಗದ ಜನರಿಗೆ ದಿನವೂ ಬೇಕಿರುವ ಆಹಾರ. ಹಿಂದಿನ ಕಾಲದಿಂದಲೂ ರಾಗಿಯನ್ನೇ ಉಪಯೋಗಿಸಿ ರಾಗಿಯನ್ನೇ ಹೆಚ್ಚು ಹೆಚ್ಚು ಬೆಳೆಯುತ್ತಾ ಬಂದಿದ್ದಾರೆ. 50- 60 ವರ್ಷಗಳ ಹಿಂದೆ ನೀರಾವರಿ ಇಲ್ಲದೆ ಭತ್ತ ಬೆಳೆಯಲು ಆಗದವರು, ಅಕ್ಕಿ ಕೊಳ್ಳಲು ಆಗದವರು ವಾರಕ್ಕೊಮ್ಮೆ, ಹಬ್ಬ ಹರಿದಿನಗಳಲ್ಲಿ ಅನ್ನ ತಿನ್ನುತ್ತಿದ್ದರು ಎಂಬ ಮಾತು ಸಹ ಇದೆ. ಇವರು ಅಕ್ಕಿಯನ್ನು ತಮ್ಮ ದಿನನಿತ್ಯದ ಆಹಾರದಲ್ಲಿ ಬಳಸಲು ಪ್ರಾರಂಭಿಸಿದ್ದು ಪಡಿತರ ಅಕ್ಕಿ ನೀಡಲಾರಂಭಿಸಿದ ಮೇಲೆ. ಕಡಿಮೆ ಖರ್ಚಿನಲ್ಲಿ ರಾಗಿ ಬೆಳೆದು, ಯಾವಾಗಲೂ ಉತ್ತಮ ಇಳುವರಿಯಾಗದಿದ್ದರೂ ತಮ್ಮ ಹೊಟ್ಟೆಪಾಡಿಗೆ ಸಾಕಾಗುವುದರಿಂದ ಈ ಪ್ರದೇಶದ ಜನರಿಗೆ ರಾಗಿ ಉತ್ತಮ ಆಯ್ಕೆಯಾಗಿತ್ತು. ಹೀಗೆ ರಾಗಿಯನ್ನೇ ಬೆಳೆದು ತಿನ್ನುವವರಿಗೆ ಅಕ್ಕಿಯ ಬದಲು ರಾಗಿ ಕೊಡುತ್ತೇವೆ ಎಂದರೆ ಸಹಜವಾಗಿ ಅಕ್ಕಿ ಕೊಡಿ ಎಂದೇ ಕೇಳುತ್ತಾರೆ.

ಇದರಲ್ಲಿ ರಾಗಿ ಮತ್ತು ಅಕ್ಕಿಯ ನಡುವೆ ಭೇದಭಾವದ ಪ್ರಶ್ನೆಯೇ ಇಲ್ಲ. ಅಕ್ಕಿಯ ಮೇಲಿನ ಒಲವು ಬಿಳಿಬಣ್ಣದ ಶ್ರೇಷ್ಠತೆ ಎಂಬುದೂ ಸಮಂಜಸವಲ್ಲ. ಉತ್ತರ ಕರ್ನಾಟಕ ಭಾಗದ ಜನರೂ ಜೋಳದ ಬದಲು ಅಕ್ಕಿಯನ್ನೇ ಕೊಡಿ ಎನ್ನುವುದು ಇದೇ ಕಾರಣಕ್ಕೆ ಇದ್ದರೂ ಇರಬಹುದು. ಸರ್ಕಾರ ತನಗೆ ಅನುಕೂಲವಾಗುವ ಆಹಾರ ಧಾನ್ಯವನ್ನು ನೀಡುವ ಬದಲು, ಪಡಿತರ ಚೀಟಿ ಹೊಂದಿರುವವರಿಗೆ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳಲು ಬಿಡಬೇಕು.

ಯಾದವ್ ಎಂ.ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



5 ಜಿ ತಂತ್ರಜ್ಞಾನದ ಪರೀಕ್ಷೆಗೆ ಕೇಂದ್ರ ಸರ್ಕಾರವು ಎರಡು ವರ್ಷಗಳ ವಿಳಂಬದ ಬಳಿಕ ಅನುಮತಿ ಕೊಟ್ಟಿದೆ. ಅತಿ ವೇಗ ಮತ್ತು ಹೆಚ್ಚು ವಿಶ್ವಾಸಾರ್ಹತೆಯ ಇಂಟರ್‌ನೆಟ್ ಸೇವೆ 5 ಜಿಯಿಂದಾಗಿ ಸಾಧ್ಯವಾಗಲಿದೆ. ಆದರೆ ಈ ಸೇವೆಗೆ ಬೇಕಾದಷ್ಟು ತರಂಗಾಂತರ ಲಭ್ಯವಿದೆಯೇ ಎಂಬ ಪ್ರಶ್ನೆಯೂ ಇದೆ. ಜತೆಗೆ, ತರಂಗಾಂತರಕ್ಕೆ ಸರ್ಕಾರ ನಿಗದಿ ಮಾಡಿದ ದರ ವಿಪರೀತ ಎನಿಸುವಷ್ಟು ಹೆಚ್ಚು ಎನ್ನಲಾಗುತ್ತಿದೆ. ತರಂಗಾಂತರ ದರ ದುಬಾರಿಯಾದರೆ 5 ಜಿ ತಂತ್ರಜ್ಞಾನದ ಪ್ರಯೋಜನವು ಸಾಮಾನ್ಯ ಜನರಿಗೆ ಗಗನ ಕುಸುಮವಾದೀತು

ಅಂಗೈಯಲ್ಲಿ ಅತಿ ವೇಗದ ಅಂತರ್ಜಾಲ

5ಜಿ ತಂತ್ರಜ್ಞಾನ ಎಂದರೇನು?

5ಜಿ ಎಂಬುದು ಐದನೇ ತಲೆಮಾರಿನ ಸೆಲ್ಯುಲಾರ್ ತಂತ್ರಜ್ಞಾನ. ವೇಗ ಮತ್ತು ಹೆಚ್ಚು ವಿಶ್ವಾಸಾರ್ಹ ಸಂವಹನವನ್ನು ಈ ತಂತ್ರಜ್ಞಾನ ಒದಗಿಸುತ್ತದೆ. 5ಜಿ ಗರಿಷ್ಠ ನೆಟ್‌ವರ್ಕ್ ಡೇಟಾ ವೇಗವು ಸೆಕೆಂಡಿಗೆ 2ರಿಂದ 20 ಗಿಗಾಬೈಟ್ (ಜಿಬಿಪಿಎಸ್) ಇರಲಿದೆ ಎಂದು ಸರ್ಕಾರದ ಸಮಿತಿ ವರದಿ ಅಭಿಪ್ರಾಯಪಟ್ಟಿದೆ.

ಈಗ ದೇಶದಲ್ಲಿರುವ 4ಜಿ ತಂತ್ರಜ್ಞಾನದ ಸರಾಸರಿ ವೇಗ ಪ್ರತಿ ಸೆಕೆಂಡಿಗೆ 6ರಿಂದ 7 ಮೆಗಾಬೈಟ್ (ಎಮ್‌ಬಿಪಿಎಸ್). ಮುಂದುವರಿದ ದೇಶಗಳಲ್ಲಿ 25 ಎಮ್‌ಬಿಪಿಎಸ್ ಇದೆ. ಆದರೆ 5ಜಿ ಅಸೀಮ ವೇಗಕ್ಕೆ ಹೆಸರಾದ ತಂತ್ರಜ್ಞಾನ. ದೇಶದಲ್ಲಿ 5ಜಿ ತಂತ್ರಜ್ಞಾನದ ಸೇವೆ ದೊರಕಿದಲ್ಲಿ, '8ಕೆ' ಸಿನಿಮಾ ಹಾಗೂ ಗ್ರಾಫಿಕ್ ಗೇಮ್‌ಗಳನ್ನು ಕೆಲವೇ ಸೆಕೆಂಡ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದಕ್ಕೆ 5ಜಿ ತಂತ್ರಜ್ಞಾನ ಬೆಂಬಲಿಸುವ ಉಪಕರಣಗಳು ಬೇಕು.

ಉಪಯೋಗ ಎಲ್ಲೆಲ್ಲಿ?

5ಜಿ ತಂತ್ರಜ್ಞಾನವು ಮೊಬೈಲ್ ಬಳಕೆಗೆ ಮಾತ್ರವಲ್ಲದೆ, ಬೇರೆಯೂ ಸಾಕಷ್ಟು ಕೊಡುಗೆ ನೀಡಲಿದೆ. ಟೆಲಿ ಮೆಡಿಸಿನ್, ಟೆಲಿ ಎಜುಕೇಷನ್, ಚಾಲಕರಹಿತ ಕಾರು, ಡ್ರೋನ್ ಆಧರಿತ ಕೃಷಿ ನಿಗಾ ವ್ಯವಸ್ಥೆ ಮೊದಲಾದ ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗಲಿದೆ. ಇಂಟರ್ನೆಟ್ ಆಫ್ ಥಿಂಗ್ಸ್‌ನಂತಹ (ಐಒಟಿ) ಉದಯೋನ್ಮುಖ ತಂತ್ರಜ್ಞಾನಗಳ ಬೆನ್ನೆಲುಬಾಗಿ ರೂಪುಗೊಳ್ಳುವ ನಿರೀಕ್ಷೆಯಿದೆ.

ಭಾರತೀಯ ನೆಟ್‌ವರ್ಕ್‌ಗಳಲ್ಲಿ 5ಜಿ ಪ್ರವೇಶಿಸಿದ ನಂತರವೂ ಹಿಂದಿನ ತಲೆಮಾರಿನ ಮೊಬೈಲ್ ತಂತ್ರಜ್ಞಾನಗಳಾದ 2ಜಿ, 3ಜಿ ಮತ್ತು 4ಜಿ ಬಳಕೆಯಲ್ಲಿ ಮುಂದುವರಿಯುತ್ತವೆ. ಅವುಗಳ ಸೇವೆ ನಿಲ್ಲಲು ಇನ್ನೂ 10 ಅಥವಾ ಹೆಚ್ಚಿನ ವರ್ಷಗಳು ತೆಗೆದುಕೊಳ್ಳಬಹುದು.

ಎಲ್‌ಟಿಇ ಮೊಬೈಲ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್‌ನ ಮೇಲ್ದರ್ಜೆಗೇರಿಸಿದ ಆವೃತ್ತಿಯೇ 5ಜಿ ತಂತ್ರಜ್ಞಾನ. ಮೂರು ಬ್ಯಾಂಡ್‌ಗಳಲ್ಲಿ ಇದು ಕೆಲಸ ಮಾಡುತ್ತದೆ. ಕಡಿಮೆ, ಮಧ್ಯಮ ಮತ್ತು ಅಧಿಕ ತರಂಗಾಂತರಗಳಿದ್ದು, ಮೂರೂ ಅದರದ್ದೇ ಆದ ಉಪಯೋಗ ಮತ್ತು ಮಿತಿಗಳನ್ನು ಹೊಂದಿವೆ.

ಪರೀಕ್ಷೆಗೆ ಧುಮುಕಿದ ಸೇವಾ ಸಂಸ್ಥೆಗಳು

5ಜಿ ತಂತ್ರಜ್ಞಾನದ ಪರೀಕ್ಷೆಗೆ ಅನುಮತಿ ನೀಡುತ್ತಿದ್ದಂತೆಯೇ ಖಾಸಗಿ ಕ್ಷೇತ್ರದ ಮೊಬೈಲ್ ಸೇವಾ ಸಂಸ್ಥೆಗಳು ಈ ತಂತ್ರಜ್ಞಾನದ ಪರೀಕ್ಷಾರ್ಥ ಸೇವೆ ಆರಂಭಿಸಲು ಮುಂದಾಗಿವೆ.

ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್, ವೊಡಾಫೋನ್ ಐಡಿಯಾ ಹಾಗೂ ಎಂಟಿಎನ್‌ಎಲ್ ಕಂಪನಿಗಳು ದೇಶದಾದ್ಯಂತ ಪ್ರಮುಖ ನಗರಗಳಲ್ಲಿ ಈ ಸೇವೆಯ ಪರೀಕ್ಷಾರ್ಥ ಸೇವೆ ಆರಂಭಿಸಲಿವೆ. ಎಷ್ಟು ಕಾಲದವರೆಗೆ ಪ್ರಯೋಗ ನಡೆಯಲಿದೆ ಎಂಬುದು ಸ್ಪಷ್ಟವಾಗಿಲ್ಲ.

ಈ ವರ್ಷಾಂತ್ಯದಲ್ಲಿ 5 ಜಿ ತರಂಗಾಂತರ ಹರಾಜು ನಡೆಯುವ ಸಾಧ್ಯತೆ ಇದೆ. ಅದಾದನಂತರ ಗ್ರಾಹಕರಿಗೆ ಪೂರ್ಣ ಪ್ರಮಾಣದಲ್ಲಿ ಈ ಸೇವೆ ಸಭ್ಯವಾಗಲಿದೆ.

ತರಂಗಾಂತರ ಕೊರತೆ ಸರಿದೂಗಿಸುವ ಸಮಸ್ಯೆ

5ಜಿ ಮೊಬೈಲ್ ಸೇವೆಗೆ ಭಾರತ ಸಿದ್ಧವಾಗುತ್ತಿದ್ದರೂ ಖಾಸಗಿ ಸಂಸ್ಥೆಗಳಿಗೆ ನೀಡಲು ಬೇಕಾದಷ್ಟು ತರಂಗಾಂತರ ಇದೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಲಭ್ಯವಿರುವ 300 ಮೆಗಾಹರ್ಟ್ಸ್ ತರಂಗಾಂತರದಲ್ಲಿ 25 ಮೆಗಾಹರ್ಟ್ಸ್ ತರಂಗಾಂತರವನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ ನೀಡಬೇಕು. ಉಪಗ್ರಹಗಳ ಬಳಕೆಗಾಗಿ ಇದು ಅಗತ್ಯ. 100 ಮೆಗಾಹರ್ಟ್ಸ್‌ನಷ್ಟು ತರಂಗಾಂತರವನ್ನು ರಕ್ಷಣಾ ಕ್ಷೇತ್ರಕ್ಕೆ ನೀಡಬೇಕಾಗಿದೆ.

ಆದ್ದರಿಂದ, ಹರಾಜಿಗೆ ಲಭ್ಯವಾಗುವುದು 175 ಮೆಗಾಹರ್ಟ್ಸ್ ಮಾತ್ರ. ಪ್ರಸಕ್ತ ದೇಶದಲ್ಲಿ ಮೊಬೈಲ್ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳಲ್ಲಿ ಇದನ್ನು ಹಂಚಿಕೆ ಮಾಡಬಾಕಾಗಿದೆ. ಆದ್ದರಿಂದ ಈ ಸಮಸ್ಯೆಯನ್ನು ಸರ್ಕಾರ ಹೇಗೆ ನಿರ್ವಹಿಸಲಿದೆ ಎಂಬುದು ಪ್ರಶ್ನೆಯಾಗಿದೆ.

'ನಾವು ಟೆಲಿಕಾಂ ಸೇವಾ ಸಂಸ್ಥೆಗಳ ಜತೆಗೆ ಮಾತುಕತೆ ನಡೆಸುತ್ತಿದ್ದೇವೆ. ಅವುಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದೆ. ಈ ಸಮಸ್ಯೆ ಬಗೆಹರಿಯುತ್ತದೆ ಎಂಬ ವಿಶ್ವಾಸವಿದೆ. ಸ್ವಲ್ಪ ಹೆಚ್ಚಿನ ತರಂಗಾಂತರ ನಮಗೆ ಲಭಿಸುತ್ತದೆಯೇ ಎಂಬ ಬಗ್ಗೆಯೂ ನಾವು ಪ್ರಯತ್ನಗಳನ್ನು ಮಾಡುತ್ತಿದ್ದೇವೆ' ಎಂದು ಕೇಂದ್ರ ದೂರಸಂಪರ್ಕ ಸಚಿವಾಲಯದ ಕಾರ್ಯದರ್ಶಿ ಹೇಳಿದ್ದಾರೆ.



ನಿರೀಕ್ಷೆಗೆ ತಕ್ಕಷ್ಟು ತರಂಗಾಂತರ ಲಭ್ಯವಾಗದಿದ್ದರೆ, ಸೇವೆಯ ಗುಣಮಟ್ಟ ಕುಸಿಯಬಹುದು ಮತ್ತು ಮಾಡಿರುವ ಹೂಡಿಕೆಗೆ ಅನುಗುಣವಾದ ಗಳಿಕೆ ಬರಲಾರದು ಎಂಬುದು ದೂರಸಂಪರ್ಕ ಸೇವಾ ಸಂಸ್ಥೆಗಳ ಆತಂಕವಾಗಿದೆ.

ಮೂರು ಬ್ಯಾಂಡ್, ಮೂರು ಉಪಯೋಗ

- ಕಡಿಮೆ ಬ್ಯಾಂಡ್ ತರಂಗಾಂತರವು ಇಂಟರ್ನೆಟ್ ಮತ್ತು ಡೇಟಾ ವಿನಿಮಯದ ವ್ಯಾಪ್ತಿ ಮತ್ತು ವೇಗದ ದೃಷ್ಟಿಯಿಂದ ಉತ್ತಮ ಎನಿಸಿದೆ. ಇದರ ಗರಿಷ್ಠ ವೇಗವನ್ನು 100 ಎಂಬಿಪಿಎಸ್‌ಗೆ ಸೀಮಿತಗೊಳಿಸಲಾಗಿದೆ. ಅತಿಹೆಚ್ಚು ಇಂಟರ್ನೆಟ್ ವೇಗ ಅಗತ್ಯವಿಲ್ಲದ ಮೊಬೈಲ್ ಬಳಕೆದಾರರಿಗೆ ಇದನ್ನು ನೀಡಬಹುದು. ಉದ್ಯಮದ ವಿಶೇಷ ಅಗತ್ಯಗಳಿಗೆ ಇದು ಸೂಕ್ತವಲ್ಲ.
- ಮಧ್ಯಮ ಬ್ಯಾಂಡ್ ತರಂಗಾಂತರವು ಕಡಿಮೆ ಬ್ಯಾಂಡ್‌ಗೆ ಹೋಲಿಸಿದರೆ ಅಧಿಕ ವೇಗವನ್ನು ಹೊಂದಿದೆ. ಆದರೆ ವ್ಯಾಪ್ತಿ ಮತ್ತು ಸಂಕೇತಗಳ ನುಗ್ಗುವಿಕೆಯ (ಪೆನಿಟ್ರೇಷನ್) ವಿಷಯದಲ್ಲಿ ಮಿತಿಗಳಿವೆ. ಈ ಬ್ಯಾಂಡ್ ಅನ್ನು ಕೈಗಾರಿಕೆಗಳಲ್ಲಿ ಬಳಸಬಹುದು. ನಿರ್ದಿಷ್ಟ ಉದ್ಯಮದ ಅಗತ್ಯಗಳಿಗೆ ತಕ್ಕಂತೆ ರೂಪಿಸಬಹುದು.
- ಅಧಿಕ ಬ್ಯಾಂಡ್ ತರಂಗಾಂತರವು ಹೆಚ್ಚಿನ ವೇಗಕ್ಕೆ ಹೆಸರಾಗಿದೆ. ಆದರೆ ಅತ್ಯಂತ ಸೀಮಿತ ವ್ಯಾಪ್ತಿ ಮತ್ತು ಸಂಕೇತ ನುಗ್ಗುವ ಹೆಚ್ಚು ಸಾಮರ್ಥ್ಯ ಹೊಂದಿದೆ. ಈ ವಿಭಾಗದಲ್ಲಿ ಇಂಟರ್ನೆಟ್ ವೇಗವು 20 ಜಿಬಿಪಿಎಸ್ ಎಂದು ಪರೀಕ್ಷಿಸಲಾಗಿದೆ. 4ಜಿಯಲ್ಲಿ ಗರಿಷ್ಠ ಇಂಟರ್ನೆಟ್ ಡೇಟಾ ವೇಗ 1 ಜಿಬಿಪಿಎಸ್ ಮಾತ್ರ.

5ಜಿ: ಭಾರತದ ಪರಿಸ್ಥಿತಿ



ವಾಣಿಜ್ಯ ಉದ್ದೇಶದ 5ಜಿ ಸೇವೆಗಳನ್ನು ಪ್ರಾರಂಭಿಸಲು ಭಾರತ ಇನ್ನೂ ಬಹಳಷ್ಟು ಹಾದಿ ಕ್ರಮಿಸಬೇಕಿದೆ. 2018ರಲ್ಲೇ 5ಜಿ ಸೇವೆಗೆ ಚಾಲನೆ ನೀಡುವ ಉದ್ದೇಶವಿತ್ತು. ಆದರೆ ಎರಡು ವರ್ಷಗಳ ಬಳಿಕ ಸರ್ಕಾರ ಪರೀಕ್ಷೆಗೆ ಅನುಮತಿ ನೀಡಿದೆ. ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳು ಸರ್ಕಾರದಿಂದ ಅನುಮತಿ ಕೇಳಿದ್ದವು. ರಿಲಯನ್ಸ್ ಕಂಪನಿಯು 5ಜಿ ಸಂಪರ್ಕಜಾಲವನ್ನು ಕಟ್ಟಲು ಸ್ವದೇಶಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ. ಈ ವರ್ಷಾಂತ್ಯಕ್ಕೆ ಇದು ಸಿದ್ಧವಾಗುವ ಸೂಚನೆಗಳಿವೆ. ಉಳಿದ ದೂರಸಂಪರ್ಕ ಕಂಪನಿಗಳು ವಿದೇಶಿ ಉಪಕರಣ ಹಾಗೂ ತಂತ್ರಜ್ಞಾನವನ್ನು ನೆಚ್ಚಿಕೊಂಡಿವೆ.

ಎಲ್ಲೆಲ್ಲಿ ಇದೆ?

ದಕ್ಷಿಣ ಕೊರಿಯಾ, ಚೀನಾ, ಅಮೆರಿಕ, ಜಪಾನ್, ಎಸ್ಟೋನಿಯಾ, ಸ್ವೀಡನ್ ಸೇರಿದಂತೆ 61 ದೇಶಗಳಲ್ಲಿ 5ಜಿ ಸೇವೆಯು ಜನರು ಹಾಗೂ ವಾಣಿಜ್ಯ ಬಳಕೆಗೆ ಲಭ್ಯವಿದೆ. ಕೆಲವು ದೇಶಗಳಲ್ಲಿ ಸೇವೆ ಲಭ್ಯವಾಗುವ ಕೊನೆಯ ಹಂತದಲ್ಲಿದೆ. ತಾನು ಮೊದಲು ಈ ಸೇವೆ ನೀಡಿದ್ದಾಗಿ ದಕ್ಷಿಣ ಕೊರಿಯಾ ಹೇಳಿಕೊಂಡಿದೆಯಾದರೂ ಅಮೆರಿಕ ಇದನ್ನು ಅಲ್ಲಗಳೆದಿದೆ.

ಆಧಾರ: ಪಿಟಿಐ, ಐಎನ್‌ಸಿ42, ಬಿಜಿಆರ್.ಇನ್

ದುಬಾರಿ ದರ?



ಪ್ರತಿ ಗಿಗಾಹರ್ಟ್ಸ್ ತರಂಗಾಂತರಕ್ಕೆ ₹492 ಕೋಟಿ ನಿಗದಿ ಮಾಡಬಹುದು ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಸರ್ಕಾರಕ್ಕೆ ಶಿಫಾರಸು ಮಾಡಿದೆ ಎಂಬುದನ್ನು ಭಾರತದ ದೂರಸಂಪರ್ಕ ಸೇವಾದಾತರ ಸಂಘಟನೆಯು (ಸಿಒಎಐ) ಟ್ರಾಯ್‌ಗೆ ಸಲ್ಲಿಸಿದ ವರದಿಯಲ್ಲಿ ಉಲ್ಲೇಖಿಸಿದೆ.

ಭಾರತ ಮತ್ತು ಇತರ ದೇಶಗಳಲ್ಲಿನ ತರಂಗಾಂತರ ದರವನ್ನು ಈ ವರದಿಯಲ್ಲಿ ಹೋಲಿಕೆ ಮಾಡಲಾಗಿದೆ. ಭಾರತದ ದರವು ಆಸ್ಟ್ರಿಯಾದ ದರಕ್ಕೆ ಹೋಲಿಸಿದರೆ 74 ಪಟ್ಟು, ಸ್ಪೇನ್‌ನಲ್ಲಿನ ದರಕ್ಕೆ ಹೋಲಿಸಿದರೆ 35 ಪಟ್ಟು ಮತ್ತು ಆಸ್ಟ್ರೇಲಿಯಾದಲ್ಲಿನ ದರಕ್ಕೆ ಹೋಲಿಸಿದರೆ 14 ಪಟ್ಟು ಹೆಚ್ಚು ಎಂದು ಹೇಳಲಾಗಿದೆ. ಇದೇ ದರವನ್ನು ದೂರಸಂಪರ್ಕ ಸೇವಾ ಕಂಪನಿಗಳು ಪಾವತಿಸಬೇಕು ಎಂದಾದರೆ ಬಳಕೆದಾರರಿಂದ ದುಬಾರಿ ಶುಲ್ಕವನ್ನು ವಸೂಲಿ ಮಾಡಬೇಕಾಗುತ್ತದೆ. ಹಾಗಾದರೆ, ಸಾಮಾನ್ಯ ಜನರಿಗೆ 5 ಜಿ ಕೈಗೆಟುಕಲಿಕ್ಕಿಲ್ಲ.

ಚೀನಾ ಕಂಪನಿಗಳನ್ನು ಹೊರಗಿಡಲಾಯಿತೇ?

ಭಾರತದಲ್ಲಿ 5ಜಿ ತಂತ್ರಜ್ಞಾನ ಪರೀಕ್ಷೆ ನಡೆಸಲು ಚೀನಾದ ಕಂಪನಿಗಳಿಗೆ ಈ ಮೊದಲು ಅನುಮತಿ ನೀಡಲಾಗಿತ್ತು. ಆದರೆ ಈಗ ಆರು ತಿಂಗಳು ಪರೀಕ್ಷೆ ನಡೆಸಲು ಅನುಮತಿ ಪಡೆದ ಕಂಪನಿಗಳಲ್ಲಿ ಚೀನಾದ ಯಾವ ಕಂಪನಿಯೂ ಇಲ್ಲ.

5ಜಿ ತಂತ್ರಜ್ಞಾನವನ್ನು ಭಾರತದ ಮೊಬೈಲ್ ಸೇವಾ ಸಂಸ್ಥೆಗಳೇ ಪರೀಕ್ಷೆಗೆ ಒಳಪಡಿಸಲಿವೆ. ಆದರೆ, ಈ ಕಂಪನಿಗಳಿಗೆ 5ಜಿ ತಂತ್ರಜ್ಞಾನವನ್ನು ಮೂಲ ಉಪಕರಣ ತಯಾರಿ ಕಂಪನಿಗಳು ಪೂರೈಸಲಿವೆ. ಭಾರತದಲ್ಲಿ, ಕೇಂದ್ರ ಸರ್ಕಾರದ ಅಧೀನ ಸಂಸ್ಥೆ 'ಸಿ-ಡಾಟ್' ಮಾತ್ರವೇ 5ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ನೋಕಿಯಾ, ಸ್ಯಾಮ್‌ಸಂಗ್, ಎರಿಕ್‌ಸನ್ ಹಾಗೂ ಚೀನಾದ ಹುವಾವೆ ಮತ್ತು ಝಡ್‌ಟಿಇ ಕಾರ್ಪೊರೇಷನ್ ಈ ತಂತ್ರಜ್ಞಾನ ಒದಗಿಸುತ್ತಿವೆ.

ದೇಶದಲ್ಲಿ 5ಜಿ ತಂತ್ರಜ್ಞಾನ ಪರೀಕ್ಷೆಗೆ ಭಾರ್ತಿ ಏರ್‌ಟೆಲ್ ಮತ್ತು ಜಿಯೊ ಇನ್ಫೊಕಾಂ ಅರ್ಜಿ ಸಲ್ಲಿಸಿದ್ದವು. ಭಾರ್ತಿ ಏರ್‌ಟೆಲ್ 5ಜಿ ಸೇವೆ ಪರೀಕ್ಷೆ ನಡೆಸಲು ತಂತ್ರಜ್ಞಾನ ಪೂರೈಕೆದಾರರಾಗಿ ಚೀನಾದ ಹುವಾವೆ, ಸ್ವೀಡನ್‌ನ ಎರಿಕ್‌ಸನ್ ಮತ್ತು ನೋಕಿಯಾ ಕಂಪನಿಯನ್ನು ಆಯ್ಕೆ ಮಾಡಿಕೊಂಡಿತ್ತು. ಜಿಯೊ ಕಂಪನಿಯು ತಂತ್ರಜ್ಞಾನ ಪೂರೈಕೆದಾರರಾಗಿ ಸ್ಯಾಮ್‌ಸಂಗ್ ಮತ್ತು ಚೀನಾದ ಝಡ್‌ಟಿಇ ಕಂಪನಿಗಳನ್ನು ಆಯ್ಕೆ ಮಾಡಿಕೊಂಡಿತ್ತು. ಈ ಪ್ರಸ್ತಾವಕ್ಕೆ ಅನುಮತಿಯೂ ಸಿಕ್ಕಿತ್ತು. ಕೋವಿಡ್‌ನ ಕಾರಣದಿಂದ ಈ ಈ ಪರೀಕ್ಷೆಗಳು ಆರಂಭವಾಗಲಿಲ್ಲ.

2020ರ ಸೆಪ್ಟೆಂಬರ್‌ನಲ್ಲಿ ಭಾರತದ ದೂರಸಂಪರ್ಕ ಸೇವಾ ಕಂಪನಿಗಳಿಗೆ, ದೂರಸಂಪರ್ಕ ಇಲಾಖೆಯು ಒಂದು ಪತ್ರ ಬರೆದಿತ್ತು. '5ಜಿ ತಂತ್ರಜ್ಞಾನ ಪೂರೈಸುವ ಕಂಪನಿಗಳಲ್ಲಿ, ಆದ್ಯತೆಯ ಕಂಪನಿಗಳನ್ನು ಉಲ್ಲೇಖಿಸಿ' ಎಂದು ಸೂಚನೆ ನೀಡಿತ್ತು. ಈ ಪ್ರಕಾರ ದೂರಸಂಪರ್ಕ ಕಂಪನಿಗಳು, 5ಜಿ ತಂತ್ರಜ್ಞಾನ ಪೂರೈಕೆಯ ಆದ್ಯತೆಯ ಕಂಪನಿಗಳಾಗಿ ನೋಕಿಯಾ, ಸ್ಯಾಮ್‌ಸಂಗ್ ಮತ್ತು ಎರಿಕ್‌ಸನ್ ಕಂಪನಿಗಳನ್ನು ಉಲ್ಲೇಖಿಸಿದ್ದವು. ಚೀನಾದ ಕಂಪನಿಗಳನ್ನು ಮೂರನೇ ಆದ್ಯತೆಯನ್ನಾಗಿ ಪರಿಗಣಿಸಿದ್ದವು. ಆದ್ಯತೆಯ ಮತ್ತು ಎರಡನೇ ಆದ್ಯತೆಯ ಕಂಪನಿಗಳ 5ಜಿ ತಂತ್ರಜ್ಞಾನ ಪರೀಕ್ಷೆಗೆ ಮಾತ್ರ ಅನುಮತಿ ನೀಡಲಾಗಿದೆ.

ಪತ್ರಿಕಾ ಸ್ವಾತಂತ್ರ್ಯ ಮೊಟಕು ಮಾಡಲಾಗದು: ಸುಪ್ರೀಂ ಕೋರ್ಟ್

ವರದಿಗಾರಿಕೆಗೆ ನಿರ್ಬಂಧ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಾಲಯದ ಪ್ರಕ್ರಿಯೆಯ ವರದಿಗಾರಿಕೆಗೆ ತಡೆ ಒಡ್ಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಸ್ಪಷ್ಟವಾಗಿ ಹೇಳಿದೆ. ನ್ಯಾಯಾಂಗ ಪ್ರಕ್ರಿಯೆಯ ವರದಿಗಾರಿಕೆಯು ಪತ್ರಿಕಾ ಸ್ವಾತಂತ್ರ್ಯ ಮತ್ತು ಮುಕ್ತ ನ್ಯಾಯಾಲಯ ತತ್ವಗಳ ಮುಂದುವರಿಕೆ ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ.

'ನ್ಯಾಯಾಲಯದ ಪ್ರಕ್ರಿಯೆಗಳನ್ನು ವರದಿ ಮಾಡುವ ವಿಚಾರದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಪ್ರಬಲ ಪ್ರತಿಪಾದಕನಾಗಿ ಈ ನ್ಯಾಯಾಲಯವು ನಿಲ್ಲುತ್ತದೆ. ಇದು ವಾಕ್ ಸ್ವಾತಂತ್ರ್ಯ ಮತ್ತು ಮಾತನಾಡುವ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯ, ಕೇಳಲು ಮತ್ತು ಕೇಳಿಸಿಕೊಳ್ಳಲು ಬಯಸುವವರ ಸ್ವಾತಂತ್ರ್ಯದ ಅವಿಭಾಜ್ಯ ಅಂಗ. ಎಲ್ಲಕ್ಕಿಂತ ಮುಖ್ಯವಾಗಿ ಇದು ನ್ಯಾಯಾಂಗವನ್ನು ಉತ್ತರದಾಯಿಯಾಗಿಸುತ್ತದೆ' ಎಂದು ಪೀಠವು ಹೇಳಿದೆ.

ಕೋವಿಡ್–19ರ ಎರಡನೇ ಅಲೆ ವ್ಯಾಪಕವಾಗಿ ಹರಡಲು ಚುನಾವಣಾ ಆಯೋಗವೇ ಕಾರಣ ಎಂದು ವಿಚಾರಣೆ ವೇಳೆ ಮದ್ರಾಸ್ ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಆದರೆ, ಈ ಅಭಿಪ್ರಾಯವು ಅಂತಿಮ ಆದೇಶದಲ್ಲಿ ಇರಲಿಲ್ಲ. ಹಾಗಾಗಿ ಅಂತಿಮ ಆದೇಶದ ಭಾಗವಾಗದ ವಿಚಾರಗಳನ್ನು ಮಾಧ್ಯಮವು ವರದಿ ಮಾಡಬಾರದು ಎಂದು ಕೋರಿ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ.

ನ್ಯಾಯಾಲಯದ ಅಧಿಕೃತ ಅಭಿಪ್ರಾಯವು ತೀರ್ಪು ಮತ್ತು ಆದೇಶಗಳಲ್ಲಿ ಇರುತ್ತದೆಯೇ ವಿನಾ ವಿಚಾರಣೆ ಸಂದರ್ಭದಲ್ಲಿ ವ್ಯಕ್ತವಾಗುವ ಮೌಖಿಕ ಅಭಿಪ್ರಾಯಗಳಲ್ಲಿ ಅಲ್ಲ ಎಂದೂ ಪೀಠವು ಹೇಳಿದೆ.

ಕೋವಿಡ್ ಹರಡಲು ನೆರವಾದ ಕಾರಣಕ್ಕೆ ಚುನಾವಣಾ ಆಯೋಗದ ಮೇಲೆ ಕೊಲೆ ಪ್ರಕರಣ ದಾಖಲಿಸಬಹುದು ಎಂದು ಮದ್ರಾಸ್ ಹೈಕೋರ್ಟ್ ಹೇಳಿರುವುದು ವರ್ಷಗಳಿಂದ ರೂಪುಗೊಂಡ ವರ್ಚಸ್ಸಿಗೆ ಹಾನಿ ಮಾಡಿದೆ ಎಂಬುದು ಆಯೋಗದ ತಕರಾರು ಆಗಿತ್ತು.

ತಂತ್ರಜ್ಞಾನದ ಮುನ್ನಡೆಯಿಂದಾಗಿ ನ್ಯಾಯಾಲಯದ ಪ್ರಕ್ರಿಯೆಗಳು ಸಾಮಾಜಿಕ ಜಾಲ ತಾಣಗಳು ಮತ್ತು ಇತರ ವೇದಿಕೆಗಳಲ್ಲಿ ನೇರವಾಗಿಯೇ ಪ್ರಸಾರ ಆಗುತ್ತಿವೆ. ಇದು ಕಳವಳಕ್ಕೆ ಕಾರಣವಲ್ಲ, ಬದಲಿಗೆ, ನಮ್ಮ ಸಂವಿಧಾನದ ವೈಶಿಷ್ಟ್ಯ ಎಂದು ಸಂಭ್ರಮಿಸಬೇಕಾದ ವಿಚಾರ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

'ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ನ್ಯಾಯಾಲಯದ ಪ್ರಕ್ರಿಯೆಯ ವರದಿಗಾರಿಕೆಗೂ ಅನ್ವಯವಾಗುತ್ತದೆ. ನ್ಯಾಯಾಂಗ ಪ್ರಕ್ರಿಯೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಯುವ ಹಕ್ಕು ಪೌರರಿಗೆ ಇದೆ' ಎಂದು ಪೀಠ ಹೇಳಿದೆ.

ಅಮೆರಿಕ ಮತ್ತು ಬ್ರಿಟನ್‌ನ ಸುಪ್ರೀಂ ಕೋರ್ಟ್, ಮೇಲ್ಮನವಿ ನ್ಯಾಯಾಲಯ ಮುಂತಾದೆಡೆ ನ್ಯಾಯಾಲಯಗಳ ಪ್ರಕ್ರಿಯೆಗಳನ್ನು ನೇರ ಪ್ರಸಾರ ಮಾಡಲಾಗುತ್ತಿದೆ. ನ್ಯಾಯದಾನ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಭಾಗ ವಹಿಸುವಿಕೆ ಇರಬೇಕು ಎಂಬ ಕಾರಣಕ್ಕೆ ಗುಜರಾತ್ ಹೈಕೋರ್ಟ್ ಕೂಡ ಪ್ರಕ್ರಿಯೆಯ ನೇರ ಪ್ರಸಾರ ನಡೆಸುತ್ತಿದೆ ಎಂಬುದನ್ನು ಪೀಠವು ಉಲ್ಲೇಖಿಸಿತು.

'ಹೈಕೋರ್ಟ್ ಅಭಿಪ್ರಾಯ ಕಠಿಣ, ಅಸಮರ್ಪಕ'



ಮದ್ರಾಸ್ ಹೈಕೋರ್ಟ್‌ನ ಮೌಖಿಕ ಅಭಿಪ್ರಾಯಗಳು 'ಕಠಿಣ'ವಾಗಿದ್ದವು, 'ಅಸಮರ್ಪಕ'ವಾಗಿದ್ದವು ಎಂದು ಪೀಠವು ಹೇಳಿದೆ. ಸ್ವಲ್ಪ ಎಚ್ಚರ ವಹಿಸಿದ್ದರೆ, ವಿವೇಚನೆ ತೋರಿದ್ದರೆ ಆಯೋಗವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಾಕುವ ಸ್ಥಿತಿ ಉಂಟಾಗುತ್ತಿರಲಿಲ್ಲ ಎಂದಿದೆ.

'ವಿಚಾರಣೆ ಸಂದರ್ಭದಲ್ಲಿ ಮತ್ತು ತೀರ್ಪುಗಳಲ್ಲಿ ಬಳಕೆಯಾಗುವ ಭಾಷೆಯು ನ್ಯಾಯಾಂಗೀಯ ಔಚಿತ್ಯಕ್ಕೆ ಅನುಗುಣವಾಗಿರಬೇಕು. ನ್ಯಾಯಾಂಗ ಪ್ರಕ್ರಿಯೆಯಲ್ಲಿ ಭಾಷೆಯು ಬಹಳ ಮುಖ್ಯವಾದ ಸಾಧನವಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಗಳ ಮೌಖಿಕ ಅಭಿಪ್ರಾಯವು ಚುನಾವಣಾ ಆಯೋಗಕ್ಕೆ ಶಿಕ್ಷೆ ವಿಧಿಸುವ ಉದ್ದೇಶವನ್ನು ಹೊಂದಿರಲಿಲ್ಲ ಎಂದೂ ಪೀಠ ಹೇಳಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಹೈಕೋರ್ಟ್‌ಗಳು ನಿರ್ವಹಿಸಿದ ಪಾತ್ರವನ್ನು ಪೀಠವು ಶ್ಲಾಘಿಸಿದೆ. ಆದರೆ, ಸಂದರ್ಭಕ್ಕೆ ಅನುಸಾರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಅವು ತಪ್ಪು ವ್ಯಾಖ್ಯಾನಕ್ಕೆ ಒಳಗಾಗಬಾರದು ಎಂಬ ಎಚ್ಚರವು ನ್ಯಾಯಮೂರ್ತಿಗಳಲ್ಲಿ ಇರಬೇಕು ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಅವರು ತಮಗೆ ತೀವ್ರ ಸ್ಪರ್ಧೆ ಒಡ್ಡಿದ್ದ ಬಿಜೆಪಿಯನ್ನು ಭಾರಿ ಅಂತರದಿಂದ ಸೋಲಿಸಿದ್ದಾರೆ. ಗೆದ್ದ ಬಳಿಕ ದೀದಿ ಅವರು ಆರ್‌ಎಸ್‌ಎಸ್‌ಗೆ ಸಂಬಂಧಿಸಿದ 125 ಶಾಲೆಗಳನ್ನು ಮುಚ್ಚಲು ಆದೇಶ ನೀಡಿದ್ದಾರೆ. ಈ ಸುದ್ದಿ ರಿಪಬ್ಲಿಕ್ ಟಿವಿಯಲ್ಲಿ ಪ್ರಸಾರವಾಗಿದ್ದು, ಸ್ಕ್ರೀನ್‌ಶಾಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಷೇರ್ ಆಗುತ್ತಿವೆ. ಮಮತಾ ನಡೆಯನ್ನು ಟ್ವಿಟರ್ ಹಾಗೂ ಫೇಸ್‌ಬುಕ್‌ನಲ್ಲಿ ಖಂಡಿಸಲಾಗಿದೆ.



ಶಾಲೆಗಳ ವಿರುದ್ಧ ಮಮತಾ ಅವರು ಕ್ರಮ ತೆಗೆದುಕೊಂಡ ಸುದ್ದಿ ಮೂರು ವರ್ಷ ಹಳೆಯದು ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಪಠ್ಯಕ್ರಮ ಅನುಸರಿಸದ ಹಾಗೂ ಎನ್‌ಒಸಿ ಪಡೆಯದ ಕಾರಣ ರಾಜ್ಯದ 493 ಶಾಲೆಗಳ ವಿರುದ್ಧ ಕ್ರಮಕ್ಕೆ ಸರ್ಕಾರ ಆದೇಶಿಸಿತ್ತು. ಇದರಲ್ಲಿ ಆರ್‌ಎಸ್‌ಎಸ್‌ನ 125 ಶಾಲೆಗಳು ಸೇರಿದ್ದವು. ರಾಜ್ಯದ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಅವರು 2018ರ ಫೆಬ್ರುವರಿ 20ರಂದು ಸದನಕ್ಕೆ ಈ ಮಾಹಿತಿ ತಿಳಿಸಿದ್ದರು ಎಂದು ವಿವಿಧ ಪತ್ರಿಕೆಗಳು ಅಂದು ವರದಿ ಮಾಡಿದ್ದವು. ಆಗ ನೀಡಿದ್ದ ಆದೇಶ ಈಗಿನದ್ದು ಎಂಬುದಾಗಿ ತಿರುಚಿ ಹಂಚಿಕೊಳ್ಳಲಾಗುತ್ತಿದೆ ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮತ್ತೊಮ್ಮೆ ಮುಖಭಂಗ

ಗಿಳಿಯ ಮಾತು ಕೇಳಿ ಮಹೋಷಧಕುಮಾರನಿಗೆ ಸಂಚಿನ ಸಂಪೂರ್ಣ ಅರಿವಾಯಿತು. ರಾಜನ ಬಳಿಗೆ ಹೋಗಿ ಸೂಕ್ಷ್ಮವಾಗಿ ಈ ಸಂಬಂಧ ಬೇಡ ಎಂದು ಅರಿಕೆ ಮಾಡಿದ. ಆದರೆ ಪಾಂಚಾಲ ಚಂಡಿಯ ರೂಪಕ್ಕೆ ಪೂರ್ತಿ ಮರುಳಾದ್ದರಿಂದ ಅವನಿಗೆ ಕುಮಾರನ ಮಾತು ಇಷ್ಟವಾಗಲಿಲ್ಲ. ಈ ರಾಜ ಕಾಮದ ಸುಳಿಗೆ ಸಿಕ್ಕಿದ್ದಾನೆ, ಆಕರ್ಷಣೆಯನ್ನು ಬಿಡಲಾರ ಎಂಬುದು ಅರಿವಾಗಿ ಮಹೋಷಧಕುಮಾರ, ಆಯ್ತು, ರಾಜನಿಗೆ ಆ ಸುಂದರಿಯೊಂದಿಗೆ ಮದುವೆ ಮಾಡಿ ಕರೆತರುತ್ತೇನೆ. ಬ್ರಹ್ಮದತ್ತ ಹಾಗೂ ಕೇವಟ್ಟರು ಹದಿನೆಂಟು ಅಕ್ಷೋಹಿಣಿ ಸೈನ್ಯವನ್ನು ತಂದರೂ ಪಾರು ಮಾಡುತ್ತೇನೆ ಎಂದು ತೀರ್ಮಾನಿಸಿದ.

ಮರುದಿನ ರಾಜನಿಗೆ ಹೇಳಿದ, 'ಪ್ರಭೂ, ನೀವು ಮದುವೆಯ ನಿಶ್ಚಯಕ್ಕೆ ಅವರ ದೇಶಕ್ಕೆ ಹೋಗಬೇಕಲ್ಲವೆ? ಆದರೆ ಒಂದು ಮಾತು. ನಾನು ಮುಂದೆ ಹೋಗಿ ಅಲ್ಲಿ ತಾವು ವಾಸಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿ ತಮಗೆ ತಿಳಿಸಿದ ಮೇಲೆಯೇ ಅಲ್ಲಿಗೆ ಬರಬೇಕು'. ರಾಜ ಒಪ್ಪಿದ. ಮುಂದೆ ಎರಡು ದಿನಗಳಲ್ಲಿ ನೂರಾರು ಜನ ಅತ್ಯಂತ ಕುಶಲಕರ್ಮಿಗಳು, ನೂರು ಜನ ಬುದ್ಧಿವಂತರು, ಹತ್ತು ಸಾವಿರ ಜನ ಸೈನಿಕರು, ಆನೆ, ಕುದುರೆ, ಪದಾತಿ ದಳ ಎಲ್ಲರನ್ನು ಸೇರಿಸಿಕೊಂಡು ಹೊರಟ. ತನ್ನ ನಂಬಿಕಸ್ತರಿಗೆ ಹೇಳಿ ಮೂರುನೂರು ಹಡಗುಗಳನ್ನು ಗಂಗಾನದಿಯಲ್ಲಿ ಅಲ್ಲಲ್ಲಿ ನಿಲ್ಲಿಸಿ, ರಾಜ ಅಲ್ಲಿಗೆ ಬಂದಾಗ ಅವನಿಗೆ ರಕ್ಷಣೆ ನೀಡಬೇಕೆಂದು ಆಜ್ಞೆ ಮಾಡಿದ. ನಂತರ ದಾರಿಯಲ್ಲಿ ಬಂದ ಪ್ರತಿಯೊಂದು ಊರಿನಲ್ಲಿ ಐದು ನೂರು ಸೈನಿಕರು ಮತ್ತು ಒಬ್ಬ ಬುದ್ಧಿವಂತನನ್ನು ಮಂತ್ರಿಯಾಗಿ ನೇಮಿಸಿದ. ಅವರು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತ, ಅಲ್ಲಲ್ಲಿ ಪ್ರಬಲವಾದ ಸೈನ್ಯವನ್ನು ನಿರ್ಮಿಸಬೇಕು. ರಾಜನ ಪರಿವಾರ ಅಲ್ಲಿಗೆ ಬಂದರೆ ಪರಿವಾರದ ರಕ್ಷಣೆ ಅವರ ಜವಾಬ್ದಾರಿ ಎಂದು ನಿಲ್ಲಿಸಿದ.

ನಂತರ ಪ್ರವಾಸ ಮಾಡಿ ಪಾಂಚಾಲರಾಜ ಬ್ರಹ್ಮದತ್ತನ ನಗರಕ್ಕೆ ಬಂದ. ರಾಜನನ್ನು ಭೆಟ್ಟಿಯಾಗಿ, ಕಾಣಿಕೆಕೊಟ್ಟು, ತಾನು ತನ್ನ ರಾಜನಿಗೆ ವಾಸಕ್ಕೆ ಒಂದು ಮನೆ ಕಟ್ಟಲು ಬಂದಿರುವುದಾಗಿಯೂ, ಅದನ್ನು ಕಟ್ಟುವಾಗ ಬೇರೆ ಯಾರೂ ಅಲ್ಲಿಗೆ ಬರದಂತೆ, ಕೆಲಸಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು ಎಂದು ಕೇಳಿದ. ಹೇಗಿದ್ದರೂ ರಾಜ ಮತ್ತು ಮಂತ್ರಿ ಇಬ್ಬರೂ ನಮ್ಮ ದೇಶದ, ನಮ್ಮ ನಗರದಲ್ಲೇ ಬಂದು ಇರುತ್ತಾರೆ ತಾನೇ? ಆಗಲೇ ಅವರನ್ನು ಮುಗಿಸಿದರಾಯ್ತು ಎಂದು ಕುಮಾರ ಕೇಳಿದ್ದಕ್ಕೆಲ್ಲ ಒಪ್ಪಿಗೆ ಕೊಟ್ಟ. ಆದರೆ ಮಹೋಷಧಕುಮಾರ ಮೊದಲ ದಿನದಿಂದಲೇ ಸುರಂಗವೊಂದನ್ನು ಕೊರೆಯಿಸತೊಡಗಿದ. ಆ ಸುರಂಗ ವಿದೇಹ ರಾಜನಿಗಾಗಿ ಕಟ್ಟಿದ ಅರಮನೆಯ ಕೆಳಭಾಗದಿಂದ ಬ್ರಹ್ಮದತ್ತನ ಅರಮನೆಯ ಒಳಭಾಗದವರೆಗೆ ಬಂದಿತ್ತು. ಒಂದು ಸರಿಯಾದ ದಿನ ನೋಡಿ ತನ್ನ ರಾಜ ವಿದೇಹನನ್ನು ಕರೆಸಿಕೊಂಡ. ತಮ್ಮನ್ನು ಬ್ರಹ್ಮದತ್ತ, ಕೇವಟ್ಟರು ಕೊಲ್ಲಬಹುದೆಂದು ತಿಳಿದಿದ್ದ ಕುಮಾರ ಒಂದು ಸಂಜೆ ಬ್ರಹ್ಮದತ್ತನ ಹೆಂಡತಿ ರಾಣಿ, ಮಗಳು ಪಂಚಾಲಚಂಡಿ, ಮಗ ಪಂಚಾಲಚಂಡರನ್ನು ಸುರಂಗಮಾರ್ಗವಾಗಿ ವಿದೇಹ ರಾಜನ ಅರಮನೆಗೆ ಕರೆತಂದು, ಅವರನ್ನೆಲ್ಲ ನಾವೆಯಲ್ಲಿ ಕೂರಿಸಿ ಗಂಗಾನದಿಯಲ್ಲಿ ಕರೆದುಕೊಂಡು ಹೋಗುವಂತೆ ಆಜ್ಞೆ ಮಾಡಿದ. ರಾಣಿ ಹಾಗೂ ಮಕ್ಕಳು ವಿದೇಹನೊಡನೆ ಹೊರಟು, ಬ್ರಹ್ಮದತ್ತನೂ ತಮ್ಮನ್ನು ಸೇರಿಕೊಳ್ಳುತ್ತಾನೆ, ಅವನನ್ನು ಮಹೋಷಧಕುಮಾರ ಕರೆತರುತ್ತಾನೆ ಎಂದು ತಿಳಿದು ಆನಂದದಿಂದಿದ್ದರು. ಕುಮಾರ ತಾನೇ ಹೋಗಿ ಬ್ರಹ್ಮದತ್ತನಿಗೆ ಆದದ್ದನ್ನು ಹೇಳಿದ. 'ನೀವು ನನಗೇನಾದರೂ ತೊಂದರೆ ಕೊಟ್ಟರೆ ನಿಮ್ಮ ರಾಣಿ ಹಾಗೂ ಮಕ್ಕಳು ಶಿಕ್ಷೆ ಅನುಭವಿಸುತ್ತಾರೆ, ಹುಷಾರ್' ಎಂದು ಹೇಳಿ ತಾನೂ ಮತ್ತೊಂದು ನಾವೆಯಲ್ಲಿ ಬಂದ. ಮತ್ತೊಮ್ಮೆ ಬ್ರಹ್ಮದತ್ತನಿಗೆ ಮುಖಭಂಗವಾಯಿತು.

ದಿನ ಭವಿಷ್ಯ

ಶುಕ್ರವಾರ ಮೇ 7, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಏಕಾದಶಿ ಗಂ. 27-53 (ಸಾ. 5-13) ಶುಕ್ರವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 20-34 (ಹ. 2-17) ವೈಧೃತಿ ನಾಮ ಯೋಗ ಗಂ 37-53 ಬಾಲವ ಕರಣ ಗಂ. 27-53 ವಿಷ ಗಂ. 45-54 ಅಮೃತ ಶೇಷ ಗಂ. 3-12: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-00 ಸೂರ್ಯಾಸ್ತ: 6-32 ಅದೃಷ್ಟ ಸಂಖ್ಯೆ 8

ಮೇಷ: ವೈವಾಹಿಕ ಜೀವನದಲ್ಲಿ ಭಾಗ್ಯೋದಯವನ್ನು ಕಾಣಲಿದ್ದೀರಿ. ರಾಜಕೀಯದಲ್ಲಿರುವವರಿಗೆ ಬರಸಿಡಿಲಿನ ಸುದ್ದಿಯೊಂದು ಬಂದೆರಗಲಿದೆ. ಬಂಧುಗಳಿಂದ ಸಹಾಯ. ಸ್ಥಿರಾಸ್ತಿ ಖರೀದಿಗೆ ಮನಸ್ಸು ಮಾಡಲಿದ್ದೀರಿ.

ವೃಷಭ: ಅನಿವಾರ್ಯ ಬದಲಾವಣೆಗಳಿಗೆ ಒಳಗಾಗಿ ಇದ್ದುದನ್ನು ಕಳೆದುಕೊಳ್ಳಬೇಡಿ. ಹಿರಿಯರ ಮಾರ್ಗದರ್ಶನ ಅಲಕ್ಷಿಸದೆ ಇರುವುದು ಒಳ್ಳೆಯದು. ಹೊಸ ಕಾರ್ಯಯೋಜನೆಯಿಂದ ದೂರವಿರಿ.

ಮಿಥುನ: ನಿಮ್ಮ ಪಾಲಿನ ಶ್ರದ್ಧೆಯು ಅನುಕೂಲಕರವಾಗಿ ಪರಿಣಮಿಸಲಿದೆ. ಸಮಾಜಕ್ಕೆ ಉತ್ತಮ ಸಂದೇಶವನ್ನು ಕೊಡುವ ಕಾರ್ಯಪ್ರವೃತ್ತರಾಗುವಿರಿ. ರಾಜಕೀಯದಲ್ಲಿ ತೊಡಗಿಕೊಂಡ ಯುವತಿಯರಿಗೆ ಯಶಸ್ಸು

ಕರ್ಕಾಟಕ: ಸ್ಫೂರ್ತಿ ತುಂಬಿದ ಜೀವನದೊಂದಿಗೆ ಉತ್ತಮ ನೆಲೆ ಕಾಣಲಿದ್ದೀರಿ. ಧಾರಾಳವಾಗಿ ಹಣದ ಹರಿವು ನಿಮ್ಮೆಡೆಗೆ ಹರಿದು ಬರಲಿದೆ. ಉತ್ತಮವಾದ ಕುಟುಂಬ ಬಾಂಧವ್ಯದಲ್ಲಿ ವೃದ್ಧಿಯನ್ನು ಕಾಣುವಿರಿ.

ಸಿಂಹ: ಸಾಂಸಾರಿಕ ಸೌಖ್ಯಕ್ಕಾಗಿ ಹೊಸ ಪ್ರಯತ್ನ ನಡೆಸಲಿದ್ದೀರಿ. ಆರ್ಥಿಕ ಸಂಕಷ್ಟ ಬಂದೆರಗುವ ಸಾಧ್ಯತೆ. ಹೊಸ ಆದಾಯ ಮೂಲದ ಅನ್ವೇಷಣೆ ಮಾಡಲಿದ್ದೀರಿ. ಬಂಧುಗಳಿಂದ ಸಹಾಯ. ಮನಸ್ಸಿನ ದುಗಡ ನಿವಾರಣೆಯಾಗಲಿದೆ.

ಕನ್ಯಾ: ಕರಕುಶಲ ಕಾರ್ಮಿಕರಿಗೆ ಮನ್ನಣೆ ಸಿಗಲಿದ್ದು, ಸರ್ಕಾರದಿಂದ ಹೆಚ್ಚಿನ ಸಹಾಯ ಸಹಕಾರ ನಿರೀಕ್ಷಿಸಬಹುದು. ಎಲ್ಲ ಕಾರ್ಯಗಳಲ್ಲಿಯೂ ತಲ್ಲೀನತೆಯಿಂದ ಸರಿ ಹೊಂದುವ ಸಾಧ್ಯತೆಗಳು ಕಂಡುಬರುತ್ತಿವೆ.

ತುಲಾ: ಆರ್ಥಿಕ ಅನುಕೂಲತೆಯೊಂದಿಗೆ ಸಾಮಾಜಿಕ ಗೌರವ ದೊರಕಲಿದೆ. ಮಾಡಿದ ಕೆಲಸ–ಕಾರ್ಯಗಳಲ್ಲಿ ಮನ್ನಣೆ ದೊರೆಯುತ್ತದೆ. ಹೊಸ ಕಾರ್ಯ ರೂಪಿಸುವಲ್ಲಿ ಮುಂಚಿತ ಯೋಚನೆ ಸಫಲವಾಗಲಿದ್ದು ಯಶಸ್ಸಿನತ್ತ ಪಯಣ.

ವೃಶ್ಚಿಕ: ಆರ್ಥಿಕ ಕ್ರೋಢೀಕರಣದ ಜೊತೆಗೆ ಮಂಗಳಕಾರ್ಯಗಳು ನಿಶ್ಚಯವಾಗುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಜನೆ ನಿರೂಪಿಸಲಿದ್ದೀರಿ. ದೂರ ದೂರಿನ ಪ್ರಯಾಣ ಬೇಡ. ವಾಹನ ಚಲಾವಣೆಯಲ್ಲಿ ಜಾಗೃತೆ.

ಧನು: ಮಿತ್ರರ ಸಹಕಾರದಿಂದಾಗಿ ರಾಜಕೀಯ ವ್ಯವಹಾರದಲ್ಲಿ ಸುಗಮತೆ. ಆರ್ಥಿಕ ದೃಢೀಕರಣದಿಂದಾಗಿ ಕಾರ್ಯಾನುಕೂಲ. ಮನೆಯಲ್ಲಿ ಹಬ್ಬದ ವಾತಾವರಣ. ಮನೆಯವರ ಅಹವಾಲನ್ನು ಗಮನಿಸುವುದು ಒಳಿತು.

ಮಕರ: ಹೊಸ ಉದ್ಯಮವೊಂದರಿಂದ ಆದಾಯದ ಸಾಧ್ಯತೆ ಇರಲಿದ್ದು ಉತ್ತಮ ಆಶಾಭಾವನೆ ಮುಂದುವರಿಯಲಿದೆ. ವೈದ್ಯರ ನೆರವಿನಿಂದಾಗಿ ಆರೋಗ್ಯದಲ್ಲಿ ಸ್ಥಿರತೆ. ಆರ್ಥಿಕ ಅಭಿವೃದ್ಧಿ. ಕುಟುಂಬದಲ್ಲಿ ಸಾಮರಸ್ಯ ಕಾಪಾಡಿ.

ಕುಂಭ: ವಿದ್ಯಾರ್ಥಿಗಳಿಗೆ ಪ್ರಗತಿಪರ ಚಿಂತನೆಯಿಂದ ಉತ್ತಮ ಯಶಸ್ಸು. ವೈದ್ಯರಿಗೆ ಪ್ರಶಂಸೆ. ಬಂಧುಗಳ ಕಿರಿಕಿರಿಯಿಂದ ಬೇಸರವಾದರೂ ದೇವರ ಕೃಪೆ ನಿಮ್ಮ ಪಾಲಿಗೆ ಒದಗಿ ಬರಲಿದೆ. ರಾಜಕೀಯ ವ್ಯಕ್ತಿಗಳಿಗೆ ಮಾನಸಿಕ ತುಮುಲ

ಮೀನ: ಆಲಸ್ಯ ಉದಾಸೀನತೆ ತೊಡೆದುಹಾಕಿ ಕಾರ್ಯದಲ್ಲಿ ಮಗ್ನರಾಗಿರಿ. ಅನಗತ್ಯ ಕೋಪದಿಂದ ನಷ್ಟದ ಸಾಧ್ಯತೆ. ದೈಹಿಕವಾಗಿ ಸಣ್ಣಪುಟ್ಟ ನೋವುಗಳು ಕಾಣಿಸಿಕೊಳ್ಳುವ ಸಾಧ್ಯತೆ. ಈಶ್ವರನ ಆರಾಧನೆಯಿಂದ ಶ್ರೇಯಸ್ಸು.

ನಿಮ್ಮ ಜನ್ಮದಿನ 7-ಮೇ: ಈ ದಿನ ಅತ್ಯಂತ ಶುಭಕರ. ಆರ್ಥಿಕ ಕ್ರೋಢೀಕರಣವು ಸುಗಮವಾಗಿ ನಡೆದರೂ ಪಾಲುದಾರಿಕೆ ವ್ಯವಹಾರಗಳಲ್ಲಿ ಕೈ ಹಾಕುವುದು ಬೇಡ. ಕೈಗಾರಿಕೋದ್ಯಮಿಗಳಿಗೆ ನಷ್ಟದ ಭೀತಿ ತಲೆದೋರಲಿದೆ. ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಕನಸು ನನಸಾಗಲಿದೆ. ಯುವತಿಯರು ಮನಸ್ಸನ್ನು ಹರಿಬಿಡುವುದು ಉತ್ತಮವಲ್ಲ.

ಪದಬಂಧ 4589


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪವಿತ್ರವಾದ ಜನಿವಾರ (4)
3.ನಗಿಸಲೆಂದೇ ಬಂದವನು (4)
5.ಹೇಳುವಿಕೆ ಅಥವಾ ನಿರೂಪಣೆ ಎಂದರೂ ಆದೀತು (3)
6.ಅಗಸ ಇಲ್ಲಿದ್ದಾನೆ (3)
8.ಕೂಪದಲ್ಲಿರುವ ಕಪ್ಪೆ (3)
9.ಕನ್ನ ಹಾಕಿ ತಂದಿರುವ ದರ್ಪಣ (3)
10.ಪದ ಹೇಳಿ ಪಡೆದಿರುವ ಡಿಗ್ರಿ (3)
12.ಹಿಂಸೆ ಮಾಡದಿರುವಿಕೆ (3)
14.ಲಕ್ಷ್ಯ ಕೊಡಲು ಯೋಗ್ಯವಾದುದು (4)
15.ಗುಣವನ್ನು ಹೊಗಳುವುದು (4)

ಮೇಲಿಂದ ಕೆಳಕ್ಕೆ

1.ಪ್ರತಿಫಲಾಕ್ಷೆ ಇಲ್ಲದೆ ನೆರವು ನೀಡುವಿಕೆ (4)
2.ಅತಿಯಾದ ಕುತೂಹಲ (3)
3.ನಿಧಾನವಾಗಿ ನೋಡಿ! ರೀತಿ ಹೀಗೆ ಬಂದಿದೆ! (3)
4.ಲೆಕ್ಕ ಬರೆಯುವವ (4)
7.ಕರ ಕಡಿಯಲು ಬಂದಿರುವ ಭಲ್ಲೂಕ (3)
8.ಶುಭ ಕಾರ್ಯಗಳಿಗೆ ಕಟ್ಟುವ ಚಪ್ಪರ (3)
9.ವಾಡಿಕೆಯಂತೆ ಬಂದಿರುವ ಗೊಲ್ಲ (4)
11.ನಡುವೆ ಕಸವಿದ್ದಾಗ ಅರಳುವಿಕೆ (4)
12.ಅರ್ಹನಲ್ಲದವನು (3)
13.ಸೀರೆಯ ಹೊದೆಯುವ ಭಾಗ (3)



4588ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮೂಢನಂಬಿಕೆ 4.ಜಟಕ 5.ಅಂಕುಶ 9.ತತ್ತಿ 10.ಜವಳಿ 11.ಸ್ನಾನ 12.ಗಮಾರ 15.ಕಲಹ 16.ವಿರೋಧಾಭಾಸ

ಮೇಲಿಂದ ಕೆಳಕ್ಕೆ: 1.ಅನಂತ 2.ಮೂಕ 3.ಕೆಅಂ 4.ಜಲತರಂಗ 6.ಶಯನಗೃಹ 7.ಸೌಜನ್ಯ 8.ಗಳಿಕೆ 13.ರವಿ 14.ಸಂಧಾನ 15.ಕಸ

ಸುಡೊಕು 4975

4		7		8			2	
								8
6		5		9		4		
	2		6				3	
5		3	2		1	8		
	1				9		4	
	6			2				
		8	9					7
	5			3	4		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4974 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಪಾಲು ಹೆಚ್ಚಳ: ಕೇಂದ್ರ ಹಿಂದೇಟು

ಒಂದನೇ ಪುಟದಿಂದ

ಒಂದು ವಾರದ ಅವಧಿಯಲ್ಲಿ ರಾಜ್ಯದಾದ್ಯಂತ ಹೊಸದಾಗಿ 1.60 ಲಕ್ಷ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲೇ ಆಮ್ಲಜನಕದ ಉತ್ಪಾದನಾ ಘಟಕಗಳಿದ್ದರೂ ಬೇರೆ ರಾಜ್ಯಗಳಿಂದ ತರಿಸಿಕೊಳ್ಳುವಂತೆ ಕೇಂದ್ರ ಸೂಚಿಸುತ್ತಿದೆ. ರಾಜ್ಯದ ಪಾಲಿನ ಆಮ್ಲಜನಕ ಹಂಚಿಕೆ ಹೆಚ್ಚಿಸಲು ಕೇಂದ್ರಕ್ಕೆ ಸೂಚಿಸಬೇಕು ಎಂದು ಕರ್ನಾಟಕದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಅವರು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠದೆದುರು ಬುಧವಾರ ಮನವಿ ಮಾಡಿದ್ದರು. ಅದಕ್ಕೆ ಸ್ಪಂದಿಸಿದ್ದ ಹೈಕೋರ್ಟ್, ಆಮ್ಲಜನಕದ ಪ್ರಮಾಣವನ್ನು 1,200 ಟನ್‌ಗೆ ಹೆಚ್ಚಿಸಲು ಕೇಂದ್ರಕ್ಕೆ ಆದೇಶ ನೀಡಿತ್ತು.

'ಪೂರೈಕೆ ಸೂತ್ರ ಪರಿಷ್ಕರಿಸಿ': ರಾಜ್ಯಗಳಿಗೆ ಆಮ್ಲಜನಕ ಪೂರೈಸಲು ಕೇಂದ್ರ ರೂಪಿಸಿರುವ ಸೂತ್ರವು ಬೇಡಿಕೆಯನ್ನು ಸರಿಯಾಗಿ ಅಂದಾಜು ಮಾಡುವುದೇ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆಮ್ಲಜನಕ ಸೌಲಭ್ಯದ ಹಾಸಿಗೆಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಆಮ್ಲಜನಕ ಹಂಚಿಕೆ ಸೂತ್ರ ರೂಪಿಸಲಾಗಿದೆ. ಅದನ್ನು ಮರುಪರಿಶೀಲಿಸಬೇಕು. ನೀವು ಸೂತ್ರ ರೂಪಿಸಿದಾಗ ಐಸಿಯುಗೆ ದಾಖಲಾದ ಎಲ್ಲ ರೋಗಿಗಳಿಗೆ ಆಮ್ಲಜನಕದ ಅಗತ್ಯ ಇರಲಿಲ್ಲ. ಆದರೆ, ಈಗ ಮನೆಯಲ್ಲಿ ಪ್ರತ್ಯೇಕವಾಸದಲ್ಲಿರುವ ರೋಗಿಗಳಿಗೆ ಕೂಡ ಆಮ್ಲಜನಕ ಬೇಕಾಗಿದೆ. ಆಂಬುಲೆನ್ಸ್‌ಗಳು, ಕೋವಿಡ್ ಆರೈಕೆ ಕೇಂದ್ರಗಳನ್ನು ಗಣನೆಗೆ ತೆಗೆದುಕೊಳ್ಳದೆಯೇ ಸೂತ್ರ ರೂಪಿಸಲಾಗಿದೆ ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಪೀಠವು ಹೇಳಿದೆ.

ಆಮ್ಲಜನಕ ವಿತರಣೆ ವ್ಯವಸ್ಥೆಯ ಸಮಗ್ರ ಲೆಕ್ಕಪರಿಶೋಧನೆ ನಡೆಸಬೇಕು. ಇದರಿಂದ ಇಡೀ ಭಾರತ ಮಟ್ಟದ ಚಿತ್ರಣ ಸಿಗುತ್ತದೆ. ಜತೆಗೆ, ಆಮ್ಲಜನಕ ಪೂರೈಕೆಗೆ ಉತ್ತರದಾಯಿತ್ವ ನಿಗದಿ ಮಾಡುವುದು ಸಾಧ್ಯವಾಗುತ್ತದೆ ಎಂದು ಕೋರ್ಟ್ ಹೇಳಿದೆ. ಆಮ್ಲಜನಕ ಪೂರೈಕೆಯ ಪರಿಶೋಧನೆಗೆ ಪರಿಣತರ ಸಮಿತಿ ರಚಿಸುವಂತೆಯೂ ಪೀಠವು ಸೂಚಿಸಿದೆ.



ನವದೆಹಲಿಯಲ್ಲಿ ಕೋವಿಡ್ ರೋಗಿಗಳನ್ನು ಉಚಿತವಾಗಿ ಆಸ್ಪತ್ರೆಗೆ ಸಾಗಿಸಲು ಆಟೊ ಆಂಬುಲೆನ್ಸ್ ಜತೆ ಸಿದ್ಧವಾಗಿ ನಿಂತಿರುವ ಚಾಲಕರು – ಚಿತ್ರ/ರಾಯಿಟರ್ಸ್

ಮೂರು ದಿನಗಳೊಳಗೆ ಕ್ರಮಕ್ಕೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ

ಲಸಿಕೆ ಕೊರತೆ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಕೊರತೆ ಕುರಿತು ಗುರುವಾರ ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, 'ಸದ್ಯದ ಪರಿಸ್ಥಿತಿಯಲ್ಲಿ ಸಾಮಾನ್ಯ ನಾಗರಿಕರು ಮೊದಲ ಡೋಸ್ ಲಸಿಕೆ ಕೂಡ ಪಡೆಯುವ ಸ್ಥಿತಿ ಇಲ್ಲ. ಆರೋಗ್ಯ ಕ್ಷೇತ್ರದ ಸಿಬ್ಬಂದಿ ಮತ್ತು ಕೋವಿಡ್ ನಿಯಂತ್ರಣ ಕರ್ತವ್ಯದಲ್ಲಿ ಮುಂಚೂಣಿಯಲ್ಲಿರುವವರಿಗೆ ಮಾತ್ರವೇ ಲಸಿಕೆ ಲಭಿಸುತ್ತಿದೆ' ಎಂದು ಹೇಳಿದೆ.

ಲಸಿಕೆ ದಾಸ್ತಾನಿನ ಮಾಹಿತಿ ಆಧಾರವಾಗಿಟ್ಟುಕೊಂಡು ಎಂದಿರುವ ನ್ಯಾಯಾಲಯ, ಕೋವಿಡ್ ಲಸಿಕೆ ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಬೇಡಿಕೆ ಪಟ್ಟಿ, ಮನವಿಗಳನ್ನು ಸಮಗ್ರ ವಿವರಗಳೊಂದಿಗೆ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ರಾಜ್ಯಕ್ಕೆ ಅಗತ್ಯ ಪ್ರಮಾಣದ ಕೋವಿಡ್ ಲಸಿಕೆ ಪೂರೈಸುವ ಕುರಿತು ಮೂರು ದಿನಗಳೊಳಗೆ ಕ್ರಮ ಕೈಗೊಳ್ಳುವಂತೆಯೂ ಹೈಕೋರ್ಟ್ ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕೋವಿಡ್‌ಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, ರಾಜ್ಯದಲ್ಲಿ ಬಳಕೆಯಾಗಿರುವ ಲಸಿಕೆಗಳಿಗೆ ಸಂಬಂಧಿಸಿದ ಅಂಕಿಅಂಶಗಳ ವಿವರಗಳನ್ನು ಪರಿಶೀಲಿಸಿತು.

'ರಾಜ್ಯಕ್ಕೆ 1,08,49,470 ಡೋಸ್ ಕೋವಿಡ್ ಲಸಿಕೆ ಪೂರೈಕೆಯಾಗಿದೆ. ಈವರೆಗೆ 83,28,241 ಜನರಿಗೆ ಕೋವಿಡ್ ಲಸಿಕೆ ಮೊದಲ ಡೋಸ್ ಹಾಕಲಾಗಿದೆ. 17,44,554 ಜನರಿಗೆ ಎರಡನೇ ಡೋಸ್ ನೀಡಲಾಗಿದೆ. ಸದ್ಯ ರಾಜ್ಯ ಸರ್ಕಾರದ ಬಳಿ 7.76 ಲಕ್ಷ ಡೋಸ್ ಮಾತ್ರ ದಾಸ್ತಾನು ಇದೆ' ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿತು.

ಮೇ 1ರಿಂದ ರಾಜ್ಯಕ್ಕೆ ಅಗತ್ಯವಿರುವ ಲಸಿಕೆಯ ಪ್ರಮಾಣದ ಶೇಕಡ 50ರಷ್ಟನ್ನು ಮಾತ್ರ ಕೇಂದ್ರ ಸರ್ಕಾರ ಪೂರೈಸುತ್ತಿದೆ. ಉಳಿದ ಶೇ 50ರಷ್ಟು ಲಸಿಕೆಯನ್ನು ಉತ್ಪಾದಕರಿಂದಲೇ ರಾಜ್ಯ ಸರ್ಕಾರ ಖರೀದಿಸುತ್ತಿದೆ ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರದ ಪರ ವಕೀಲರು ವಿಭಾಗೀಯ ಪೀಠಕ್ಕೆ ನೀಡಿದರು.

'ದಾಸ್ತಾನಿನ ಪ್ರಮಾಣವನ್ನು ಗಮನಿಸಿದರೆ, ರಾಜ್ಯದ ಸಾಮಾನ್ಯ ನಾಗರಿಕರು ಮೊದಲ ಡೋಸ್ ಲಸಿಕೆ ಪಡೆಯುವುದೂ ಕಷ್ಟವಾಗಿದೆ. ಆರೋಗ್ಯ ಸಿಬ್ಬಂದಿ ಮತ್ತು ಕೋವಿಡ್ ನಿಯಂತ್ರಣ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವವರಿಗೆ ನೀಡಲು ಮಾತ್ರ ದಾಸ್ತಾನು ಸಾಕಾಗಬಹುದು' ಎಂದು ನ್ಯಾಯಪೀಠ ಹೇಳಿತು.

'ರಾಜ್ಯ ಸರ್ಕಾರ ಕೋವಿಡ್ ಲಸಿಕೆ ಖರೀದಿಗಾಗಿ ಉತ್ಪಾದಕರಿಗೆ ಬೇಡಿಕೆ ಸಲ್ಲಿಸಿದೆ. ಈಗ ತಕ್ಷಣವೇ ಅಗತ್ಯವಿರುವ ಪ್ರಮಾಣದ ಲಸಿಕೆಯನ್ನು ಪೂರೈಸುವಂತೆ ಕೇಂದ್ರ ಸರ್ಕಾರದ ಸಂಬಂಧಿಸಿದ ಪ್ರಾಧಿಕಾರಕ್ಕೆ ಬೇಡಿಕೆ ಪಟ್ಟಿಯನ್ನು ಸಲ್ಲಿಸಬೇಕು' ಎಂದು ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು.

18ರಿಂದ 44 ವರ್ಷ ವಯಸ್ಸಿನವರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕಾಗಿ ಎರಡು ಕೋಟಿ ಡೋಸ್ ಕೋವಿಶೀಲ್ಡ್ ಮತ್ತು ಒಂದು ಕೋಟಿ ಡೋಸ್ ಕೋವ್ಯಾಕ್ಸಿನ್ ಲಸಿಕೆ ಪೂರೈಕೆಗೆ ಉತ್ಪಾದಕರಿಗೆ ಬೇಡಿಕೆ ಸಲ್ಲಿಸಲಾಗಿದೆ. ಈವರೆಗೆ ಮೂರು ಲಕ್ಷ ಡೋಸ್‌ಗಳಷ್ಟು ಪೂರೈಕೆಯಾಗಿದೆ ಎಂದು ರಾಜ್ಯ ಸರ್ಕಾರ ನ್ಯಾಯಪೀಠಕ್ಕೆ ತಿಳಿಸಿತು.

'18ರಿಂದ 44 ವರ್ಷ ವಯಸ್ಸಿನವರಿಗೆ ಅಗತ್ಯವಿರುವ ಲಸಿಕೆಯನ್ನು ಪೂರೈಸುವ ವಿಚಾರದಲ್ಲಿ ಕೇಂದ್ರ ಸರ್ಕಾರವು ಲಸಿಕೆ ಉತ್ಪಾದಕರ ಜತೆ ವ್ಯವಹರಿಸಬೇಕಾದ ಅಗತ್ಯವಿದೆ' ಎಂದು ನ್ಯಾಯಾಲಯ ಹೇಳಿತು.

ಲಸಿಕೆ ಕಾರ್ಯಕ್ರಮಕ್ಕೆ ವೇಗ ನೀಡಲು ಮೋದಿ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಲಸಿಕೆ ಕಾರ್ಯಕ್ರಮ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ, ಅರ್ಹರಿಗೆ ಲಸಿಕೆ ನೀಡುವುದಕ್ಕೆ ಹಿನ್ನಡೆಯಾಗದಂತೆ ಎಲ್ಲ ರಾಜ್ಯಗಳು ಮುತುವರ್ಜಿ ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ವಿವಿಧ ರಾಜ್ಯಗಳಲ್ಲಿನ ಕೋವಿಡ್–19 ಪರಿಸ್ಥಿತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಕೈಗೊಂಡ ಕ್ರಮಗಳ ಕುರಿತು ಗುರುವಾರ ನಡೆಸಿದ ಪರಿಶೀಲನಾ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಮೂಲಸೌಕರ್ಯ ವೃದ್ಧಿ, ಕೊರೊನಾ ಸೋಂಕು ಹರಡುವುದನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ರಾಜ್ಯಗಳಿಗೆ ನೆರವು ನೀಡುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ಪ್ರಕಟಣೆ ತಿಳಿಸಿದೆ.

12 ರಾಜ್ಯಗಳಲ್ಲಿ ಲಕ್ಷಕ್ಕೂ ಅಧಿಕ ಸಕ್ರಿಯ ಕೋವಿಡ್–19 ಪ್ರಕರಣಗಳು ಇವೆ. ರಾಜ್ಯಗಳಿಗೆ ಈ ವರೆಗೆ ಕೋವಿಡ್ ಲಸಿಕೆಯ 17.7 ಕೋಟಿ ಡೋಸ್‌ಗಳನ್ನು ಪೂರೈಕೆ ಮಾಡಲಾಗಿದೆ ಎಂದು ಅಧಿಕಾರಿಗಳು ಪ್ರಧಾನಿಯವರಿಗೆ ವಿವರಿಸಿದರು.

'ಕೆಲವು ರಾಜ್ಯಗಳಲ್ಲಿ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ಇಂಥ ಕಠಿಣ ನಿರ್ಬಂಧಗಳಿದ್ದರೂ, ಲಸಿಕೆ ಪಡೆಯಲು ಬರುವ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಲಸಿಕೆ ನೀಡುವ ಜವಾಬ್ದಾರಿ ಹೊತ್ತ ಸಿಬ್ಬಂದಿಯನ್ನು ಬೇರೆ ಕರ್ತವ್ಯಗಳಿಗೆ ನಿಯೋಜಿಸಬಾರದು ಎಂದೂ ಪ್ರಧಾನಿ ಸೂಚನೆ ನೀಡಿದರು' ಎಂದು ಪ್ರಕಟಣೆ ತಿಳಿಸಿದೆ.

ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್, ಹರ್ಷವರ್ಧನ್, ಪೀಯೂಷ್ ಗೋಯಲ್, ಮನ್‌ಸುಖ್ ಮಾಂಡವೀಯ, ವಿವಿಧ ಸಚಿವಾಲಯಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.


ಸುದ್ದಿ 2 ನಿಮಿಷ

ಲಸಿಕೆ ಪೂರೈಕೆಯಲ್ಲಿ ಕೇಂದ್ರದಿಂದ ತಾರತಮ್ಯ: ಎಚ್‌ಡಿಕೆ

ಬೆಂಗಳೂರು: ಕೋವಿಡ್ ಲಸಿಕೆ ಪೂರೈಕೆಯಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ಗುಜರಾತ್‌ಗೆ ಹೆಚ್ಚು, ಕರ್ನಾಟಕಕ್ಕೆ ಅತಿ ಕಡಿಮೆ ಪೂರೈಸಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಬಗ್ಗೆ ಗುರುವಾರ ಸರಣಿ ಟ್ವೀಟ್ ಮಾಡಿರುವ ಅವರು, '18ರಿಂದ 44 ವರ್ಷದವರಿಗೆ ಲಸಿಕೆ ಹಾಕುವ ಅಭಿಯಾನ ಮೇ 1ರಿಂದ ಆರಂಭವಾಗಿದ್ದು, ಮಂಗಳವಾರದವರೆಗೆ 6 ಲಕ್ಷ ಜನರಿಗೆ ಲಸಿಕೆ ನೀಡಲಾಗಿತ್ತು. ಗುಜರಾತ್‌ನಲ್ಲಿ 1.61 ಲಕ್ಷ ಜನರಿಗೆ ಲಸಿಕೆ ನೀಡಿದ್ದರೆ, ರಾಜ್ಯದಲ್ಲಿ ಕೇವಲ 3,475 ಜನರಿಗೆ ಲಸಿಕೆ ಹಾಕಲಾಗಿದೆ' ಎಂಬ ಅಂಕಿ ಅಂಶವನ್ನು ಹಂಚಿಕೊಂಡಿದ್ದಾರೆ.

ಕರ್ನಾಟಕ ಮತ್ತು ಕನ್ನಡಿಗರಿಗೆ ತಾರತಮ್ಯ, ಗುಜರಾತ್ ಮೇಲೆ ಅತಿಯಾದ ಪ್ರೀತಿ ತೋರುತ್ತಿರುವುದು ಕೇಂದ್ರದ ಆರೋಗ್ಯ ಸಚಿವಾಲಯದ ಅಂಕಿಅಂಶಗಳಿಂದಲೇ ಬಹಿರಂಗವಾಗಿದೆ. ಸಂಕಷ್ಟದಲ್ಲೂ ಕೇಂದ್ರ ತಾರತಮ್ಯ ಮಾಡುತ್ತಿರುವುದು ಮನುಷ್ಯ ವಿರೋಧಿ ಧೋರಣೆ. ಕನ್ನಡಿಗರಿಗಾಗಿ ರಾಜ್ಯ ಸರ್ಕಾರ ಸೊಲ್ಲೆತ್ತದೆ ಇರುವುದು ಪರಮ ವೈಫಲ್ಯ ಎಂದು ಟೀಕಿಸಿದ್ದಾರೆ.



ರಾಜ್ಯಕ್ಕೆ ಕೇಂದ್ರ ಸರ್ಕಾರ ಲಸಿಕೆ ನೀಡುತ್ತಿಲ್ಲವೆ? ಕೇಳಿ ಪಡೆಯುವ ಶಕ್ತಿ ರಾಜ್ಯ ಸರ್ಕಾರಕ್ಕೆ ಇಲ್ಲವೆ? ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ಸಂಸದರು ಮೊದಲು ಈ ತಾರತಮ್ಯದ ವಿರುದ್ಧ ಹೋರಾಡಬೇಕು. ಈ ತಾರತಮ್ಯ, ವೈಫಲ್ಯಗಳನ್ನು ಜನರೂ ಪ್ರಶ್ನಿಸಬೇಕು. ಇಲ್ಲವಾದಲ್ಲಿ ಅಪಾಯದ ದಿನಗಳು ಮುಂದಿವೆ ಎಂದೂ ಕುಮಾರಸ್ವಾಮಿ ಹೇಳಿದ್ದಾರೆ.

ಕೇರಳ: ನಾಳೆಯಿಂದ 9 ದಿನ ಸಂಪೂರ್ಣ ಲಾಕ್‌ಡೌನ್

ತಿರುವನಂತಪುರ (ಪಿಟಿಐ): ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ತೀವ್ರವಾಗಿ ಹೆಚ್ಚುತ್ತಿರುವ ಕಾರಣ ಕೇರಳ ಸರ್ಕಾರ ಇದೇ 8ರಿಂದ 16ರ ವರೆಗೆ ಸಂಪೂರ್ಣ ಲಾಕ್‌ಡೌನ್ ಘೋಷಿಸಿದೆ.

8ರ ಬೆಳಿಗ್ಗೆಯಿಂದಲೇ ಲಾಕ್‌ಡೌನ್ ಜಾರಿಯಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.ಕೋವಿಡ್ ಪ್ರಸರಣ ತಡೆಯುವ ಸಲುವಾಗಿ ರಾಜ್ಯದ ದಕ್ಷಿಣ ಭಾಗದಲ್ಲಿ ಈಗಾಗಲೇ ಕಠಿಣ ನಿರ್ಬಂಧಗಳನ್ನು ಜಾರಿ ಮಾಡಲಾಗಿದೆ. ರಾಜ್ಯದಲ್ಲಿ ಬುಧವಾರ ಹೊಸದಾಗಿ 41,953 ಪ್ರಕರಣಗಳು ವರದಿಯಾಗಿದ್ದು, ಒಂದು ದಿನದಲ್ಲಿ ಪತ್ತೆಯಾದ ಗರಿಷ್ಠ ಸಂಖ್ಯೆಯ ಪ್ರಕರಣಗಳು ಇವಾಗಿವೆ.

ಪೆರೋಲ್ ನೀಡಲು ನಿರ್ಧಾರ: ರಾಜ್ಯದ ಜೈಲುಗಳಲ್ಲಿರುವ ಅರ್ಹ ಕೈದಿಗಳಿಗೆ ಎರಡು ವಾರಗಳ ಅವಧಿಗೆ ಪೆರೋಲ್ ನೀಡಲು ಸಹ ಸರ್ಕಾರ ತೀರ್ಮಾನಿಸಿದೆ.

ಜೈಲುಗಳಲ್ಲಿನ ಕೈದಿಗಳ ಸಂಖ್ಯೆ ಮಾಡುವುದು ಹಾಗೂ ಮೂಲಕ ವ್ಯಕ್ತಿಗತ ಅಂತರ ಕಾಪಾಡುವುದು ಇದರ ಉದ್ದೇಶವಾಗಿದೆ ಎಂದು ಮೂಲಗಳು ಹೇಳಿವೆ. ರಾಜ್ಯದ 54 ಜೈಲುಗಳಲ್ಲಿ 6,000ಕ್ಕೂ ಅಧಿಕ ಕೈದಿಗಳಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

'ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ಹಿಡಿದಿಟ್ಟುಕೊಂಡಿಲ್ಲ'

ನವದೆಹಲಿ (ಪಿಟಿಐ): 'ವಿದೇಶಗಳು ನೆರವು ನೀಡಿರುವ ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು (ಆಕ್ಸಿಜನ್ ಕಾನ್ಸಂಟ್ರೇಟರ್) ಕಸ್ಟಮ್ಸ್ ಇಲಾಖೆಯಲ್ಲಿ ಹಿಡಿದಿಟ್ಟುಕೊಂಡಿಲ್ಲ' ಎಂದು ಕೇಂದ್ರ ಸಚಿವಾಲಯ ಗುರುವಾರ ಸ್ಪಷ್ಟನೆ ನೀಡಿದೆ.

ಕೋವಿಡ್ ಎರಡನೇ ಅಲೆಯ ವಿರುದ್ಧ ಹೋರಾಟ ನಡೆಸಲು ಜಾಗತಿಕ ನೆರವಿನ ರೂಪದಲ್ಲಿ 3 ಸಾವಿರ ಆಮ್ಲಜನಕ ಕಾನ್ಸಟ್ರೇಟರ್‌ಗಳು ಭಾರತಕ್ಕೆ ಬಂದಿದ್ದು, ಎಲ್ಲವನ್ನೂ ವಿತರಿಸಲು ಕಳುಹಿಸಲಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

'ಆಮ್ಲಜನಕ ಕಾನ್ಸಟ್ರೇಟರ್‌ಗಳು ಕಸ್ಟಮ್ಸ್ ಗೋದಾಮುಗಳಲ್ಲಿ ಬಾಕಿ ಉಳಿದಿವೆ ಎಂದು ಕೆಲವು ವರದಿಗಳು ಪ್ರಕಟವಾಗಿವೆ. ಆದರೆ, ಯಾವುದೇ ಆಧಾರವಿಲ್ಲದ ಈ ಸುದ್ದಿಗಳು ಸತ್ಯಕ್ಕೆ ದೂರವಾದವು. ಇಂತಹ ಯಾವುದೇ ಸರಕುಗಳು ಕಸ್ಟಮ್ ಗೋದಾಮಿನಲ್ಲಿ ಬಾಕಿ ಉಳಿದಿಲ್ಲ ಎಂದು ಕೇಂದ್ರ ಪರೋಕ್ಷ ತೆರಿಗೆ ಮತ್ತು ಸುಂಕ ಮಂಡಳಿ ಸ್ಪಷ್ಟಪಡಿಸಿದೆ' ಎಂದು ಇಲಾಖೆ ತಿಳಿಸಿದೆ.

ಚೀನಾ 1000, ಐರ್ಲೆಂಟ್ 700, ಇಂಗ್ಲೆಂಡ್ 669, ಮಾರಿಷಸ್ 200, ಉಜ್ಬೆಕಿಸ್ತಾನ 151, ಥೈವಾನ್ 150, ರೊಮೇನಿಯಾ 80, ಥಾಯ್ಲೆಂಡ್ 30, ರಷ್ಯಾ 29 ಆಮ್ಲಜನಕ ಕಾನ್ಸಟ್ರೇಟರ್‌ಗಳನ್ನು ಕಳುಹಿಸಿವೆ ಎಂದು ಮಾಹಿತಿ ನೀಡಿದೆ.

ಸಕ್ರಿಯ ಪ್ರಕರಣ 5.17 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 49,058 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 5.17 ಲಕ್ಷಕ್ಕೆ ಏರಿಕೆಯಾಗಿದೆ.

ಕಳೆದ ಮಾರ್ಚ್ ಅಂತ್ಯಕ್ಕೆ 28 ಸಾವಿರ ಸಕ್ರಿಯ ಪ್ರಕರಣಗಳಿದ್ದವು. ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. 48 ಗಂಟೆಗಳಲ್ಲಿಯೇ 99,170 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು ಆರು ದಿನಗಳಲ್ಲಿ 2.66 ಲಕ್ಷ ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಸಂಖ್ಯೆ 17.90 ಲಕ್ಷಕ್ಕೆ ಏರಿಕೆಯಾಗಿದೆ. ಒಂದು ದಿನದ ಅವಧಿಯಲ್ಲಿ 1.64 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಸೋಂಕು ದೃಢ ಪ್ರಮಾಣ ಶೇ 29.83ರಷ್ಟಿದೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ 139 ಮಂದಿ ಸೇರಿದಂತೆ ರಾಜ್ಯದಲ್ಲಿ 328 ಮಂದಿ ಸಾವಿಗೀಡಾಗಿದ್ದಾರೆ. ಬಳ್ಳಾರಿಯಲ್ಲಿ 26 ಮಂದಿ, ಮೈಸೂರಿನಲ್ಲಿ 18 ಮಂದಿ, ಶಿವಮೊಗ್ಗದಲ್ಲಿ 16 ಮಂದಿ, ತುಮಕೂರು ಮತ್ತು ಕಲಬುರ್ಗಿಯಲ್ಲಿ ತಲಾ 14 ಮಂದಿ, ಕೊಡಗಿನಲ್ಲಿ 12 ಮಂದಿ ಮೃತಪಟ್ಟಿದ್ದಾರೆ. ಮರಣ ಹೊಂದಿದವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದಾರೆ. ಈ ತಿಂಗಳು ಕೇವಲ 6 ದಿನಗಳಲ್ಲಿಯೇ 1,689 ಮಂದಿ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 17,212ಕ್ಕೆ ಏರಿಕೆಯಾಗಿದೆ.

ಕೆಲ ದಿನಗಳಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗುತ್ತಿದ್ದು, ಬೆಂಗಳೂರು, ಮೈಸೂರು ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಏರುಗತಿ ಪಡೆದಿದೆ. ಬೆಂಗಳೂರಿನಲ್ಲಿ ಹೊಸದಾಗಿ 23,706 ಪ್ರಕರಣಗಳು ವರದಿಯಾಗಿವೆ. ಮೈಸೂರು (2,531), ತುಮಕೂರು (2,418), ಕಲಬುರ್ಗಿ (1,652), ಉಡುಪಿ (1,526), ಹಾಸನ (1,403), ದಕ್ಷಿಣ ಕನ್ನಡ (1,191) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ. ಕೊರೊನಾ ಸೋಂಕಿತರಲ್ಲಿ 18,943 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 12.55 ಲಕ್ಷ ದಾಟಿದೆ.

ರಾಜ್ಯದ ಕೂಗಿಗೆ ಸಿಗದ ಮನ್ನಣೆ

ಒಂದನೇ ಪುಟದಿಂದ

ಈ ಪೈಕಿ, 735 ಅನ್ ಅನ್ನು ರಾಜ್ಯಕ್ಕೆ ಹಂಚಿಕೆ ಮಾಡಿದ್ದರೆ, ಉಳಿದ 168 ಟನ್‌ಗಳಲ್ಲಿ ಮಹಾರಾಷ್ಟ್ರ (80), ಆಂಧ್ರಪ್ರದೇಶ (63), ಕೇರಳ (10) ಮತ್ತು ಗೋವಾ (15) ಕ್ಕೆ ಹಂಚಿಕೆ ಮಾಡಿದೆ.

ಪರಿಷ್ಕೃತ ಹಂಚಿಕೆಯಲ್ಲಿ ರಾಜ್ಯ ಹೊರರಾಜ್ಯಗಳಿಂದ ಒಟ್ಟು 170 ಟನ್ (ಆಂಧ್ರಪ್ರದೇಶ– 20, ಕೇರಳ– 30, ಒಡಿಶಾ–120) ತರಬೇಕಿದೆ. ಆಯಾ ರಾಜ್ಯಗಳಲ್ಲಿರುವ ಸಣ್ಣ, ಸಣ್ಣ ಘಟಕಗಳಲ್ಲಿ (ಎಂಎಸ್‌ಎಂಇ) ಉತ್ಪಾದಿಸುವ ಆಮ್ಲಜನಕವನ್ನು ಆಯಾ ರಾಜ್ಯಗಳಿಗೇ ಕೇಂದ್ರ ಹಂಚಿಕೆ ಮಾಡಿದೆ. ಹೀಗಾಗಿ, ಕರ್ನಾಟಕದಲ್ಲಿರುವ ಈ ಘಟಕಗಳಲ್ಲಿ ಉತ್ಪಾದನೆಯಾಗುವ 60 ಟನ್ ರಾಜ್ಯದ ಬಳಕೆಗೆ ಸಿಕ್ಕಿದೆ.

ಕೇಂದ್ರ ಸರ್ಕಾರ ಮೇ 1ರಂದು ರಾಜ್ಯಕ್ಕೆ 865 ಟನ್ ಹಂಚಿಕೆ ಮಾಡಿತ್ತು. ಆಗ ಬಳ್ಳಾರಿಯ ಜೆಎಸ್‌ಡಬ್ಲ್ಯು ಕಂಪನಿಯಿಂದ 80 ಟನ್ ಹಂಚಿಕೆ ಮಾಡಲಾಗಿತ್ತು. ಹೊಸ ಹಂಚಿಕೆಯಲ್ಲಿ ಆ ಪ್ರಮಾಣವನ್ನು 130 ಟನ್‌ಗೆ ಹೆಚ್ಚಿಸಲಾಗಿದೆ. ಬಳ್ಳಾರಿಯ ಲಿಂಡೆ ಬೆಲ್ಲೋಕ್ಸಿ ಘಟಕದಿಂದ ಹಂಚಿಕೆ ಮಾಡಿದ್ದ 15 ಟನ್ ಅನ್ನು 25 ಟನ್‌ಗೆ ಹೆಚ್ಚಿಸಲಾಗಿದೆ.

ಆಮ್ಲಜನಕ ಪೂರೈಕೆ ಸರಪಳಿಯ ಭಾಗವಾಗಿ ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಹರಿಯಾಣ, ಪಂಜಾಬ್, ಕೇರಳ, ರಾಜಸ್ಥಾನ, ಆಂಧ್ರಪ್ರದೇಶ, ಉತ್ತರಖಂಡ, ಗೋವಾ, ಒಡಿಶಾ, ಪುದುಚೇರಿ ಮತ್ತು ಜಮ್ಮು ಕಾಶ್ಮೀರಕ್ಕೆ ಆಮ್ಲಜನಕ ಪ್ರಮಾಣದ ಹಂಚಿಕೆಯನ್ನು ಕೇಂದ್ರ ಪರಿಷ್ಕರಿಸಿದೆ. ಕೋವಿಡ್ ತೀವ್ರಗೊಳ್ಳುತ್ತಿದ್ದು, ಆಮ್ಲಜನಕ ಪ್ರಮಾಣ ಹೆಚ್ಚಿಸುವಂತೆ ಈ ರಾಜ್ಯಗಳಿಂದ ಬೇಡಿಕೆ ಬಂದ ಕಾರಣ ಆಯಾ ರಾಜ್ಯಗಳ ಸಂಬಂಧಿಸಿದ ಸಚಿವಾಲಯಗಳು, ಆಮ್ಲಜನಕ ಉತ್ಪಾದಕರು ಮತ್ತು ಅಖಿಲ ಭಾರತ ಕೈಗಾರಿಕಾ ಅನಿಲ ತಯಾರಕರ ಸಂಘ (ಎಐಐಜಿಎಂಎ) ಜೊತೆ ಸಮಾಲೋಚನೆ ನಡೆಸಿ ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಉನ್ನತಾಧಿಕಾರ ಸಮಿತಿ ಈ ಸೂತ್ರ ರೂಪಿಸಿದೆ. ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಇಡೀ ದೇಶದಲ್ಲಿ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಕಾರಣಕ್ಕೆ ಎಲ್ಲ ರಾಜ್ಯಗಳಿಗೆ ಅಗತ್ಯವಾದ ವೈದ್ಯಕೀಯ ಪರಿಕರಗಳು, ಆಮ್ಲಜನಕವೂ ಸೇರಿದಂತೆ ಔಷಧ ಪೂರೈಸುವ ಹೊಣೆಯನ್ನು ಡಿಪಿಐಐಟಿ ಕಾರ್ಯದರ್ಶಿಯ ನೇತೃತ್ವದ ಉನ್ನತಾಧಿಕಾರ ಸಮಿತಿಗೆ ಕೇಂದ್ರ ಸರ್ಕಾರ ವಹಿಸಿದೆ. ಅತೀ ಹೆಚ್ಚು ಪ್ರಕರಣ ಪತ್ತೆಯಾದ 12 ರಾಜ್ಯಗಳಿಗೆ ವೈದ್ಯಕೀಯ ಆಮ್ಲಜನಕವನ್ನು ಹಂಚುವ ಬಗ್ಗೆ ಆಯಾ ರಾಜ್ಯಗಳ ಆರೋಗ್ಯ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯ ಏ. 15ರಂದು ಪತ್ರ ಬರೆದಿತ್ತು. ನಂತರ ಸಂಬಂಧಿಸಿದ ರಾಜ್ಯಗಳು, ಅಲ್ಲಿನ ಆಮ್ಲಜನಕ ಉತ್ಪಾದಕರು ಮತ್ತು ಎಐಐಜಿಎಂಎ ಜೊತೆ ಚರ್ಚಿಸಿ ಆಮ್ಲಜನಕ ಹಂಚಿಕೆ ಪ್ರಮಾಣ ಪರಿಷ್ಕರಿಸಿದೆ.

ಕೋವಿಡ್ ನಿರ್ವಹಣೆ ಉದ್ದೇಶದಿಂದ ಜಾರಿಗೊಳಿಸುವ ಈ ಹಂಚಿಕೆ ಯೋಜನೆಯನ್ನು ಎಲ್ಲ ರಾಜ್ಯಗಳು ಮತ್ತು ಸಂಬಂಧಿಸಿದ ಏಜೆನ್ಸಿಗಳು ಪಾಲಿಸಬೇಕು ಎಂದು ಏ. 18ರ ಆದೇಶದಲ್ಲಿ ಸೂಚಿಸಿತ್ತು. ಆದರೆ, ಹಂಚಿಕೆ ಸೂತ್ರಕ್ಕೆ ಕರ್ನಾಟಕವೂ ಸೇರಿದಂತೆ ಯಾವುದೇ ರಾಜ್ಯಗಳು ವಿರೋಧ ವ್ಯಕ್ತಪಡಿಸಿಲ್ಲ. ಹೀಗಾಗಿ, ರಾಜ್ಯಗಳಿಗೆ ತಮ್ಮಲ್ಲಿ ಸಾಕಷ್ಟು ಪ್ರಮಾಣದ ಆಮ್ಲಜನಕದ ಉತ್ಪಾದನೆ ಆಗುತ್ತಿದ್ದರೂ, ಕೇಂದ್ರ ಹಂಚಿಕೆ ಮಾಡಿದ ಪಾಲು ಮಾತ್ರ ಪಡೆಯಲು ಅವಕಾಶವಿದೆ.

ಕೋವಿಡ್ ರೋಗಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕದ ಅಗತ್ಯ ಇದೆ ಎಂದು ಏ. 20ರ ವೇಳೆಗೆ ರಾಜ್ಯ ಸರ್ಕಾರಕ್ಕೆ ಅರಿವಾಗಿತ್ತು. ಹಂಚಿಕೆಗಿಂತ ಹೆಚ್ಚುವರಿ ಪೂರೈಸುವಂತೆ ಕೇಂದ್ರ ಆರೋಗ್ಯ ಸಚಿವ ಮತ್ತು ರೈಲ್ವೆ ಸಚಿವರಿಗೆ ಮುಖ್ಯಮಂತ್ರಿ ಪತ್ರ ಬರೆದಿದ್ದರು. ಏ 30ರ ವೇಳೆಗೆ 1,471 ಟನ್ ಅಗತ್ಯವಿದೆ ಎಂದೂ ಕೋರಿದ್ದರು.

ಕೇಂದ್ರ ಸರ್ಕಾರದ ನಿಯಮದ ಪ್ರಕಾರ, ಸಕ್ರಿಯ ಪ್ರಕರಣಗಳ ಶೇ 17ರಷ್ಟು ರೋಗಿಗಳಿಗೆ ಆಮ್ಲಜನಕ ಸೌಲಭ್ಯದ ಹಾಸಿಗೆ, ಶೇ 3ರಷ್ಟು ರೋಗಿಗಳಿಗೆ ಐಸಿಯು ಹಾಸಿಗೆ ಬೇಕಾಗುತ್ತದೆ. ಅದರ ಅನ್ವಯ ಮೇ 5ಕ್ಕೆ 1,792 ಟನ್ ಆಮ್ಲಜನಕ ಬೇಕಾಗುತ್ತದೆ. ಅದೇ ನಿಯಮದ ಪ್ರಕಾರ ಕನಿಷ್ಠ 1,162 ಟನ್ ಹಂಚಿಕೆ ಮಾಡಲೇಬೇಕು ಎಂದು ಡಿಪಿಐಐಟಿ ಕಾರ್ಯದರ್ಶಿ ಎ ಗಿರಿಧರ್ ಅವರಿಗೆ ರಾಜ್ಯದ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಏ.30 ರಂದೇ ಪತ್ರ ಬರೆದಿದ್ದಾರೆ.

ಈ ಬೇಡಿಕೆಗೆ ಕೇಂದ್ರ ಸಕಾರಾತ್ಮಕವಾಗಿ ಸ್ಪಂದಿಸದೇ ಇರುವುದು ಸಮಸ್ಯೆಗೆ ಕಾರಣ ಎನ್ನಲಾಗುತ್ತಿದೆ.

ರಾಜ್ಯಕ್ಕೆ ಆಮ್ಲಜನಕ ಪೂರೈಕೆ

965 ಟನ್
ಒಟ್ಟು ಹಂಚಿಕೆ (ಮೇ 5)

795 ಟನ್
ರಾಜ್ಯದ ಉತ್ಪಾದನಾ ಘಟಕಗಳಿಂದ

20 ಟನ್
ಆಂಧ್ರಪ್ರದೇಶದ ಆರ್‌ಐಎನ್‌ಎಲ್ (ವಿಶಾಖಪಟ್ಟಣ) ಸ್ಟೀಲ್ ಪ್ಲಾಂಟ್

30 ಟನ್
ಕೇರಳದ ಇನ್ನೋಕ್ಸ್ ಕಂಜಿಕೋಡ್

90 ಟನ್
ಒಡಿಶಾದ ಲಿಂಡೇ ಕಳಿಂಗನಗರ

30 ಟನ್
ಒಡಿಶಾ ಟಾಟಾ ಬಿಎಸ್‌ಎಲ್ ಅಂಗೂಲ್

'ಕೋವಿಡ್ ಪ್ರಸರಣ: ಮೇ ಅಂತ್ಯಕ್ಕೆ ಇಳಿಮುಖ ಸಾಧ್ಯತೆ'



ನವದೆಹಲಿ (ಪಿಟಿಐ): ಮೇ ತಿಂಗಳ ಮಧ್ಯದಲ್ಲಿ ಇಲ್ಲವೇ ತಿಂಗಳಾಂತ್ಯಕ್ಕೆ ದೇಶದಲ್ಲಿ ಕೋವಿಡ್–19 ಪ್ರಕರಣಗಳಲ್ಲಿ ಇಳಿಕೆ ಕಂಡು ಬರಬಹುದು ಎಂದು ಖ್ಯಾತ ಲಸಿಕೆ ತಜ್ಞೆ ಗಗನದೀಪ್ ಕಾಂಗ್ ಹೇಳಿದ್ದಾರೆ.

'ಬರುವ ದಿನಗಳಲ್ಲಿ ಇನ್ನೂ ಎರಡು ಅಥವಾ ಮೂರು ಬಾರಿ ಅತ್ಯಧಿಕ ಕೋವಿಡ್ ಪ್ರಕರಣಗಳು ವರದಿಯಾಗುವ ಸಾಧ್ಯತೆ ಇದೆ. ಆದರೆ, ಈಗ ಕಂಡುಬಂದಿರುವಷ್ಟು ತೀವ್ರತೆ ಇರುವುದಿಲ್ಲ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಈ ಸೋಂಕು ಈಗ ಜಗತ್ತಿನ ಎಲ್ಲ ಪ್ರದೇಶಗಳಲ್ಲೂ ವ್ಯಾಪಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಕೋವಿಡ್ ಪ್ರಕರಣಗಳು ಕಾಣಿಸಿಕೊಂಡಿವೆ' ಎಂದು ಹೇಳಿದ್ದಾರೆ.

'ಕೋವಿಡ್ ಲಸಿಕೆಗಳು ಸುರಕ್ಷಿತ ಹಾಗೂ ಪರಿಣಾಮಕಾರಿ ಎಂಬುದು ಸಾಬೀತಾಗಿದೆ. ಹೀಗಾಗಿ ಲಸಿಕೆ ನೀಡುವುದಕ್ಕೆ ಮತ್ತಷ್ಟು ಚುರುಕು ನೀಡುವುದರಿಂದ ಕೊರೊನಾ ಸೋಂಕಿನ ಪ್ರಸರಣಕ್ಕೆ ಕಡಿವಾಣ ಹಾಕಲು ಸಾಧ್ಯ' ಎಂದೂ ಹೇಳಿದರು.

ಪ್ರಧಾನಿ ವೈಫಲ್ಯ– ಮತ್ತೊಮ್ಮೆ ಲಾಕ್‌ಡೌನ್‌ನತ್ತ ದೇಶ: ಟೀಕೆ



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಕೋವಿಡ್–19 ನಿರ್ವಹಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವೈಫಲ್ಯ, ಪಿಡುಗು ಪ್ರಸರಣ ತಡೆಯುವಲ್ಲಿ ಸಮರ್ಪಕ ಕಾರ್ಯತಂತ್ರದಿಂದಾಗಿ ದೇಶ ಮತ್ತೊಮ್ಮೆ ಸಂಪೂರ್ಣ ಲಾಕ್‌ಡೌನ್‌ನತ್ತ ಸಾಗುವಂತಾಗಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟೀಕಿಸಿದ್ದಾರೆ.

'ಕಳೆದ ವರ್ಷ ಯಾವುದೇ ತಯಾರಿ ಇಲ್ಲದೇ ಲಾಕ್‌ಡೌನ್ ವಿಧಿಸಿದ ಕಾರಣ ಜನರು ತತ್ತರಿ ಹೋದರು. ಹೀಗಾಗಿ ಮತ್ತೊಮ್ಮೆ ಸಂಪೂರ್ಣ ಲಾಕ್‌ಡೌನ್ ಜಾರಿಗೊಳಿಸುವುದನ್ನು ನಾನು ವಿರೋಧಿಸುತ್ತೇನೆ' ಎಂದ ಅವರು, 'ಬಡ ಜನರಿಗಾಗಿ ಸೂಕ್ತ ಪ್ಯಾಕೇಜ್ ಘೋಷಣೆ ಮಾಡಬೇಕು' ಎಂದು ಒತ್ತಾಯಿಸಿದರು.

'ಐದು ರಾಜ್ಯಗಳಲ್ಲಿ ಚುನಾವಣೆಗಳು ಮುಗಿದಿವು. ಹೀಗಾಗಿ ಈಗ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಹೆಚ್ಚಿಸಲಾಗುತ್ತಿದೆ. ಈಗ ಕೇಂದ್ರ ಸರ್ಕಾರ ಲೂಟಿ ಆರಂಭಿಸಿದೆ' ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಮೃತದೇಹ ಸಾಗಿಸುತ್ತಿದ್ದ ವಾಹನ ಅಪಘಾತ

ಬೆಂಗಳೂರು: ನಗರದ ಟ್ರಿನಿಟಿ ವೃತ್ತದಲ್ಲಿ ಮೃತದೇಹ ಸಾಗಿಸುತ್ತಿದ್ದ ವಾಹನ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ತೀವ್ರವಾಗಿ ಗಾಯಗೊಂಡಿದ್ದಾರೆ.

ಗುರುವಾರ ಮಧ್ಯಾಹ್ನ ಈ ಅಪಘಾತ ಸಂಭವಿಸಿದೆ. ಗಾಯಗೊಂಡಿರುವ ಸವಾರನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲಸೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದ್ದು, ಟ್ರಿನಿಟಿ ವೃತ್ತದ ಬಳಿ ದ್ವಿಪಥ ರಸ್ತೆಯನ್ನು ಏಕಪಥವಾಗಿ ಮಾರ್ಪಡಿಸಲಾಗಿದೆ. ಇದೇ ರಸ್ತೆಯಲ್ಲೇ ವಾಹನ ಹಾಗೂ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಆಗಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ' ಎಂದು ಪೊಲೀಸರು ಹೇಳಿದರು.

ಅಕಾಡೆಮಿಕ್ ಕೌನ್ಸಿಲ್‌ಗೆ ನಾಮನಿರ್ದೇಶನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರನ್ನಾಗಿ ಶಾಸಕರಾದ ಎಂ.ಸತೀಶ್ ರೆಡ್ಡಿ (ಬೊಮ್ಮನಹಳ್ಳಿ), ಕೆ.ಶ್ರೀನಿವಾಸ ಮೂರ್ತಿ (ನೆಲಮಂಗಲ) ಹಾಗೂ ಅನಿತಾ ಕುಮಾರಸ್ವಾಮಿ (ರಾಮನಗರ) ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

'ಇವರು ಮುಂದಿನ ಮೂರು ವರ್ಷ ಸದಸ್ಯರಾಗಿರಲಿದ್ದಾರೆ' ಎಂದು ಕುಲಸಚಿವರ ಪ್ರಕಟಣೆ ತಿಳಿಸಿದೆ.

'ಪ್ರತಿ ಗ್ರಾಮದಲ್ಲೂ ಆರೈಕೆ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಹರಡುವಿಕೆ ತಡೆಯಲು ರಾಜ್ಯದ ಎಲ್ಲ ಗ್ರಾಮಗಳಲ್ಲೂ ಆರೈಕೆ ಕೇಂದ್ರಗಳನ್ನು ಆರಂಭಿಸಬೇಕು. ಆಮ್ಲಜನಕ ಸೌಲಭ್ಯವಿರುವ ಹಾಸಿಗೆಗಳ ಸಂಖ್ಯೆ ಹೆಚ್ಚಿಸಬೇಕು. ಪ್ರತಿನಿತ್ಯ ಈ ಹಾಸಿಗೆಗಳ ಮಾಹಿತಿ ಜನರಿಗೆ ಸಿಗುವ ವ್ಯವಸ್ಥೆ ಮಾಡಬೇಕು' ಎಂದು ಜನಾಗ್ರಹ ಆಂದೋಲನ ಗುರುವಾರ ಸರ್ಕಾರವನ್ನು ಒತ್ತಾಯಿಸಿದೆ.

ಕರ್ನಾಟಕ ಜನಶಕ್ತಿ ಸಂಘಟನೆ ಹಮ್ಮಿಕೊಂಡಿದ್ದ ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಈ ಆಂದೋಲನ ಬೆಂಬಲಿಸಿ, ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ್ ಸೆಂಥಿಲ್, ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಲೇಖಕಿ ಬಿ.ಟಿ.ಲಲಿತಾ ನಾಯ್ಕ್, ದಲಿತ ಮುಖಂಡ ಮಾವಳ್ಳಿ ಶಂಕರ್ ಮಾತನಾಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಚಲನಚಿತ್ರ ನಟ ಚೇತನ್, ವಕೀಲ ಸಿ.ಎಸ್.ದ್ವಾರಕನಾಥ್, ರೈತ ಮುಖಂಡ ಕಡಿದಾಳ್ ಶಾಮಣ್ಣ, ಬಡಗಲಪುರ ನಾಗೇಂದ್ರ, ಹಿರಿಯ ಪತ್ರಕರ್ತ ದಿನೇಶ್ ಅಮಿನ್‌ಮಟ್ಟು, ನೂರ್ ಶ್ರೀಧರ್, ಸಿರಿಮನೆ ನಾಗರಾಜ್ ಹೀಗೆ ಅನೇಕ ಹೋರಾಟಗಾರರು ಸಾಹಿತಿಗಳು ಮತ್ತು ಚಿಂತಕರನ್ನೊಳಗೊಂಡಂತೆ ಒಟ್ಟು 66 ಮಂದಿ ಸಹಿ ಹಾಕಿದ್ದಾರೆ. ಆ ಮೂಲಕ ಆಂದೋಲನಕ್ಕೆ ಪರೋಕ್ಷ ಬೆಂಬಲ ಸೂಚಿಸಿದ್ದಾರೆ.

ಪ್ರಮುಖ ಹಕ್ಕೊತ್ತಾಯಗಳು:

- ಎಲ್ಲ ವಯೋಮಾನದವರಿಗೂ ಕೋವಿಡ್ ಲಸಿಕೆ ಉಚಿತವಾಗಿ ನೀಡಬೇಕು. ಸರ್ಕಾರದಿಂದಲೇ ಎಲ್ಲ ಕುಟುಂಬಗಳಿಗೂ ಪಡಿತರ ಕಿಟ್ ಉಚಿತವಾಗಿ ವಿತರಿಸಬೇಕು.
- ಕೊರೊನಾದಿಂದ ಕೆಲಸ ಕಳೆದುಕೊಂಡಿರುವ ಅಸಂಘಟಿತ ಕಾರ್ಮಿಕರು, ಆಟೊ ಮತ್ತು ಟ್ಯಾಕ್ಸಿ ಚಾಲಕರು, ನೇಕಾರರು, ಕೃಷಿ ಕಾರ್ಮಿಕರು, ಸಣ್ಣ ವ್ಯಾಪಾರಿ, ಸ್ವಯಂ ಉದ್ಯೋಗಿ ಮುಂತಾದವರಿಗೆ ದೆಹಲಿ ಸರ್ಕಾರದ ಮಾದರಿಯಲ್ಲಿ ಮಾಸಿಕ ₹5 ಸಾವಿರ ಆರ್ಥಿಕ ನೆರವು ನೀಡಬೇಕು. ಅದನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಬೇಕು.
- ಕೊರೊನಾದಿಂದ ದುಡಿಯುವ ವ್ಯಕ್ತಿಯನ್ನು ಕಳೆದುಕೊಂಡ ಕುಟುಂಬಗಳಿಗೆ ಕನಿಷ್ಠ ₹5 ಲಕ್ಷ ಪರಿಹಾರ ಒದಗಿಸಬೇಕು.
- ರಾಜ್ಯದಲ್ಲಿ ನಡೆಯುತ್ತಿರುವ ಕಾರ್ಪೊರೇಟ್ ವಹಿವಾಟಿನ ಮೇಲೆ ಶೇ 2ರಷ್ಟು ಕೊರೊನಾ ಸೆಸ್ ವಿಧಿಸಬೇಕು.
- ರಾಜ್ಯದ ಎಲ್ಲಾ ಉದ್ಯಮಿಗಳು ಮತ್ತು ರಾಜಕಾರಣಿಗಳ ವಾರ್ಷಿಕ ಆದಾಯದ ಶೇ 5ರಷ್ಟನ್ನು ಸುಂಕವಾಗಿ ಸಂಗ್ರಹಿಸಿ ಇದನ್ನು ಸರ್ಕಾರಕ್ಕೆ ಒದಗಿಸುವಂತೆ ಸುಗ್ರೀವಾಜ್ಞೆ ಹೊರಡಿಸಬೇಕು.
- ಮೆಟ್ರೊ ವಿಸ್ತರಣೆ, ರಸ್ತೆ ಅಭಿವೃದ್ಧಿ, ಸರ್ಕಾರಿ ಸೌಧಗಳ ನಿರ್ಮಾಣ, ಮಠಗಳಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ಕೋವಿಡ್ ನಿರ್ವಹಣೆಗೆ ಬಳಸಿಕೊಳ್ಳಬೇಕು.
- ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಬರ, ನೆರೆ ಪರಿಹಾರ, ಜಿಎಸ್‌ಟಿ ಬಾಬ್ತಿನ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಬೇಕು.

ಸತೀಶ್ ರೆಡ್ಡಿ ಪಿ.ಎ ವಿರುದ್ಧ ಆರೋಪ

ಒಂದನೇ ಪುಟದಿಂದ

ಸುದ್ದಿಗಾರರ ಜೊತೆ ಮಾತನಾಡಿದ ನೇತ್ರಾವತಿ ಅವರ ಮಗಳು, 'ಪ್ರಕರಣದಲ್ಲಿ ಅಮ್ಮನ ಪಾತ್ರವಿಲ್ಲ. ಎಲ್ಲ ಮಾಡಿದ್ದು ಸತೀಶ್ ರೆಡ್ಡಿ ಅವರ ಆಪ್ತ ಸಹಾಯಕ' ಎಂದು ಆರೋಪಿಸಿದ್ದಾರೆ.

'ನಮ್ಮ ಅಮ್ಮನಿಗೆ (ನೇತ್ರಾವತಿ) ನಾವು ಮೂರು ಜನ ಮಕ್ಕಳು. ನಾನು, ತಮ್ಮ ಹಾಗೂ ಅಕ್ಕ. ಅಮ್ಮ ಕಾಂಗ್ರೆಸ್‌ನಲ್ಲಿದ್ದರು. ಆದರೆ, ಪಕ್ಷದ ಹೆಸರಿನಲ್ಲಿ ಸಾಮಾಜಿಕ ಕೆಲಸ ಮಾಡುತ್ತಿದ್ದರು. ಎಲ್ಲ ಪಕ್ಷದವರಿಗೂ ಸಹಾಯ ಮಾಡುತ್ತಿದ್ದರು.'

'ಖಾಸಗಿ ಆಸ್ಪತ್ರೆಗೆ ಹೋಗಿದ್ದರೆ ಹೆಚ್ಚು ಹಣ ವೆಚ್ಚವಾಗುತ್ತಿತ್ತು. ಕಡಿಮೆ ಹಣ ನೀಡುವಂತೆ ಆಪ್ತ ಸಹಾಯಕ ಕೇಳಿದ್ದರು. ರೋಗಿಗಳೇ ಅವರಿಗೆ ಹಣ ಕೊಟ್ಟಿದ್ದಾರೆ. ಹಣ ವರ್ಗಾವಣೆ ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದೇವೆ. ಆದರೆ, ಪೊಲೀಸರು ಮಾಧ್ಯಮದವರ ಜೊತೆ ಮಾತನಾಡದಂತೆ ತಾಕೀತು ಮಾಡಿದ್ದಾರೆ. ಪ್ರಕರಣದಲ್ಲಿ ಅಮ್ಮನ ಪಾತ್ರವಿಲ್ಲ' ಎಂದೂ ಹೇಳಿದ್ದಾರೆ.

ಆಸ್ಪತ್ರೆಗಳಲ್ಲಿ ಆಮ್ಲಜನಕ ಸಹಾಯವಾಣಿ ಮಾಹಿತಿ

ಒಂದನೇ ಪುಟದಿಂದ

ಆಮ್ಲಜನಕ ಪೂರೈಕೆಯ ನಿರ್ವಹಣೆಗೆ ಸಿದ್ಧಪಡಿಸಿರುವ ಕರಡು ಮಾರ್ಗಸೂಚಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ರಾಜ್ಯ ಸರ್ಕಾರ, ಈವರೆಗೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿನ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆಗೆ ಸಂಬಂಧಿಸಿದಂತೆ ನಿಶ್ಚಿತವಾದ ಯಾವುದೇ ಮಾರ್ಗಸೂಚಿಗಳು ಇರಲಿಲ್ಲ ಎಂಬ ಮಾಹಿತಿ ನೀಡಿತು.

'ರಾಜ್ಯದಲ್ಲಿ ಆಮ್ಲಜನಕದ ಬಾಟ್ಲಿಂಗ್ ಘಟಕಗಳು ಇರುವ ಸ್ಥಳ, ಪ್ರತಿ ಬಾಟ್ಲಿಂಗ್ ಘಟಕದ ಸಾಮರ್ಥ್ಯ ಮತ್ತು ಪ್ರಸ್ತುತ ಅಲ್ಲಿ ಲಭ್ಯವಿರುವ ಆಮ್ಲಜನಕದ ಪ್ರಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರೀಕೃತ ಮಾಹಿತಿಯೇ ಲಭ್ಯವಿಲ್ಲ. ಸದ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಆಮ್ಲಜನಕದ ಬೇಡಿಕೆಗೆ ಸಂಬಂಧಿಸಿದಂತೆಯೂ ಕೇಂದ್ರೀಕೃತವಾಗಿ ಮಾಹಿತಿ ಸಂಗ್ರಹಿಸುವ ವ್ಯವಸ್ಥೆ ಇಲ್ಲ' ಎಂದ ನ್ಯಾಯಪೀಠ, ಈ ಎಲ್ಲ ವಿಚಾರಗಳ ಕುರಿತಾಗಿ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿತು.

'ಪ್ರೆಷರ್ ಸ್ವಿಂಗ್ ಅಡ್ಸಾರ್ಪ್ಶನ್' ತಂತ್ರಜ್ಞಾನದಲ್ಲಿ ಆಮ್ಲಜನಕ ಉತ್ಪಾದಿಸುವ 68 ಘಟಕಗಳು ಮೇ ಅಂತ್ಯದೊಳಗೆ ಕಾರ್ಯಾರಂಭ ಮಾಡಲಿವೆ. ಈ ಪೈಕಿ 28 ಘಟಕಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಪ್ರತಿ ಘಟಕವು ನಿಮಿಷಕ್ಕೆ 500 ಲೀಟರ್ ಆಮ್ಲಜನಕ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ. ಅದನ್ನು ಬಳಸಿಕೊಂಡು 15ರಿಂದ 20 ಹಾಸಿಗೆಗಳನ್ನು ನಿರ್ವಹಣೆ ಮಾಡಬಹುದು' ಎಂದು ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವಡಗಿ, ಕೋರ್ಟ್‌ಗೆ ಮಾಹಿತಿ ನೀಡಿದರು.

ಕೋವಿಡ್: ಮಾದರಿ ಸಂಗ್ರಹಕ್ಕೂ ಮೊದಲೇ ಚಿಕಿತ್ಸೆ

ಬೆಂಗಳೂರು: ಕೊರೊನಾ ಸೋಂಕಿನ ಲಕ್ಷಣಗಳು ಇದ್ದವರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ವರದಿಗೆ ಮುನ್ನ ಅಥವಾ ಮಾದರಿ ಸಂಗ್ರಹಿಸುವ ಮೊದಲೇ ಚಿಕಿತ್ಸೆ ಪ್ರಾರಂಭಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸದ್ಯದ ಸ್ಥಿತಿಗತಿಯ ಬಗ್ಗೆ ಚರ್ಚಿಸಿ, ಕೆಲವೊಂದು ಸಲಹೆಗಳನ್ನು ನೀಡಿದೆ. ಸದ್ಯ ರಾಜ್ಯದಲ್ಲಿ ಸೋಂಕು ದೃಢ ಪ್ರಮಾಣ ಶೇ 30ರಷ್ಟಿದೆ. ಸೋಂಕು ಶಂಕಿತರ ಮಾದರಿಗಳನ್ನು ಸಂಗ್ರಹಿಸಿ, ವರದಿ ಪಡೆಯಲು ಸಮಯ ಹಿಡಿಯಲಿದೆ. ಹಾಗಾಗಿ, ಸೋಂಕು ಶಂಕಿತರು, ಅಧಿಕ ಅಪಾಯ ಇರುವ ವರ್ಗ ಹಾಗೂ ಪ್ರಾಥಮಿಕ ಸಂಪರ್ಕಿತರಿಗೆ ಮನೆಯಲ್ಲಿಯೇ ಚಿಕಿತ್ಸೆ ಪ್ರಾರಂಭಿಸಲು ಶಿಫಾರಸು ಮಾಡಲಾಗಿದೆ. ಅದರ ಅನುಸಾರ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯರು ಅಗತ್ಯ ಇರುವವರಿಗೆ ಔಷಧಗಳನ್ನು ಬರೆದುಕೊಡಬಹುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಲ್ಲಿ ಕೋವಿಡ್ ಮಾರ್ಗಸೂಚಿ ಅನುಸಾರ ಚಿಕಿತ್ಸೆ ಮುಂದುವರಿಸಲಾಗುತ್ತದೆ ಎಂದು ಸುತ್ತೋಲೆ ವಿವರಿಸಿದೆ.

ಚುನಾವಣೋತ್ತರ ಹಿಂಸಾಚಾರದ ಸತ್ಯಶೋಧನೆ: ಸಾವಿನ ಸಂಖ್ಯೆ 16ಕ್ಕೆ ಏರಿಕೆ

ಬಂಗಾಳಕ್ಕೆ ಬಂದಿಳಿದ ಕೇಂದ್ರದ ತಂಡ



ಪಶ್ಚಿಮ ಬಂಗಾಳ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಶಾಸಕರಿಗೆ ಹಂಗಾಮಿ ಸ್ಪೀಕರ್ ಸುಬ್ರತಾ ಮುಖರ್ಜಿ ಅವರು ಗುರುವಾರ ಪ್ರಮಾಣ ವಚನ ಬೋಧಿಸಿದರು – ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಕೇಂದ್ರದ ಗೃಹ ಸಚಿವಾಲಯವು ನಿಯೋಜಿಸಿರುವ, ನಾಲ್ಕು ಮಂದಿ ಸದಸ್ಯರ 'ಸತ್ಯಶೋಧನಾ ತಂಡ' ಗುರುವಾರ ಪಶ್ಚಿಮ ಬಂಗಾಳಕ್ಕೆ ಬಂದಿಳಿದಿದೆ. ಚುನಾವಣೋತ್ತರ ಗಲಭೆಗಳ ಕಾರಣಗಳನ್ನು ತಿಳಿಯಲು ಈ ತಂಡವನ್ನು ಕೇಂದ್ರದ ಗೃಹ ಸಚಿವಾಲಯವು ಕಳುಹಿಸಿದೆ.

ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನೇತೃತ್ವದ ತಂಡವು ರಾಜ್ಯದ ಸಚಿವಾಲಯಕ್ಕೆ ಭೇಟಿ ನೀಡಿ ಗೃಹ ಕಾರ್ಯದರ್ಶಿ ಹಾಗೂ ಡಿಜಿಪಿ ಜೊತೆ ಮಾತುಕತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಈ ತಂಡವು ರಾಜ್ಯದ ಈಗಿನ ಪರಿಸ್ಥಿತಿಯ ಅವಲೋಕನವನ್ನೂ ನಡೆಸಲಿದ್ದು ಕೋಲ್ಕತ್ತದ ವಿವಿಧ ಪ್ರದೇಶಗಳು ಹಾಗೂ ಉತ್ತರ 24 ಪರಗಣ ಜಿಲ್ಲೆಗೆ ಭೇಟಿ ನೀಡಿ ಸಂತ್ರಸ್ತರ ಜತೆಗೆ ಮಾತುಕತೆ ನಡೆಸಲಿದೆ. ದಕ್ಷಿಣ ಪರಗಣ ಜಿಲ್ಲೆ ಹಾಗೂ ಇನ್ನೂ ಕೆಲವು ಪ್ರದೇಶಗಳಿಗೆ ತಂಡವು ಭೇಟಿ ನೀಡಲಿದೆ ಎನ್ನಲಾಗಿದೆ.

'ಯಾವುದೇ ಸಮಯವನ್ನು ವ್ಯರ್ಥ ಮಾಡದೆ, ಚುನಾವಣೋತ್ತರ ಗಲಭೆಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಕೂಡಲೇ ಕಳುಹಿಸಿಕೊಡಬೇಕು' ಎಂದು ಕೇಂದ್ರದ ಗೃಹ ಸಚಿವಾಲಯವು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಬುಧವಾರ ಕಠಿಣ ಪದಗಳ ನೆನಪಿನೋಲೆಯನ್ನು ಕಳುಹಿಸಿತ್ತು.

ರಾಜ್ಯದ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾಹಿತಿ ಒದಗಿಸುವಂತೆ ಕೇಂದ್ರವು ರಾಜ್ಯಪಾಲ ಜಗದೀಪ್ ಧನ್‌ಕರ್ ಅವರಿಗೂ ಸೂಚನೆ ಕೊಟ್ಟಿದೆ.

ಕೇಂದ್ರದ ತಂಡವು ರಾಜ್ಯಕ್ಕೆ ಭೇಟಿ ನೀಡುತ್ತಿದ್ದಂತೆಯೇ ಮಾಧ್ಯಮಗೋಷ್ಠಿ ನಡೆಸಿದ ಮಮತಾ, 'ಮೇ 3ರ ನಂತರ ನಡೆದ ಚುನಾವಣೋತ್ತರ ಹಿಂಸಾಚಾರದಲ್ಲಿ 16 ಮಂದಿ ಸತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಟಿಎಂಸಿ ಹಾಗೂ ಬಿಜೆಪಿಯ ಕಾರ್ಯಕರ್ತರು. ಒಬ್ಬರು ಮಾತ್ರ ಸಂಯುಕ್ತ ಮೋರ್ಚಾದ ಕಾರ್ಯಕರ್ತರು. ಹಿಂಸಾಚಾರ ಸಂಭವಿಸಿದಾಗ ರಾಜ್ಯದಲ್ಲಿ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿತ್ತು' ಎಂದಿದ್ದಾರೆ.

'ಕೇಂದ್ರದ ನಾಯಕರು ರಾಜ್ಯದಲ್ಲಿ ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ. ಬಿಜೆಪಿಯ ಅಭ್ಯರ್ಥಿಗಳು ಗೆದ್ದಿರುವ ಕ್ಷೇತ್ರಗಳಲ್ಲೇ ಹೆಚ್ಚಿನ ಹಿಂಸಾಚಾರ ನಡೆದಿದೆ. ಇದು, ಜನರ ತೀರ್ಪನ್ನು ಬಿಜೆಪಿಯು ಇನ್ನೂ ಒಪ್ಪಿಕೊಂಡಿಲ್ಲ ಎಂಬುದರ ಸೂಚನೆ. ನಾನು ಅಧಿಕಾರ ವಹಿಸಿಕೊಂಡು 24 ಗಂಟೆಗಳೂ ಆಗಿಲ್ಲ. ನಿನ್ನೆಯಷ್ಟೇ ಕೇಂದ್ರವು ಪತ್ರ ಕಳುಹಿಸಿತ್ತು, ಇಂದು ತನಿಖಾ ತಂಡ ಬಂದಿದೆ. ಸ್ವಲ್ಪ ಸಂಯಮವನ್ನು ಕಾಪಾಡುವಂತೆ ನಾನು ಬಿಜೆಪಿಗೆ ಮನವಿ ಮಾಡುತ್ತೇನೆ' ಎಂದು ಮಮತಾ ಹೇಳಿದ್ದಾರೆ.

ಪೊಲೀಸ್ ಅಧಿಕಾರಿಗಳ ವರ್ಗಾವಣೆ

ಪಶ್ಚಿಮ ಬಂಗಾಳ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಮಮತಾ ಬ್ಯಾನರ್ಜಿ ಅವರು ಪೊಲೀಸ್ ಇಲಾಖೆಯಲ್ಲಿ ಭಾರಿ ಬದಲಾವಣೆ ಮಾಡಿದ್ದಾರೆ. ಮತದಾನದ ಕಾರಣ ಚುನಾವಣಾ ಆಯೋಗ ಸ್ಥಳಾಂತರ ಮಾಡಿದ್ದ 29 ಉನ್ನತ ಪೊಲೀಸ್ ಅಧಿಕಾರಿಗಳನ್ನು ಅವರು ಹಿಂದೆ ಇದ್ದ ಸ್ಥಳಗಳಿಗೆ ವರ್ಗಾವಣೆ ಮಾಡಿದ್ದಾರೆ.

ಡಿಜಿ ವೀರೇಂದ್ರ, ಕಾನೂನು ಮತ್ತು ಸುವ್ಯವಸ್ಥೆ ಎಡಿಜಿ ಜಾವೇದ್ ಶಮೀಮ್, ಭದ್ರತಾ ಡಿಜಿ ವಿವೇಕ್ ಸಹಾಯ್ ಮತ್ತು ಇತರರನ್ನು ಅವರ ಮೂಲ ಸ್ಥಳಕ್ಕೆ ನಿಯುಕ್ತಿಗೊಳಿಸಿ ಆದೇಶಿಸಿದ್ದಾರೆ.

ಕೂಚ್‌ಬಿಹಾರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೇಬಶಿಶ್ ಧಾರ್ ಅವರನ್ನು ಅಮಾನತು ಮಾಡಿ ಮಮತಾ ಆದೇಶಿಸಿದ್ದಾರೆ. ಜಿಲ್ಲೆಯ ಸೀತಾಲಕುಚಿ ಕ್ಷೇತ್ರದಲ್ಲಿ ಏಪ್ರಿಲ್ 10ರಂದು ಚುನಾವಣೆ ವೇಳೆ ಸಿಐಎಸ್‌ಎಫ್ ಗುಂಡಿನ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದರು. ಘಟನೆ ಬಗ್ಗೆ ಸಿಐಡಿ ತನಿಖೆಗೆ ಮಮತಾ ಈಗಾಗಲೇ ಆದೇಶಿಸಿದ್ದಾರೆ.

'ಕಳೆದ ಮೂರು ತಿಂಗಳಿನಿಂದ ಆಡಳಿತ ನನ್ನ ನಿಯಂತ್ರಣದಲ್ಲಿರಲಿಲ್ಲ. ಅದು ಚುನಾವಣಾ ಆಯೋಗದ ನಿಯಂತ್ರಣದಲ್ಲಿತ್ತು. ಹೀಗಾಗಿ ಅದಕ್ಷತೆ ಕಂಡುಬಂದಿತ್ತು' ಎಂದು ವರ್ಗಾವಣೆಗೂ ಮುನ್ನ ಮಮತಾ ಹೇಳಿದ್ದಾರೆ.

₹2 ಲಕ್ಷ ಪರಿಹಾರ

ಚುನಾವಣೋತ್ತರ ಹಿಂಸಾಚಾರದಲ್ಲಿ ಸತ್ತ 16 ಮಂದಿಯ ಕುಟುಂಬದ ವರಿಗೆ ತಲಾ ₹2 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ.

ಕೂಚ್‌ಬಿಹಾರ್‌ನಲ್ಲಿ ಮತದಾನದ ಸಂದರ್ಭದಲ್ಲಿ ಗೃಹರಕ್ಷಕ ದಳದವರು ಹಾಗೂ ಸಾರ್ವಜನಿಕರ ಮಧ್ಯೆ ಸಂಘರ್ಷ ನಡೆದಾಗ ಸಿಬ್ಬಂದಿ ಹಾರಿಸಿದ ಗುಂಡಿಗೆ ಬಲಿಯಾದ ಐವರ ಕುಟುಂಬದ ತಲಾ ಒಬ್ಬ ಸದಸ್ಯರಿಗೆ ಗೃಹರಕ್ಷಕ ದಳದಲ್ಲಿ ಉದ್ಯೋಗ ನೀಡುವುದಾಗಿಯೂ ಅವರು ಭರವಸೆ ನೀಡಿದ್ದಾರೆ. ಸಿಐಡಿಯ ತಂಡವು ಕೂಚ್‌ಬಿಹಾರ್ ಗಲಭೆಯ ತನಿಖೆಯನ್ನು ಈಗಾಗಲೇ ಆರಂಭಿಸಿದೆ ಎಂದೂ ಅವರು ತಿಳಿಸಿದರು.

ಇಂದು ಸ್ಟಾಲಿನ್ ಪ್ರಮಾಣವಚನ

ಪ್ರಜಾವಾಣಿ ವಾರ್ತೆ



ಚೆನ್ನೈ: ತಮಿಳುನಾಡಿನ ನೂತನ ಮುಖ್ಯಮಂತ್ರಿಯಾಗಿ ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರು ಶುಕ್ರವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅವರ ಜತೆಯಲ್ಲಿ 33 ಶಾಸಕರು, ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಶುಕ್ರವಾರ ಬೆಳಿಗ್ಗೆ ರಾಜಭವನದಲ್ಲಿ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ.

ಸ್ಟಾಲಿನ್ ಅವರು ತಮ್ಮ ಸಂಪುಟಕ್ಕೆ, ಅನುಭವಿಗಳು ಮತ್ತು ಹೊಸಬರನ್ನೂ ಆಯ್ಕೆ ಮಾಡಿಕೊಂಡಿದ್ದಾರೆ. ಅನುಭವಿಗಳಲ್ಲಿ ಡಿಎಂಕೆ ಪ್ರಧಾನ ಕಾರ್ಯದರ್ಶಿ ದೊರೆ ಮುರುಗನ್ ಅವರಿಗೆ ಜಲಸಂಪನ್ಮೂಲ, ಕೆ.ಎನ್.ನೆಹರೂ ಅವರಿಗೆ ನಗರಾಡಳಿತ, ಐ. ಪೆರಿಯಾಸ್ವಾಮಿ ಅವರಿಗೆ ಸಹಕಾರ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಹೊಸಬರಿಗೂ ಪ್ರಮುಖ ಖಾತೆಗಳನ್ನು ನೀಡಲಾಗಿದೆ. ಮಾಜಿ ಬ್ಯಾಂಕರ್ ಪಿಟಿಆರ್‌ಪಿ ತ್ಯಾಗರಾಜನ್ ಅವರಿಗೆ ಹಣಕಾಸು, ಚೆನ್ನೈನ ಮಾಜಿ ಮೇಯರ್ ಮಾ ಸುಬ್ರಮಣಿಯನ್ ಅವರಿಗೆ ಆರೋಗ್ಯ, ಸ್ಟಾಲಿನ್ ಅವರ ಮಗ ಉದಯನಿಧಿ ಸ್ಟಾಲಿನ್ ಅವರ ಆಪ್ತ ಅನ್ಬಿಲ್ ಮಹೇಶ್ ಅವರಿಗೆ ಶಾಲಾ ಶಿಕ್ಷಣ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಹವಾಮಾನ ವೈಪರೀತ್ಯ, ರೈತರ ಕಲ್ಯಾಣ, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಅನಿವಾಸಿ ತಮಿಳರ ಕಲ್ಯಾಣ ಖಾತೆಗಳನ್ನು ರಚಿಸಿ, ಹಂಚಿಕೆ ಮಾಡಲಾಗಿದೆ. ಸ್ಟಾಲಿನ್ ಅವರ ಸಂಪುಟದಲ್ಲಿ ಇಬ್ಬರು ಮಹಿಳಾ ಸಚಿವರು ಇರಲಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಶಾಸಕರಿಗೂ ಸಚಿವ ಸ್ಥಾನ ದೊರೆತಿಲ್ಲ. ಡಿಎಂಕೆ ಪ್ರಾಬಲ್ಯವಿರುವ ಹಲವು ಜಿಲ್ಲೆಗಳ ಶಾಸಕರಿಗೆ ಸಚಿವ ಸ್ಥಾನ ನೀಡಲಾಗಿಲ್ಲ. ಬದಲಿಗೆ ವಿರೋಧಪಕ್ಷ ಎಐಎಡಿಎಂಕೆ ಪ್ರಾಬಲ್ಯವಿರುವ ಪಶ್ಚಿಮದ ಜಿಲ್ಲೆಗಳಿಂದ ಆಯ್ಕೆಯಾದವರಿಗೆ ಸಚಿವ ಸ್ಥಾನ ನೀಡಲಾಗಿದೆ. ಎಐಎಡಿಎಂಕೆ ಪ್ರಾಬಲ್ಯದ ಪ್ರದೇಶದಲ್ಲಿ ಪಕ್ಷದ ನೆಲೆಗಟ್ಟಿಗೊಳಿಸಲು ಈ ತಂತ್ರ ಅನುಸರಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಪ್ರಮಾಣವಚನ ಸ್ವೀಕಾರದ ನಂತರ ಅವರು, ಶಕ್ತಿ ಕೇಂದ್ರ ಫೋರ್ಟ್ ಸೇಂಟ್ ಜಾರ್ಜ್‌ಗೆ ತೆರಳಲಿದ್ದಾರೆ. ಶುಕ್ರವಾರ ಸಂಜೆ ಸ್ಟಾಲಿನ್ ಅವರು ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಲಿದ್ದಾರೆ. ಸಂಜೆ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹಲವು ಘೋಷಣೆಗಳನ್ನು ಸ್ಟಾಲಿನ್ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಆನ್‌ಲೈನ್ ಮೂಲಕವೇ ಅಂಗವಿಕಲರಿಗೆ ಪ್ರಮಾಣಪತ್ರ

ನವದೆಹಲಿ (ಪಿಟಿಐ): ಅಂಗವಿಕಲರಿಗೆ ಆನ್‌ಲೈನ್ ಮೂಲಕವೇ ಪ್ರಮಾಣಪತ್ರ ವಿತರಿಸುವುದನ್ನು ಕಡ್ಡಾಯಗೊಳಿಸಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಸೋಮವಾರ ಆದೇಶ ಹೊರಡಿಸಿದೆ.

ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಆನ್‌ಲೈನ್ ಮೂಲಕವೇ ಜೂನ್ 1ರಿಂದ ಜಾರಿಗೆ ಬರುವಂತೆ ಆನ್‌ಲೈನ್ ಮೂಲಕವೇ ಅಂಗವಿಕಲರಿಗೆ ಪ್ರಮಾಣಪತ್ರ ನೀಡಬೇಕು ಎಂದು ಸಚಿವಾಲಯ ಟ್ವೀಟ್ ಮಾಡಿದೆ.

ಕೋವಿಡ್ ಪರಿಸ್ಥಿತಿಯಿಂದಾಗಿ ವಿಧಿಸಲಾಗಿದ್ದ ನಿರ್ಬಂಧಗಳ ಹಿನ್ನೆಲೆಯಲ್ಲಿ ಪ್ರಮಾಣಪತ್ರ ಪಡೆಯುವುದು ಅಂಗವಿಕಲರಿಗೆ ಕಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಕುರಿತ ಬೇಡಿಕೆಗಳು ಕೇಳಿಬಂದಿದ್ದವು.

ಮೊರಾಕ್ಕೊದಲ್ಲಿ 9 ಶಿಶುಗಳಿಗೆ ಜನ್ಮ: ಗಿನ್ನೆಸ್ ದಾಖಲೆ

ಬಮಕೊ (ಪಿಟಿಐ): ಮಾಲಿ ದೇಶದ ಮಹಿಳೆಯೊಬ್ಬರು ಮೊರಾಕ್ಕೋದ ಕ್ಲಿನಿಕ್ ಒಂದರಲ್ಲಿ 9 ಶಿಶುಗಳಿಗೆ ಜನ್ಮ ನೀಡುವ ಮೂಲಕ ಗಿನ್ನೆಸ್ ಬುಕ್ ಅಫ್ ವರ್ಲ್ಡ್ ರೆಕಾರ್ಡ್ಸ್‌ಗೆ ಸೇರಿದ್ದಾರೆ.

ಹೆರಿಗೆ ಸಂದರ್ಭ 7 ಶಿಶುಗಳು ಜನಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಮಹಿಳೆ 9 ಶಿಶುಗಳಿಗೆ ಜನ್ಮ ನೀಡುವ ಮೂಲಕ ಅಚ್ಚರಿ ಮೂಡಿಸಿದ್ದಾರೆ. 2009ರಲ್ಲಿ ಎಂಟು ಅಕಾಲಿಕ ಆರೋಗ್ಯವಂತ ಶಿಶುಗಳಿಗೆ ಜನ್ಮ ನೀಡಿದ್ದ ಅಮೆರಿಕದ ನಾಡಿಯಾ ಸುಲೇಮಾನ್ ಅವರ ಹೆಸರು ಇದುವರೆಗೆ ಗಿನ್ನೆಸ್ ದಾಖಲೆಯಲ್ಲಿತ್ತು.

ಮಾಲಿ ಮಹಿಳೆಗೆ ಜನಿಸಿರುವ ಶಿಶುಗಳಲ್ಲಿ ಐದು ಹೆಣ್ಣು ಮತ್ತು ನಾಲ್ಕು ಗಂಡಾಗಿದ್ದು, ತಾಯಿ ಮತ್ತು ಶಿಶುಗಳು ಆರೋಗ್ಯವಾಗಿದ್ದಾರೆ ಎಂದು ಮಾಲಿಯ ಆರೋಗ್ಯ ಸಚಿವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

25 ವರ್ಷದ ಹಲಿಮಾ ಸಿಸ್ಸೆ 9 ಶಿಶುಗಳಿಗೆ ಸಿಸೇರಿಯನ್ ಮೂಲಕ ಜನ್ಮ ನೀಡಿದ್ದಾರೆ ಎಂದು ಮಾಲಿಯ ಉನ್ನತ ಆರೋಗ್ಯ ಅಧಿಕಾರಿ ಪ್ರಕಟಿಸಿದ್ದಾರೆ.

ಸ್ವಯಂ ಘೋಷಿತ ದೇವಮಾನವ ವಿರುದ್ಧ ಅತ್ಯಾಚಾರ ಆರೋಪ

ಜೈಪುರ (ಪಿಟಿಐ): ನಗರದಲ್ಲಿರುವ ಆಶ್ರಮವೊಂದರಲ್ಲಿರುವ ಸ್ವಯಂ ಘೋಷಿತ ದೇವಮಾನವ ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಒಂದೇ ಕುಟುಂಬದ ಮೂವರು ಸೇರಿದಂತೆ ನಾಲ್ವರು ಮಹಿಳೆಯರು ಗುರುವಾರ ಆರೋಪಿಸಿದ್ದಾರೆ.

'ತಪಸ್ವಿ ಆಶ್ರಮದ ಶೈಲೇಂದ್ರ ಮೆಹ್ತಾ ಎಂಬ ವ್ಯಕ್ತಿ ವಿರುದ್ಧ ನಾಲ್ವರು ಮಹಿಳೆಯರು ದೂರು ನೀಡಿದ್ದಾರೆ' ಎಂದು ಭಂಕರೋಟಾ ಪೊಲೀಸ್ ಠಾಣೆ ಅಧಿಕಾರಿ ಮುಕೇಶ್ ಚೌಧರಿ ತಿಳಿಸಿದ್ದಾರೆ.

'ಆಶ್ರಮದಲ್ಲಿ ಸತ್ಸಂಗ ಹಾಗೂ ಇತರ ಕಾರ್ಯಕ್ರಮಗಳು ನಡೆಯುತ್ತವೆ. ಇವುಗಳಲ್ಲಿ ಭಾಗಿಯಾಗಲು ನಾವು ಆಶ್ರಮಕ್ಕೆ ಭೇಟಿ ನೀಡುತ್ತಿದ್ದೆವು. ಸೇವಾ ದೃಷ್ಟಿಯಿಂದ ಕೆಲವು ದಿನ ಕಾಲ ಆಶ್ರಮದಲ್ಲಿ ತಂಗುತ್ತಿದ್ದೆವು. ಈ ರೀತಿ ತಂಗಿದ್ದ ವೇಳೆಯಲ್ಲಿ ಮೆಹ್ತಾ ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಮಹಿಳೆಯರು ದೂರಿನಲ್ಲಿ ತಿಳಿಸಿದ್ದಾರೆ' ಎಂದು ಚೌಧರಿ ಹೇಳಿದ್ದಾರೆ.

₹ 21 ಕೋಟಿ ಮೌಲ್ಯದ ಯುರೇನಿಯಂ ಜಪ್ತಿ

ಮಹಾರಾಷ್ಟ್ರ: ಎಟಿಎಸ್ ಕಾರ್ಯಾಚರಣೆ– ಆರೋಪಿಗಳಿಗೆ ಮೇ 12ರವರೆಗೆ ನ್ಯಾಯಾಂಗ ಬಂಧನ

ಮುಂಬೈ (ಪಿಟಿಐ): ಮುಂಬೈ ಹೊರವಲಯದ ಮನ್‌ಖುರ್ದ್ ಎಂಬಲ್ಲಿ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಕಾರ್ಯಾಚರಣೆ ನಡೆಸಿ ₹ 21.30 ಕೋಟಿ ಮೌಲ್ಯದ 7 ಕೆ.ಜಿ ಯುರೇನಿಯಂ ಜಪ್ತಿ ಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಗರ್ ಪಾಂಡ್ಯ ಹಾಗೂ ಅಬು ತಾಹಿರ್ ಅಫ್ಜಲ್ ಹುಸೇನ್ ಚೌಧರಿ ಎಂಬುವವರನ್ನು ಬಂಧಿಸಲಾಗಿದೆ ಎಂದು ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಮೇ 12 ರ ವರೆಗೆ ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜಪ್ತಿಮಾಡಿದಯುರೇನಿಯಂಅನ್ನು ಭಾಭಾ ಪರಮಾಣು ಸಂಶೋಧನಾ ಕೇಂದ್ರದ ವಿಜ್ಞಾನಿಗಳು ವಿಶ್ಲೇಷಿಸಿ, ವರದಿ ನೀಡಿದ್ದಾರೆ. ಅಧಿಕ ವಿಕಿರಣ ಹೊರಸೂಸುವ ಈ ಮೂಲಧಾತು, ಮಾನವನ ಜೀವಕ್ಕೆ ಅಪಾಯ ತರಬಲ್ಲದು ಎಂಬುದಾಗಿ ವಿಜ್ಞಾನಿಗಳು ವರದಿಯಲ್ಲಿ ವಿವರಿಸಿದ್ದಾರೆ' ಎಂದು ಎಟಿಎಸ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಠಾಣೆ ನಿವಾಸಿ, 27 ವರ್ಷದ ಜಿಗರ್ ಪಾಂಡ್ಯ ಎಂಬ ವ್ಯಕ್ತಿ ಯುರೇನಿಯಂನ ಕೆಲವು ತುಣುಕುಗಳನ್ನು ಹೊಂದಿರುವ ಮಾಹಿತಿ ದೊರೆತ ಹಿನ್ನೆಲೆಯಲ್ಲಿ, ಎಟಿಎಸ್‌ನ ನಾಗಪಡ ಘಟಕದ ಅಧಿಕಾರಿಗಳು ಆತನನ್ನು ಫೆಬ್ರುವರಿ 14ರಂದು ವಶಕ್ಕೆ ಪಡೆದರು.

'ಯುರೇನಿಯಂ ತುಣುಕುಗಳನ್ನು ಮಾರಾಟ ಮಾಡಲು ಗ್ರಾಹಕನಿಗಾಗಿ ಹುಡುಕುತ್ತಿದ್ದೆ. ಇವುಗಳನ್ನು ಮನ್‌ಖುರ್ದ್ ನಿವಾಸಿ ಅಬು ತಾಹಿರ್ ಅಫ್ಜಲ್ ಹುಸೇನ್ ಚೌಧರಿ (31) ತನಗೆ ನೀಡಿದ್ದ ಎಂಬುದಾಗಿ ಜಿಗರ್ ಪಾಂಡ್ಯ ವಿಚಾರಣೆಗೆ ತಿಳಿಸಿದ' ಎಂದು ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

ನಂತರ, ಕುರ್ಲಾ ಸ್ಕ್ರಾಪ್ ಅಸೋಸಿಯೇಶನ್‌ಗೆ ಸೇರಿದ ಕಟ್ಟಡದಲ್ಲಿ ಎಟಿಎಸ್ ಅಧಿಕಾರಿಗಳು ಚೌಧರಿಯನ್ನು ಬಂಧಿಸಿದರು. ಅದೇ ಸ್ಥಳದಲ್ಲಿ 7.1 ಕೆ.ಜಿ ಕಚ್ಚಾ ಯುರೇನಿಯಂ ವಶಪಡಿಸಿಕೊಳ್ಳಲಾಯಿತು ಎಂದು ಅವರು ತಿಳಿಸಿದ್ದಾರೆ.

ನಾಗಪುರದಲ್ಲಿರುವ ಪರಮಾಣು ಖನಿಜಗಳ ನಿರ್ದೇಶನಾಲಯದ ಪ್ರಾದೇಶಿಕ ನಿರ್ದೇಶಕರು ನೀಡಿದ ದೂರಿನನ್ವಯ, ಬಂಧಿತರ ವಿರುದ್ಧ ಪರಮಾಣು ಇಂಧನ ಕಾಯ್ದೆ–1962 ಅಡಿ ಪ್ರಕರಣ ದಾಖಲಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಧಾಬೋಲ್ಕರ್ ಹತ್ಯೆ ಪ್ರಕರಣ ಆರೋಪಿ ವಿಕ್ರಂಗೆ ಜಾಮೀನು

ಮುಂಬೈ: ವಿಚಾರವಾದಿ ನರೇಂದ್ರ ಧಾಬೋಲ್ಕರ್ ಹತ್ಯೆ ಪ್ರಕರಣದ ಆರೋಪಿ ವಿಕ್ರಂ ಭಾವೆಗೆ ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ನೀಡಿದೆ.

2013ರ ಆಗಸ್ಟ್‌ನಲ್ಲಿ ಗುಂಡು ಹಾರಿಸಿ ಧಾಬೋಲ್ಕರ್‌ರ ಹತ್ಯೆ ಮಾಡಲಾಗಿತ್ತು. ಇತರೆ ಇಬ್ಬರು ಆರೋಪಿಗಳಾದ ಸಚಿನ್ ಅಧೂರೆ, ಶರದ್ ಕಲಸ್ಕರ್‌ರಿಗೆ ನೆರವಾಗಿದ್ದ ಆರೋಪದಡಿ ಭಾವೆಯನ್ನು ಪೊಲೀಸರು ಬಂಧಿಸಿದ್ದರು.

ನ್ಯಾಯಮೂರ್ತಿಗಳಾದ ಎಸ್.ಎಸ್.ಶಿಂಧೆ ಮತ್ತು ಮನೀಶ್ ಪಿತಾಳೆ ಅವರಿದ್ದ ವಿಭಾಗೀಯ ಪೀಠವು ₹ 1 ಲಕ್ಷ ಖಾತರಿಯೊಂದಿಗೆ ಜಾಮೀನು ನೀಡಿದ್ದು, ಪುಣೆಯ ಸಂಬಂಧಿತ ಠಾಣೆಗೆ ಮುಂದಿನ ಒಂದು ತಿಂಗಳು ನಿತ್ಯವೂ ಹಾಗೂ ಎರಡನೇ ತಿಂಗಳು ಪರ್ಯಾಯ ದಿನಗಳಂದು ಹಾಜರಾತಿ ಹಾಕಬೇಕು ಎಂದು ಸೂಚಿಸಿತು.

ಸಿಬಿಐ ಪರವಾಗಿ ಹಾಜರಿದ್ದ ಸಂದೇಶ್ ಪಾಟೀಲ್ ಇದರ ವಿರುದ್ಧವಾಗಿ ಮನವಿ ಮಾಡಿದರೂ, ಕೋರ್ಟ್ ಆ ಮನವಿಯನ್ನು ಪುರಸ್ಕರಿಸಲಿಲ್ಲ.

ವಿಐಟಿ: ಎಂಜಿನಿಯರಿಂಗ್ ಪ್ರವೇಶ ಇದೇ 28ರಿಂದ ಆನ್‌ಲೈನ್ ಪರೀಕ್ಷೆ

ವೆಲ್ಲೂರು: ಕೋವಿಡ್–19 ಪಿಡುಗು ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ, ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು (ವಿಐಟಿ) ಇದೇ 28ರಿಂದ 31ರ ವರೆಗೆ ಆನ್‌ಲೈನ್ ಮೂಲಕ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯನ್ನು (ವಿಐಟಿಇಇಇ) ನಡೆಸುವುದಾಗಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಇದೇ 20 ಕೊನೆಯ ದಿನವಾಗಿದೆ. ಸಂಸ್ಥೆಯ ವೆಬ್‌ಸೈಟ್ www.vit.ac.in ನಲ್ಲಿ ವಿವರಗಳು ಲಭ್ಯ ಎಂದು ವಿಐಟಿ ತಿಳಿಸಿದೆ.



ಊರು ಸೇರುವ ತವಕ...

ಕೋವಿಡ್ ನಿಯಂತ್ರಣಕ್ಕಾಗಿ ಪಶ್ಚಿಮ ಬಂಗಾಳದಲ್ಲಿ ಭಾಗಶಃ ಲಾಕ್‌ಡೌನ್ ಘೋಷಿಸಿರುವ ಕಾರಣ ಬಸ್ ಮೇಲೂ ಕುಳಿತು ವಲಸೆ ಕಾರ್ಮಿಕರು ಗುರುವಾರ ತಮ್ಮ ಊರುಗಳಿಗೆ ಹೊರಟರು – ರಾಯಿಟರ್ಸ್ ಚಿತ್ರ

ಛತ್ತೀಸಗಡ ಆಲ್ಕೋಹಾಲ್ ಆಧಾರಿತ ಹೋಮಿಯೋಪಥಿ ಔಷಧಿ ಸೇವನೆ: 7 ಸಾವು

ಬಿಲಾಸ್‌ಪುರ್ (ಪಿಟಿಐ): ಛತ್ತೀಸಗಡದ ಬಿಲಾಸ್‌ಪುರ್ ಜಿಲ್ಲೆಯಲ್ಲಿ ಮದ್ಯದ ಬದಲು ಆಲ್ಕೋಹಾಲ್ ಆಧಾರಿತ ಹೋಮಿಯೋಪಥಿ ಔಷಧಿಯನ್ನು ಸೇವಿಸಿದ 7 ಮಂದಿ ಮೃತಪಟ್ಟಿದ್ದು, ಐವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಕಳೆದ ಎರಡು ದಿನಗಳ ಅವಧಿಯಲ್ಲಿ ಇದು ಸಂಭವಿಸಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

'ಸಿರ್ಗಿಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊರ್ಮಿ ಗ್ರಾಮದಲ್ಲಿ ಇದು ಸಂಭವಿಸಿದೆ. ಮೃತಪಟ್ಟಿರುವ 7 ಜನರಲ್ಲಿ ನಾಲ್ವರು ಮಂಗಳವಾರ ರಾತ್ರಿ ಗ್ರಾಮದ ತಮ್ಮ ಮನೆಗಳಲ್ಲಿ ಸಾವನ್ನಪ್ಪಿದ್ದರೆ, ಮೂವರು ಆಸ್ಪತ್ರೆಗಳಲ್ಲಿ ಮೃತರಾಗಿದ್ದಾರೆ' ಎಂದು ಎಸ್‌ಪಿ ಪ್ರಶಾಂತ್ ಅಗ್ರವಾಲ್ ತಿಳಿಸಿದ್ದಾರೆ.

'ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ ಎಂದು ಶಂಕಿಸಿ, ಅಧಿಕಾರಿಗಳಿಗೆ ವಿಷಯ ತಿಳಿಸದೆ ಮೃತರ ಅಂತ್ಯಕ್ರಿಯೆಯನ್ನು ಕುಟುಂಬದವರು ನೆರವೇರಿಸಿದ್ದಾರೆ' ಎಂದು ಹೇಳಿದರು.

'ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರ ತಂಡ ಗ್ರಾಮಕ್ಕೆ ತೆರಳಿ ಪರಿಶೀಲನೆ ನಡೆಸಿತು. ಅನಾರೋಗ್ಯಕ್ಕೆ ಒಳಗಾದವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆಲ್ಕೋಹಾಲ್ ಆಧಾರಿತ ಹೋಮಿಯೋಪಥಿ ಔಷಧಿಯನ್ನು ಸೇವಿಸಿದ್ದರಿಂದ ಸಾವುಗಳು ಸಂಭವಿಸಿವೆ ಎಂಬುದು ಗೊತ್ತಾಗಿದೆ. ಮರಣೋತ್ತರ ಪರೀಕ್ಷೆ ನಂತರವೇ ನಿಖರ ಕಾರಣ ಗೊತ್ತಾಗಲಿದೆ' ಎಂದರು.

'ಕೊರೊನಾ ಉಲ್ಬಣಕ್ಕೆ ಚುನಾವಣೆ, ಧಾರ್ಮಿಕ ಸಮಾರಂಭ ಕಾರಣ'




ವಾಷಿಂಗ್ಟನ್ (ಪಿಟಿಐ): ಕೋವಿಡ್-19' ಎರಡನೇ ಅಲೆ ಭಾರತಕ್ಕೆ ಸುನಾಮಿಯಂತೆ ಅಪ್ಪಳಿಸಿದ್ದು, ಸೋಂಕು ಹೆಚ್ಚಳಕ್ಕೆ ದೇಶದಾದ್ಯಂತ ನಡೆದ ಚುನಾವಣಾ ಸಂಬಂಧಿ ರ್‍ಯಾಲಿ, ಸಭೆ, ಸಮಾವೇಶಗಳು ಹಾಗೂ ಧಾರ್ಮಿಕರ ಕಾರ್ಯಕ್ರಮಗಳು ಕಾರಣ' ಎಂದು ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಹೇಳಿದ್ದಾರೆ.

ಒನ್ ಶೇರ್ ವರ್ಲ್ಡ್ ಆಯೋಜಿಸಿದ್ದ ಗ್ಲೋಬಲ್ ವಾಕ್ಸಿನ್ ಈಕ್ವಿಟಿ ಕುರಿತು ವರ್ಚುವಲ್ ಚರ್ಚೆಯಲ್ಲಿ ಮಾತನಾಡಿದ ಅವರು, 'ಕೊರೊನಾ ಸೋಂಕು ನಮ್ಮ ದೇಶದ ಯಾವ ಭಾಗವನ್ನೂ ಬಿಟ್ಟಿಲ್ಲ. ಈ ಎರಡನೇ ಅಲೆಯ ಸೋಂಕು ನಗರದ ಜತೆಗೆ ಗ್ರಾಮೀಣ ಪ್ರದೇಶಗಳಿಗೂ ಹರಡಿದೆ' ಎಂದು ಅವರು ಹೇಳಿದ್ದಾರೆ.

'ಭಾರತದಲ್ಲಿ ಏರಿಕೆಯಾಗುತ್ತಿರುವ ರೋಗಿಗಳ ನಿರ್ವಹಣೆಗೆ ಬೇಕಾದ ಮಾನವ ಸಂಪನ್ಮೂಲವಿಲ್ಲ. ದೇಶದಲ್ಲಿ ಹೆಚ್ಚಿರುವ ಜನಸಂಖ್ಯೆ ಇಷ್ಟೆಲ್ಲ ಸವಾಲುಗಳನ್ನು ತಂದೊಡ್ಡುತ್ತಿದೆ. ಇಂಥ ಸಂದರ್ಭದಲ್ಲಿ ಜಾಗತಿಕ ಸಮುದಾಯಗಳು ಭಾರತದ ಕೋವಿಡ್ ವಿರುದ್ಧದ ಹೋರಾಟಕ್ಕೆ ಕೈಜೋಡಿಸುತ್ತಿರುವುದು ಸ್ವಾಗತಾರ್ಹ' ಎಂದು ಅವರು ಹೇಳಿದ್ದಾರೆ.

ನಿಧನ ವಾರ್ತೆ

ಆರ್‌ಎಲ್‌ಡಿ ಮುಖಂಡ ಅಜಿತ್ ಸಿಂಗ್



ನವದೆಹಲಿ (ಪಿಟಿಐ): ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖಂಡ, ಪ್ರಮುಖ ರೈತ ನಾಯಕರಾಗಿದ್ದ ಅಜಿತ್ ಸಿಂಗ್ (82) ಗುರುಗಾಂವ್ ಆಸ್ಪತ್ರೆಯಲ್ಲಿ ಗುರುವಾರ ಕೋವಿಡ್‌ನಿಂದ ನಿಧನರಾದರು.

ಅವರು ಮಾಜಿ ಪ್ರಧಾನಿ ಚೌಧುರಿ ಚರಣ್ ಸಿಂಗ್ ಅವರ ಪುತ್ರ. 'ಅಜಿತ್ ಸಿಂಗ್ ಅವರಿಗೆ ಏ.20ರಂದು ಕೋವಿಡ್ ದೃಢಪಟ್ಟಿದ್ದು, ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಬೆಳಿಗ್ಗೆ ನಿಧನರಾದರು' ಎಂದು ಅವರ ಪುತ್ರ ಜಯಂತ್ ಚೌಧುರಿ ಟ್ವೀಟ್ ಮಾಡಿದ್ದಾರೆ.

ಜಾಟ್ ಸಮುದಾಯದ ನೇತಾರರಾಗಿದ್ದರು. 1939ರ ಫೆಬ್ರುವರಿ 12ರಂದು ಜನಿಸಿದ್ದು, ಲಖನೌ ವಿಶ್ವವಿದ್ಯಾಲಯ, ಐಐಟಿ–ಖರಗ್‌ಪುರ್, ಅಮೆರಿಕದ ಚಿಕಾಗೊದಲ್ಲಿನ ಇಲಿನಾಯ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಶಿಕ್ಷಣ ಪಡೆದಿದ್ದರು. ವೃತ್ತಿಯಿಂದ ಕಂಪ್ಯೂಟರ್ ವಿಜ್ಞಾನಿಯಾಗಿದ್ದು, ಅಮೆರಿಕದಲ್ಲಿ 15 ವರ್ಷ ಕೆಲಸ ಮಾಡಿದ್ದರು.

1980ರಲ್ಲಿ ಸಕ್ರಿಯ ರಾಜಕಾರಣಕ್ಕೆ ಪ್ರವೇಶಿಸಿದ ಅವರು, 1986ರಲ್ಲಿ ರಾಜ್ಯಸಭೆ ಸದಸ್ಯರಾಗಿ ಸಂಸತ್ತಿಗೆ ಪ್ರವೇಶಿಸಿದರು. ಆರು ಅವಧಿಗೆ ಅವರು ಸಂಸದರಾಗಿದ್ದರು. ಹಲವು ಸರ್ಕಾರಗಳಲ್ಲಿ ಅವರು ಸಚಿವರಾಗಿದ್ದರು. ರಾಷ್ಟ್ರೀಯ ರಂಗ ಸರ್ಕಾರವಿದ್ದಾಗ 1989ರಲ್ಲಿ ಮೊದಲ ಬಾರಿಗೆ ಕೈಗಾರಿಕಾ ಸಚಿವರಾದರೆ, ಕೊನೆಯದಾಗಿ 2011ರಲ್ಲಿ ಯುಪಿಎ ಆಡಳಿತದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿದ್ದರು.

ಕೊನೆಯ ದಿನದವರೆಗೂ ಅವರು ಜಾಟ್ ಸಮುದಾಯದ ಪ್ರಭಾವಿ ನಾಯಕರಾಗಿಯೇ ಉಳಿದುಕೊಂಡಿದ್ದರು. ಆದರೆ, ಅವರ ಪಕ್ಷವು 2017ರಲ್ಲಿ ಉತ್ತರಪ್ರದೇಶ ವಿಧಾನಸಭೆ ಚುನಾವಣೆ ಮತ್ತು 2019ರ ಸಾರ್ವತ್ರಿಕ ಚುನಾವಣೆಯಲ್ಲಿ ತೀವ್ರ ಹಿನ್ನಡೆ ಅನುಭವಿಸಿತ್ತು.

ಚಿತ್ರ ನಿರ್ದೇಶಕ ರೇಣುಕಾ ಶರ್ಮಾ



ಬೆಂಗಳೂರು: ಕವಿರತ್ನ ಕಾಳಿದಾಸ, ಅಂಜದ ಗಂಡು, ಕಿಂದರಿ ಜೋಗಿ ಮೊದಲಾದ ಹಿಟ್ ಸಿನಿಮಾಗಳನ್ನು ನೀಡಿದ್ದ ನಿರ್ದೇಶಕ ರೇಣುಕಾ ಶರ್ಮಾ (81) ಕೋವಿಡ್‌ನಿಂದ ನಿಧನ ಹೊಂದಿದ್ದಾರೆ.

ಸೋಂಕಿಗೆ ತುತ್ತಾಗಿದ್ದ ಅವರನ್ನು ಗಿರಿನಗರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ನಿಧನರಾಗಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

1981ರಲ್ಲಿ ಅನುಪಮ ಚಿತ್ರದ ಮೂಲಕ ಅವರು ನಿರ್ದೇಶನ ಕ್ಷೇತ್ರಕ್ಕೆ ಬಂದಿದ್ದರು. 'ಶಹಬ್ಬಾಸ್ ವಿಕ್ರಮ್', 'ಸತ್ಕಾರ' ಹಾಗೂ 'ನಮ್ಮ ಊರ ದೇವತೆ', 'ಶಬರಿಮಲೆ ಶ್ರೀ ಅಯ್ಯಪ್ಪ', 'ಭರ್ಜರಿ ಗಂಡು' ಹಾಗೂ 'ಹಠಮಾರಿ ಹೆಣ್ಣು ಕಿಲಾಡಿ ಗಂಡು', 'ಕೊಲ್ಲೂರು ಶ್ರೀ ಮೂಕಾಂಬಿಕೆ' ಅವರ ನಿರ್ದೇಶನದ ಸೂಪರ್ ಹಿಟ್ ಚಿತ್ರಗಳು.

ಶರ್ಮಾ ಅವರಿಗೆ ಪತ್ನಿ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಸಂಜೆ ಅಂತ್ಯ ಸಂಸ್ಕಾರ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ತಮಿಳು ಹಾಸ್ಯ ನಟ ಪಾಂಡು



ಚೆನ್ನೈ: ತಮಿಳು ಚಿತ್ರರಂಗದ ಹಾಸ್ಯ ನಟ ಪಾಂಡು (74) ಅವರು ಗುರುವಾರ ಕೋವಿಡ್‌ನಿಂದಾಗಿ ನಿಧನರಾದರು.

ಪಾಂಡು ಹಾಗೂ ಅವರ ಪತ್ನಿ ಕುಮುದಾ ಅವರಿಗೆ ಇತ್ತೀಚೆಗೆ ಕೋವಿಡ್ ದೃಢಪಟ್ಟಿತ್ತು. ಚಿಕಿತ್ಸೆಗಾಗಿ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಪಾಂಡು ಅವರು ಮೃತಪಟ್ಟರು.

ಮರಾಠಿ ನಟಿ ಅಭಿಲಾಷಾ



ಮುಂಬೈ: ಮರಾಠಿ ಚಿತ್ರಗಳ ಪೋಷಕ ನಟಿ ಅಭಿಲಾಷಾ ಪಾಟೀಲ್ (40) ಅವರು ಗುರುವಾರ ನಿಧನರಾದರು. ಮರಾಠಿ ಜನಪ್ರಿಯ ಚಲನಚಿತ್ರಗಳಾದ 'ತುಜಾ ಮಂಜಾ ಅರೇಂಜ್ ಮ್ಯಾರೇಜ್', 'ಬೇಕೊ ದೇತಾ ಕಾ ಬೈಕೊ', 'ಪಿಪ್ಸಿ' ಮುಂತಾದವುಗಳಲ್ಲಿ ನಟಿಸಿದ್ದಾರೆ.

ಅಮೆರಿಕದ ಔಷಧೀಯ ವ್ಯಾಪಾರ ಸಂಸ್ಥೆ ವಿರೋಧ–ಚರ್ಚೆಗೆ ಸಿದ್ಧ ಎಂದ ಐರೋಪ್ಯ ಒಕ್ಕೂಟ

ಲಸಿಕೆಯ ಪೇಟೆಂಟ್ ರದ್ದು– ಅಮೆರಿಕ ಸಮ್ಮತಿ



ವಾಷಿಂಗ್ಟನ್ (ಪಿಟಿಐ): ಕೋವಿಡ್ ವಿರುದ್ಧದ ಲಸಿಕೆಗಳಿಗೆ ಬೌದ್ಧಿಕ ಆಸ್ತಿ ಹಕ್ಕುಗಳ ಕಾಯ್ದೆಯಿಂದ ವಿನಾಯಿತಿ ನೀಡುವಂತೆ ಭಾರತ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ವಿಶ್ವ ವಾಣಿಜ್ಯ ಸಂಸ್ಥೆಗೆ ಸಲ್ಲಿಸಿರುವ ಪ್ರಸ್ತಾವನೆಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಬೆಂಬಲ ಸೂಚಿಸಿದ್ದಾರೆ. ಆದರೆ, ಅಮೆರಿಕದ ಔಷಧೀಯ ವ್ಯಾಪಾರ ಸಂಸ್ಥೆಗಳ ಒಕ್ಕೂಟ ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದೆ.

'ಇದೊಂದು ಜಾಗತಿಕ ಆರೋಗ್ಯ ಬಿಕ್ಕಟ್ಟು. ಕೋವಿಡ್ ಎಂಬ ಅಸಾಮಾನ್ಯ ಸನ್ನಿವೇಶಗಳನ್ನು ಅಸಾಮಾನ್ಯ ವಿಧಾನದಿಂದಲೇ ನಿಭಾಯಿಸಬೇಕಾಗಿದೆ. ಅಮೆರಿಕವು ಬೌದ್ಧಿಕ ಆಸ್ತಿ ಹಕ್ಕನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರೂ, ಕೋವಿಡ್ ಲಸಿಕೆಯ ಮೇಲಿನ ಬೌದ್ಧಿಕ ಆಸ್ತಿ ಹಕ್ಕನ್ನು ನಿವಾರಿಸುವ ಮೂಲಕ ಈ ಸಾಂಕ್ರಾಮಿಕವನ್ನು ನಿಯಂತ್ರಿಸುವುದಕ್ಕೆ ಬಯಸುತ್ತದೆ' ಎಂದು ಅಮೆರಿಕ ವ್ಯಾಪಾರ ಪ್ರತಿನಿಧಿ ಕ್ಯಾಥರಿನ್ ತಾಯ್ ಹೇಳಿದ್ದಾರೆ.

ಅಮೆರಿಕದ ಈ ನಿರ್ಧಾರವನ್ನು ಭಾರತ ಸ್ವಾಗತಿಸಿದ್ದು, 'ಅಮೆರಿಕದ ಈ ನಿರ್ಧಾರದಿಂದ ಜನರಿಗೆ ತ್ವರಿತವಾಗಿ ಲಸಿಕೆ ದೊರಕುವಂತಾಗಲಿದೆ, ಅಮೆರಿಕದ ಕ್ರಮಕ್ಕೆ ನಾವು ಪ್ರಶಂಸಿಸುತ್ತೇವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಗಚಿ ಪ್ರತಿಕ್ರಿಯಿಸಿದ್ದಾರೆ.

ಈ ವಿಷಯದಲ್ಲಿ ಚರ್ಚಿಸಲು ತಾನು ಸಿದ್ಧ ಎಂದು ಐರೋಪ್ಯ ಆಯೋಗ ಹೇಳಿದ್ದು, ಲಸಿಕೆ ಪೂರೈಕೆಯನ್ನು ಕಡಿಮೆ ಮಾಡಿರುವ ಅಮೆರಿಕ ಮತ್ತು ಬ್ರಿಟನ್‌ನ ನಿರ್ಧಾರವನ್ನು ಟೀಕಿಸಿದೆ.

ಟೀಕೆ: 'ಈ ನಿರ್ಧಾರವು ಸಾರ್ವಜನಿಕ ಮತ್ತು ಖಾಸಗಿ ಪಾಲುದಾರರ ನಡುವೆ ಗೊಂದಲವನ್ನು ಸೃಷ್ಟಿಸಲಿದೆ. ಈಗಾಗಲೇ ಒತ್ತಡಕ್ಕೊಳಗಾಗಿರುವ ಪೂರೈಕೆ ಸರಪಳಿಗಳನ್ನು ಮತ್ತಷ್ಟು ದುರ್ಬಲಗೊಳಿಸಲಿದೆ. ಜತೆಗೆ ಇದರಿಂದಾಗಿ ನಕಲಿ ಲಸಿಕೆಗಳ ವಿತರಣೆಯೂ ಹೆಚ್ಚಬಹುದು' ಎಂದು ಅಮೆರಿಕ ಪ್ರಮುಖ ಬಯೋಫಾರ್ಮಾಸ್ಯುಟಿಕಲ್ ಸಂಶೋಧನಾ ಕಂಪನಿಗಳನ್ನು ಪ್ರತಿನಿಧಿಸುವ ಪಿಎಚ್‌ಆರ್‌ಎಂಎ ಹೇಳಿದೆ.

'ಬಯೋಮೆಡಿಕಲ್ ಅನ್ವೇಷಣೆಯಲ್ಲಿ ನಮ್ಮ ನಾಯಕತ್ವವನ್ನು ಹಾಳುಮಾಡಲು ಪ್ರಯತ್ನಿಸುತ್ತಿರುವ ದೇಶಗಳಿಗೆ ಅಮೆರಿಕದ ಆವಿಷ್ಕಾರವನ್ನು ನೀಡುವ ನಿರ್ಧಾರವು ಅಮೆರಿಕದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಮತ್ತು ಉದ್ಯೋಗ ಸೃಷ್ಟಿಸುವ ನೀತಿಗೆ ಮುಳುವಾಗಲಿದೆ' ಎಂದು ಪಿಎಚ್‌ಆರ್‌ಎಂಎನ ಅಧ್ಯಕ್ಷ ಮತ್ತು ಸಿಇಒ ಸ್ಟೀಫನ್ ಜೆ.ಯುಬಿಲ್ ದೂರಿದ್ದಾರೆ.

'ಈ ನಿರ್ಧಾರದಿಂದಾಗಿ ಲಸಿಕೆ ಪೂರೈಕೆಯಂತಹ ನಿಜವಾದ ಸಮಸ್ಯೆಗಳು ನಿವಾರಣೆ ಆಗುವುದಿಲ್ಲ. ಬಯೋಫಾರ್ಮಾಸ್ಯುಟಿಕಲ್ ಉತ್ಪಾದಕರು ಜಾಗತಿಕವಾಗಿ ಲಸಿಕೆ ಪೂರೈಸಲು ಬದ್ಧರಾಗಿದ್ದಾರೆ. ನಾವು ಹೆಚ್ಚಿನ ಲಸಿಕೆಯನ್ನು ಉತ್ಪಾದಿಸಲು ಬೇರೆ ಕಂಪನಿಗಳೊಂದಿಗೆ ಕೈ ಜೋಡಿಸುತ್ತಿದ್ದೇವೆ' ಎಂದು ಹೇಳಿದರು.

ಭಾರತಕ್ಕೆ ನೆರವು: ಕೆನಡಾದೊಂದಿಗೆ ಅಮೆರಿಕದ ವೈದ್ಯರ ಮಾತುಕತೆ

ವಾಷಿಂಗ್ಟನ್ (ಪಿಟಿಐ): ಕಳೆದ ವರ್ಷ ಖರೀದಿಸಿ, ಬಳಕೆಯಾಗದೇ ಉಳಿದಿರುವ 5 ಸಾವಿರ ವೆಂಟಿಲೇಟರ್‌ಗಳನ್ನು ಭಾರತಕ್ಕೆ ಉಚಿತವಾಗಿ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಇಲ್ಲಿನ ಪ್ರಭಾವಿ ಇಂಡಿಯನ್–ಅಮೆರಿಕನ್ ವೈದ್ಯರ ಗುಂಪೊಂದು ಕೆನಡಾ ಸರ್ಕಾರದೊಂದಿಗೆ ಮಾತುಕತೆ ಆರಂಭಿಸಿದೆ.

ಈ ಕುರಿತು ಸುದ್ದಿ ಸಂಸ್ಥೆ ಜತೆ ಮಾತನಾಡಿದ ಭಾರತೀಯ ಮೂಲದ ಅಮೆರಿಕ ಶಸ್ತ್ರಚಿಕಿತ್ಸಕ ಒಕ್ಕೂಟದ(ಎಪಿಐ) ಅಧ್ಯಕ್ಷ ಡಾ. ಸುಧಾಕರ್ ಜೊನ್ನಲಗಡ್ಡ, 'ಕೆನಡಾ ಸರ್ಕಾರದ ಬಳಿ 5 ಸಾವಿರ ವೆಂಟಿಲೇಟರ್‌ಗಳಿವೆ. ಇವು ಕೆನಡಾ ರೆಡ್‌ಕ್ರಾಸ್ ಸಂಸ್ಥೆಗೆ ಒಳಪಟ್ಟಿವೆ. ಪ್ರಸ್ತುತ ಭಾರತದಲ್ಲಿರುವ ಕೋವಿಡ್ ಬಿಕ್ಕಟ್ಟನ್ನು ಬಗೆಹರಿಸಲು, ಭಾರತದ ರೆಡ್ ಕ್ರಾಸ್ ಸಂಸ್ಥೆಯ ಮೂಲಕವೇ ವೆಂಟಿಲೇಟರ್‌ಗಳನ್ನು ಉಚಿತವಾಗಿ ನೀಡುವಂತೆ ಕೆನಡಾ ಸರ್ಕಾರವನ್ನು ಕೇಳುತ್ತಿದ್ದೇವೆ' ಎಂದು ಹೇಳಿದ್ದಾರೆ.

'ಭಾರತ ಎದುರಿಸುತ್ತಿರುವ ಪ್ರಮುಖ ಆರೋಗ್ಯ ಬಿಕ್ಕಟ್ಟನ್ನು ಪರಿಹರಿಸಲು ಈ ವೆಂಟಿಲೇಟರ್‌ಗಳನ್ನು ಉಚಿತವಾಗಿ ನೀಡುವಂತೆ ನಾವು ಮಾಡಿರುವ ಮನವಿಯನ್ನು ಕೆನಡಾ ಸರ್ಕಾರ ಒಪ್ಪುವ ವಿಶ್ವಾಸವಿದೆ' ಎಂದಿದ್ದಾರೆ.

ಎಎಪಿಐ ಸಂಘದ ಅಧ್ಯಕ್ಷೆ ಡಾ. ಅನುಪಮ ಗೋಟಿಯಮುಕುಲಾ, 'ಈ ವಿಷಯಕ್ಕೆ ಸಂಬಂಧಿಸಿದಂತೆ ಕೆನಡಾ ಸರ್ಕಾರದೊಂದಿಗೆ ಬುಧವಾರ ಮಾತನಾಡಿದ್ದೇವೆ. ಎಎಪಿಐ ಸಹಯೋಗದೊಂದಿಗೆ ವೆಂಟಿಲೇಟರ್‌ಗಳನ್ನು ಭಾರತಕ್ಕೆ ಕಳುಹಿಸಲು ಸಿದ್ಧರಿದ್ದಾರೆ' ಎಂದು ಹೇಳಿದರು.

ಸಹಾಯ ಘೋಷಿಸಿದ ಆಸ್ಟ್ರೇಲಿಯಾ

ಮೆಲ್ಬರ್ನ್ (ಪಿಟಿಐ): ಕೋವಿಡ್– 19 ವಿರುದ್ಧದ ಹೋರಾಟಕ್ಕಾಗಿ ಭಾರತಕ್ಕೆ 1000 ವೆಂಟಿಲೇಟರ್ ಸಹಿತ 41 ದಶಲಕ್ಷ ಡಾಲರ್‌ಮೊತ್ತದ ನೆರವು ನೀಡುವುದಾಗಿ ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯ ಘೋಷಿಸಿದೆ.

'ನಮ್ಮ ಬೆಂಬಲವನ್ನು ಭಾರತಕ್ಕೆ ತಲುಪಿಸಲು ನಾವು ವಿದೇಶಾಂಗ ವ್ಯವಹಾರ ಮತ್ತು ವ್ಯಾಪಾರ ಇಲಾಖೆಯೊಂದಿಗೆ ಸಂಪರ್ಕದಲ್ಲಿದ್ದೇವೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಿಯಮಾವಳಿ ಪಾಲಿಸಲು ಸೂಚನೆ; ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾಕ್ಕೆ ವಿಶೇಷ ವಿಮಾನಗಳು

ತವರು ತಲುಪಿದ ಆರ್‌ಸಿಬಿ ಆಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಲ್ಲಿ ಆಡುತ್ತಿದ್ದ ಭಾರತದ ಆಟಗಾರರು ಮತ್ತು ನೆರವು ಸಿಬ್ಬಂದಿ ತಮ್ಮ ಊರುಗಳನ್ನು ತಲುಪಿದ್ದು ವಿದೇಶಿ ಆಟಗಾರರನ್ನು ವಿಶೇಷ ವಿಮಾನಗಳಲ್ಲಿ ಕಳುಹಿಸಲಾಗಿದೆ.

ಬಯೊಬಬಲ್‌ನಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲು ಇದೇ ತಿಂಗಳ ನಾಲ್ಕರಂದು ನಿರ್ಧರಿಸಲಾಗಿತ್ತು. 'ತಂಡದ ನಾಯಕ ವಿರಾಟ್ ಕೊಹ್ಲಿ ಅದೇ ದಿನ ಮುಂಬೈ ತಲುಪಿದ್ದಾರೆ. ಉಳಿದವರೆಲ್ಲರೂ ಗುರುವಾರ ಅವರವರ ತವರಿಗೆ ಮರಳಿದ್ದಾರೆ' ಎಂದು ಫ್ರಾಂಚೈಸ್ ತಿಳಿಸಿದೆ.



ಐಪಿಎಲ್ ಪಂದ್ಯವೊಂದರ ಸಂದರ್ಭದಲ್ಲಿ ಆರ್‌ಸಿಬಿ ಆಟಗಾರರು –ಪಿಟಿಐ ಚಿತ್ರ

'ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಇತರ ದೇಶಗಳ ಕ್ರಿಕೆಟ್ ಮಂಡಳಿಗಳ ಜೊತೆ ಚರ್ಚಿಸಿ ಆಟಗಾರರ ವಾಪಸಾತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರೀಯ ಬಯೊಬಬಲ್‌ನಿಂದ ತವರು ಪಟ್ಟಣಗಳಿಗೆ ತೆರಳುವವರಿಗೆ ಕಠಿಣ ನಿಯಮಾವಳಿಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ. ಮುಂದೆಯೂ ಕೆಲವು ದಿನ ಅವರನ್ನು ಸಂಪರ್ಕಿಸಲಾಗುವುದು. ಏನೇ ಅಗತ್ಯವಿದ್ದರೂ ನೆರವು ನೀಡಲಾಗುವುದು' ಎಂದು ತಿಳಿಸಲಾಗಿದೆ. ತಂಡದೊಂದಿಗೆ ಇದ್ದ ಆಸ್ಟ್ರೇಲಿಯಾದ ಆಟಗಾರರು ಮತ್ತು ಸಿಬ್ಬಂದಿಯನ್ನು ಮಾಲ್ಡೀವ್ಸ್‌ಗೆ ತಲುಪಿಸಲಾಗಿದ್ದು ಅಲ್ಲಿ ವ್ಯವಸ್ಥೆ ಮಾಡಿರುವ ಹೋಟೆಲ್‌ನಲ್ಲಿ ಕಡ್ಡಾಯ ಕ್ವಾರಂಟೈನ್‌ನಲ್ಲಿ ಇರುವರು. ಆಸ್ಟ್ರೇಲಿಯಾದಲ್ಲಿ ಪ್ರವಾಸ ನಿರ್ಬಂಧಗಳು ತೆರವುಗೊಂಡ ನಂತರ ಅಲ್ಲಿಂದ ತೆರಳುವರು.

ನ್ಯೂಜಿಲೆಂಡ್ ಆಟಗಾರರನ್ನು ಆಕ್ಲೆಂಡ್‌ಗೆ ವಿಶೇಷ ವಿಮಾನದಲ್ಲಿ ಕಳುಹಿಸಲಾಗಿದೆ. ನ್ಯೂಜಿಲೆಂಡ್‌ನ ಟೆಸ್ಟ್ ತಂಡದಲ್ಲಿರುವ ಆಟಗಾರರು ನವೆಂಬರ್ 11ರಂದು ನೇರವಾಗಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸುವರು. ದಕ್ಷಿಣ ಆಫ್ರಿಕಾದ ಆಟಗಾರರು ಮುಂಬೈ ಮತ್ತು ದೋಹಾ ಮೂಲಕ ಜೊಹಾನ್ಸ್‌ಬರ್ಗ್‌ಗೆ ತೆರಳುವರು.

ಚೆನ್ನೈಗೆ ಬಾಲಾಜಿ, ಮೈಕ್ ಹಸ್ಸಿ

ಚೆನ್ನೈ (ಪಿಟಿಐ): ಕೋವಿಡ್ ಸೋಂಕಿಗೊಳಗಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಮೈಕ್ ಹಸ್ಸಿ ಮತ್ತು ಬೌಲಿಂಗ್ ಕೋಚ್ ಲಕ್ಷ್ಮಿಪತಿ ಬಾಲಾಜಿ ಅವರನ್ನು ಏರ್ ಅಂಬುಲೆನ್ಸ್ ಮೂಲಕ ದೆಹಲಿಯಿಂದ ಚೆನ್ನೈಗೆ ಕಳುಹಿಸಲಾಯಿತು.

'ತಂಡದ ತವರೂರಾಗಿರುವ ಚೆನ್ನೈನಲ್ಲಿ ಉತ್ತಮ ವೈದ್ಯಕೀಯ ಸೌಲಭ್ಯಗಳು ಇವೆ. ಆದ್ದರಿಂದ ಇಬ್ಬರಿಗೂ ಇಲ್ಲಿಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಲು ನಿರ್ಧರಿಸಲಾಯಿತು. ಆದ್ದರಿಂದ ಗುರುವಾರ ಸುಸಜ್ಜಿತವಾದ ಏರ್ ಅಂಬುಲೆನ್ಸ್‌ನಲ್ಲಿ ಅವರನ್ನು ಕರೆದುಕೊಂಡು ಬರಲಾಯಿತು' ಎಂದು ಚೆನ್ನೈ ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಇಬ್ಬರಿಗೂ ಲಕ್ಷಣರಹಿತ ಸೋಂಕು ಇದೆ. ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದ ಶೀಘ್ರ ಗುಣಮುಖರಾಗುವ ನಿರೀಕ್ಷೆಇದೆ' ಎಂದೂ ಹೇಳಿದರು.

ಕೊನೆಯಲ್ಲಿ ಧೋನಿ ಪಯಣ: ಚೆನ್ನೈ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಮಧ್ಯಾಹ್ನ ತಂಡದ ಎಲ್ಲರೂ ಪ್ರಯಾಣ ಬೆಳೆಸಿದ ನಂತರ ಕೊನೆಯವರಾಗಿ ರಾಂಚಿಗೆ ತೆರಳಿದರು.

ಕೋವಿಡ್: ಕ್ರಿಕೆಟಿಗ ವಿವೇಕ್ ಸಾವು

ಜೈಪುರ (ಪಿಟಿಐ): ಮಾಜಿ ಕ್ರಿಕೆಟಿಗ, ರಾಜಸ್ಥಾನ ತಂಡದ ಲೆಗ್ ಸ್ಪಿನ್ನರ್ ವಿವೇಕ್ ಯಾದವ್ (36) ಅವರು ಕೋವಿಡ್–19 ಸೋಂಕಿನಿಂದ ನಿಧನರಾಗಿದ್ದಾರೆ. ರಣಜಿ ಟ್ರೋಫಿ ಗೆದ್ದ ತಂಡದಲ್ಲಿ ಅವರು ಸದಸ್ಯರಾಗಿದ್ದರು. ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ.

18 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ವಿವೇಕ್ ಯಾದವ್ 57 ವಿಕೆಟ್ ಉರುಳಿಸಿದ್ದರು. 2010–11ರ ರಣಜಿ ಋತುವಿನಲ್ಲಿ ಅವರು ಶ್ರೇಷ್ಠ ಬೌಲಿಂಗ್ ಮಾಡಿದ್ದರು.

ಹಾಕಿ ಪಟು ಕೌಶಿಕ್ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಮಾಜಿ ಆಟಗಾರ ಹಾಗೂ ಕೋಚ್ ಎಂ.ಕೆ.ಕೌಶಿಕ್ ಅವರಲ್ಲಿ ಕೋವಿಡ್ ದೃಢಪಟ್ಟದ್ದು, ಇಲ್ಲಿಯ ಆಸ್ಪತ್ರೆಗೆ ದಾಖಲಾಗಿದ್ದಾರೆ.

1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಕೌಶಿಕ್ ಇದ್ದರು. ರಾಷ್ಟ್ರೀಯ ಪುರುಷ ಹಾಗೂ ಮಹಿಳಾ ತಂಡಗಳಿಗೆ ಅವರು ತರಬೇತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಸಿ.ಕೆ.ವಿನೀತ್ ನೆರವಿನ ಹಸ್ತ

ನವದೆಹಲಿ (ಪಿಟಿಐ): ಫುಟ್‌ಬಾಲ್ ಅಂಗಣದಲ್ಲಿ ಚುರುಕಿನ ಪಾದಚಲನೆಯ ಮೂಲಕ ಎದುರಾಳಿ ತಂಡದ ಆಟಗಾರರನ್ನು ಕಂಗೆಡಿಸುವ ಭಾರತ ತಂಡದ ಆಟಗಾರ ಸಿ.ಕೆ. ವಿನೀತ್ ಮಾನವೀಯತೆ ಮೆರೆದು ಈಗಾಗಲೇ ಗಮನ ಸೆಳೆದಿದ್ದಾರೆ. ಈಗ ಕೋವಿಡ್ ಪೀಡಿತರಿಗೆ ನೆರವಾಗಲು ಮುಂದಾಗಿದ್ದಾರೆ.

ವಿನೀತ್ ಅವರು ತಮ್ಮ ಸಾಮಾಜಿಕ ತಾಣಗಳ ಖಾತೆಗಳನ್ನು ಬಳಸಿಕೊಂಡು ಸಮಾನಮನಸ್ಕರನ್ನು ಒಗ್ಗೂಡಿಸಿ ತೊಂದರೆಗೆ ಸಿಲುಕಿದವರಿಗೆ ನೆರವಾಗುತ್ತಿದ್ದಾರೆ.

'ನಾವೆಲ್ಲ ಮನುಷ್ಯರು. ಇತರರು ಸಂಕಷ್ಟದಲ್ಲಿದ್ದಾಗ ಅವರಿಗೆ ನೆರವು ನೀಡಬೇಕಿದೆ. ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಲು ಮುಂದಾಗಬೇಕಿದೆ. ಹಿಂದಿನ ಕೆಲವು ವರ್ಷಗಳಲ್ಲಿ ಫುಟ್‌ಬಾಲ್ ಆಟಗಾರರು, ವ್ಯವಸ್ಥಾಪಕರು ಮತ್ತು ಸಿಬ್ಬಂದಿಯನ್ನು ಒಳಗೊಂಡ ತಂಡವೊಂದನ್ನು ಸಾಮಾಜಿಕ ತಾಣಗಳ ಮೂಲಕ ಸ್ಥಾಪಿಸಲು ಸಾಧ್ಯವಾಗಿದೆ. ಅದು ಈಗ ಬಲಿಷ್ಠವಾಗಿದೆ. ಅದರ ಮೂಲಕ ನೆರವು ನೀಡಲಾಗುವುದು' ಎಂದು ಎಸ್‌ಸಿ ಈಸ್ಟ್ ಬೆಂಗಾಲ್ ತಂಡದ ಸ್ಟ್ರೈಕರ್ ಆಗಿರುವ ಕೇರಳದ ವಿನೀತ್ ತಿಳಿಸಿದ್ದಾರೆ.



'ಆಮ್ಲಜನಕ ಪೂರೈಕೆಗೆ ಸಹಾಯ ಮತ್ತು ರಕ್ತಬ್ಯಾಂಕ್‌ಗಳಿಗೆ ನೆರವು ನೀಡುವುದರ ಜೊತೆಯಲ್ಲಿ ಲಸಿಕೆ ಹಾಕಲು ಹೋಗುವ ಮುನ್ನ ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು, ಸಾರ್ವಜನಿಕರು ಕೂಡ ಸಹಾಯ ಹಸ್ತ ಚಾಚಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಕೇರಳದ ಕಣ್ಣೂರು ನಿವಾಸಿಯಾದ ವಿನೀತ್ ಕಳೆದ ವರ್ಷ ರಾಷ್ಟ್ರದಾದ್ಯಂತ ಲಾಕ್‌ಡೌನ್ ಆಗಿದ್ದ ಸಂದರ್ಭದಲ್ಲಿ ಕೋವಿಡ್ ಸಹಾಯವಾಣಿ ಕೇಂದ್ರದಲ್ಲಿ ಸ್ವಯಂಸೇವಕನಾಗಿ ಕಾರ್ಯನಿರ್ವಹಿಸಿದ್ದರು.

'ಇದು ಸಾಮಾಜಿಕ ಕಾರ್ಯವಲ್ಲ, ನಾಗರಿಕನೆಂಬ ನೆಲೆಯಲ್ಲಿ ಸಮಾಜಕ್ಕಾಗಿ ಮಾಡಬೇಕಾದ ಕರ್ತವ್ಯಶ' ಎಂದು ವಿನೀತ್ ಹೇಳಿದ್ದಾರೆ.

ಒಲಿಂಪಿಕ್ಸ್‌ಗೆ ಸುಮಿತ್ ಮಲಿಕ್

ಸೋಫಿಯಾ, ಬಲ್ಗೇರಿಯ (ಪಿಟಿಐ): ಭಾರತದ ಸುಮಿತ್ ಮಲಿಕ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು. ಇಲ್ಲಿ ನಡೆಯುತ್ತಿರುವ ಅರ್ಹತಾ ಟೂರ್ನಿಯ ಫೈನಲ್ ಪ್ರವೇಶಿಸುವುದರೊಂದಿಗೆ ಅವರು ಈ ಸಾಧನೆ ಮಾಡಿದರು. ಈ ಮೂಲಕ ಕೂಟಕ್ಕೆ ಅರ್ಹತೆ ಗಳಿಸುವ ದೇಶದ ನಾಲ್ಕನೇ ಕುಸ್ತಿಪಟು ಎನಿಸಿಕೊಂಡರು.

125 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಮಲಿಕ್ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 5–0ರಲ್ಲಿ ವೆನೆಜುವೆಲಾದ ಜೋಸ್ ಡ್ಯಾನಿಯಲ್ ರಾಬರ್ಟ್ ಎದುರು ಗೆದ್ದರು. ನಿರೀಕ್ಷೆ ಮೂಡಿಸಿದ್ದ ಅಮಿತ್ ಧನಕಾರ್ (74 ಕೆಜಿ ವಿಭಾಗ) ಮತ್ತು ಸತ್ಯಾವರ್ತ್ ಕಡಿಯನ್ (97 ಕೆಜಿ) ನಿರಾಸೆ ಅನುಭವಿಸಿದರು. ಮಲ್ಡೋವಾದ ಮಿಹೈಲ್ ಸವಾ ಎದುರು 6–9ರಲ್ಲಿ ಅಮಿತ್ ಸೋತರೆ ಕಡಿಯನ್ 5–2ರಲ್ಲಿ ಪೋರ್ಟೊರಿಕೊದ ಇವಾನ್ ಅಮಡೌರ್ ರಾಮೋಸ್‌ಗೆ ಮಣಿದರು.



ಸುಮಿತ್ ಮಲಿಕ್ –ಸಾಯ್ ಚಿತ್ರ

ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ತಂಡದ ಆಯ್ಕೆ ಇಂದು

ದೇವದತ್ತ, ಪ್ರಸಿದ್ಧಗೆ ಸ್ಥಾನ?

ನವದೆಹಲಿ (ಪಿಟಿಐ): ದೇವದತ್ತ ಪಡಿಕ್ಕಲ್, ಅಭಿಮನ್ಯು ಈಶ್ವರನ್ ಅಥವಾ ಪ್ರಿಯಾಂಕ್ ಪಾಂಚಾಲ್ ಅವರನ್ನು ಇಂಗ್ಲೆಂಡ್ ಪ್ರವಾಸಕ್ಕಾಗಿ ಭಾರತ ತಂಡದ ಆಯ್ಕೆ ಸಂದರ್ಭದಲ್ಲಿ ಹೆಚ್ಚುವರಿ ಆರಂಭಿಕ ಆಟಗಾರರ ಸ್ಥಾನಕ್ಕೆ ಪರಿಗಣಿಸುವ ಸಾಧ್ಯತೆ ಇದೆ. ನಾಲ್ಕು ತಿಂಗಳ ಪ್ರವಾಸಕ್ಕಾಗಿ 30 ಆಟಗಾರರ ತಂಡವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಶುಕ್ರವಾರ ಪ್ರಕಟಿಸಲಿದೆ.

ಭಾರತ ತಂಡವು ಜೂನ್ 18ರಂದು ನ್ಯೂ ಸೌತಾಂಪ್ಟನ್‌ನಲ್ಲಿ ಆರಂಭವಾಗಲಿರುವ ನ್ಯೂಜಿಲೆಂಡ್ ಎದುರಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಆಡಿದ ನಂತರ ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಈ ಪಂದ್ಯಗಳು ಆಗಸ್ಟ್ 4, 12, 25, ಸೆಪ್ಟೆಂಬರ್ 2 ಮತ್ತು 10ರಂದು ಆರಂಭವಾಗಲಿವೆ.

ಐಪಿಎಲ್‌ನಲ್ಲಿ ಉತ್ತಮ ಆಟವಾಡಿದ್ದ ಪೃಥ್ವಿ ಶಾ ತಂಡಕ್ಕೆ ಮರಳುವ ಸಾಧ್ಯತೆ ಇದ್ದು ಇಶಾನ್ ಕಿಶನ್ ಮತ್ತು ಕೋನಾ ಭರತ್ ಅವರನ್ನು ಮೂರನೇ ವಿಕೆಟ್ ಕೀಪರ್ ಸ್ಥಾನಕ್ಕೆ ಪರಿಗಣಿಸುವ ಸಾಧ್ಯತೆ ಇದೆ. ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಜೊತೆ ಅಕ್ಷರ್ ಪಟೇಲ್ ಮತ್ತು ರಾಹುಲ್ ಚಾಹರ್ ಅವರು ಸ್ಪಿನ್ನರ್‌ಗಳ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿದ್ದಾರೆ. ಹಾರ್ದಿಕ್ ಪಾಂಡ್ಯ ಅವರನ್ನು ಬ್ಯಾಟಿಂಗ್ ಆಲ್‌ರೌಂಡರ್ ಆಗಿಯೂ ಶಾರ್ದೂಲ್ ಠಾಕೂರ್ ಅವರನ್ನು ಬೌಲಿಂಗ್ ಆಲ್‌ರೌಂಡರ್ ಆಗಿಯೂ ಸೇರಿಸಿಕೊಳ್ಳುವುದು ಖಚಿತ.



ದೇವದತ್ತ ಪಡಿಕ್ಕಲ್



ಪ್ರಸಿದ್ಧ ಕೃಷ್ಣ

ಟಿ.ನಟರಾಜನ್ ಅವರ ಅನುಪಸ್ಥಿತಿಯಲ್ಲಿ ಜಯದೇವ ಉನದ್ಕತ್ ಅವರನ್ನು ಎಡಗೈ ವೇಗದ ಬೌಲರ್ ಸ್ಥಾನಕ್ಕೆ ಪರಿಗಣಿಸಲಿದ್ದು ವೇಗಿಗಳ ಸ್ಥಾನಕ್ಕೆ ಪ್ರಸಿದ್ಧ ಕೃಷ್ಣ ಮತ್ತು ಆವೇಶ್ ಖಾನ್ ಅವರ ಹೆಸರನ್ನೂ ಪರಿಗಣಿಸುವ ಸಾಧ್ಯತೆ ಇದೆ. ಮೊಹಮ್ಮದ್ ಶಮಿ, ಹನುಮ ವಿಹಾರಿ ಮತ್ತು ಭುವನೇಶ್ವರ್ ಕುಮಾರ್ ಅವರಿಗೂ ಸ್ಥಾನ ಸಿಗಲಿದೆ.

ಸಂಭಾವ್ಯ ಆಟಗಾರರು: ಆರಂಭಿಕ ಬ್ಯಾಟ್ಸ್‌ಮನ್‌ಗಳು: ರೋಹಿತ್ ಶರ್ಮಾ, ಶುಭಮನ್ ಗಿಲ್, ಪೃಥ್ವಿ ಶಾ, ಮಯಂಕ್ ಅಗರವಾಲ್, ಅಭಿಮನ್ಯು ಈಶ್ವರನ್, ಪ್ರಿಯಾಂಕ್ ಪಾಂಚಾಲ್, ದೇವದತ್ತ ಪಡಿಕ್ಕಲ್; **ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು:** ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ಹನುಮ ವಿಹಾರಿ, ಕೆ.ಎಲ್. ರಾಹುಲ್; **ಆಲ್‌ರೌಂಡರ್‌ಗಳು:** ವಾಷಿಂಗ್ಟನ್ ಸುಂದರ್, ಹಾರ್ದಿಕ್ ಪಾಂಡ್ಯ, ಶಾರ್ದೂಲ್ ಠಾಕೂರ್; **ಸ್ಪಿನ್ನರ್‌ಗಳು:** ಆರ್.ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ರಾಹುಲ್ ಚಾಹರ್; **ವೇಗಿಗಳು:** ಜಸ್‌ಪ್ರೀತ್ ಬೂಮ್ರಾ, ಇಶಾಂತ್ ಶರ್ಮಾ, ಉಮೇಶ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ನವದೀಪ್ ಸೈನಿ, ಆವೇಶ್ ಖಾನ್, ಪ್ರಸಿದ್ಧ ಕೃಷ್ಣ, ಭುವನೇಶ್ವರ್ ಕುಮಾರ್; **ನೆಟ್ ಬೌಲರ್‌ಗಳು:** ಚೇತನ್ ಸಕಾರಿಯ, ಅಂಕಿತ್ ರಜಪೂತ್.

ಮಾರಿಮುತ್ತು ಮನವಿ ತಿರಸ್ಕಾರ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆಗೆ ಸಂಬಂಧಿಸಿ ನಾಲ್ಕು ವರ್ಷಗಳ ಅಮಾನತಿಗೆ ಒಳಗಾಗಿರುವ ಭಾರತದ ಮಧ್ಯಮ ಅಂತರದ ಓಟಗಾರ್ತಿ ಗೋಮತಿ ಮಾರಿಮುತ್ತು ಶಿಕ್ಷೆ ರದ್ದು ಮಾಡಬೇಕು ಎಂದು ಕೋರಿ ಸಲ್ಲಿಸಿದ್ದ ಮನವಿ ತಿರಸ್ಕಾರಗೊಂಡಿದೆ.

32 ವರ್ಷದ ಗೋಮತಿ ಅವರನ್ನು 2019ರ ಮೇ 17ರಂದು ಅಮಾನತು ಮಾಡಲಾಗಿತ್ತು. ಶಿಕ್ಷೆ 2023ರ ಮೇ 16ರ ವರೆಗೆ ಜಾರಿಯಲ್ಲಿರುತ್ತದೆ. ಇದರ ವಿರುದ್ಧ ಸಲ್ಲಿಸಿದ್ದ ಮನವಿಯನ್ನು ಕ್ರೀಡಾ ನ್ಯಾಯಾಲಯ ಬುಧವಾರ ತಳ್ಳಿ ಹಾಕಿದೆ.

2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಗೋಮತಿ ಚಿನ್ನ ಗೆದ್ದಿದ್ದರು.

ಮ್ಯಾಡ್ರಿಡ್ ಓಪನ್: ಬೋಪಣ್ಣ ಜೋಡಿ ಕ್ವಾರ್ಟರ್ ಫೈನಲ್‌ಗೆ

ಮ್ಯಾಡ್ರಿಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಕೆನಡಾದ ಡೆನಿಸ್ ಶಪೊವಲೊವ್ ಜೋಡಿ ಮ್ಯಾಡ್ರಿಡ್ ಓಪನ್ ಮಾಸ್ಟರ್ಸ್ 1000 ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.


ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಅವರು ಅಗ್ರ ಶ್ರೇಯಾಂಕದ ಆಟಗಾರರಾದ ಜುವಾನ್ ಸೆಬಾಸ್ಟಿಯನ್ ಕಾಬಲ್ ಮತ್ತು ರಾಬರ್ಟ್ ಫರಾ ಅವರನ್ನು 6-3, 6-4ರಲ್ಲಿ ಮಣಿಸಿದರು. 41 ವರ್ಷದ ಬೋಪಣ್ಣ ಅವರಿಗೆ ಎಟಿಪಿ ಟೂರ್ ಒಂದರಲ್ಲಿ ಇದು ಈ ವರ್ಷದ ಮೊದಲ ಕ್ವಾರ್ಟರ್ ಫೈನಲ್.

ಬೋಪಣ್ಣ ಜೋಡಿ ಎಂಟರ ಘಟ್ಟದ ಹಣಾಹಣಿಯಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಟಿಮ್ ಪುಯೆಟ್ಜ್ ಅವರನ್ನು ಎದುರಿಸುವರು ಎಂದು ಭಾರತ ಕ್ರೀಡಾ ಪ್ರಾಧಿಕಾರ ಟ್ವೀಟ್ ಮಾಡಿದೆ.

ಮಾಜಿ ಫುಟ್‌ಬಾಲ್ ಆಟಗಾರ ಮಹಾಲಿಂಗಂ ನಿಧನ

ಬೆಂಗಳೂರು: ಮಾಜಿ ಫುಟ್‌ಬಾಲ್ ಆಟಗಾರ ಮಹಾಲಿಂಗಂ (72) ಹೃದಯಾಘಾತದಿಂದ ಗುರುವಾರ ಮನೆಯಲ್ಲಿ ನಿಧನರಾಗಿದ್ದಾರೆ. ಅವರ ಹಿರಿಯ ಸಹೋದರ, ಮಾಜಿ ಫುಟ್‌ಬಾಲ್ ಆಟಗಾರ ಮೂರ್ತಿ ಅವರು ಎರಡು ದಿನಗಳ ಹಿಂದೆ ನಿಧನರಾಗಿದ್ದರು.

1973ರಲ್ಲಿ ಬೆಂಗಳೂರು ಮಾರ್ಸ್ ತಂಡದ ಪರ ಆಡಿದ್ದ ಮಹಾಲಿಂಗಂ ಮುಂದಿನ ಎರಡು ವರ್ಷ ಜವಾಹರ್ ಯೂನಿಯನ್ ಎಫ್‌ಸಿಯಲ್ಲಿದ್ದರು. 1977ರಲ್ಲಿ ಆರ್ಮಿ ಬೇಸ್ ವರ್ಕ್‌ಶಾಪ್ ಸೇರಿಕೊಂಡರು. ಬೆಂಗಳೂರಿನ ಅಲಸೂರು ನಿವಾಸಿಯಾಗಿದ್ದ ಅವರು ಸ್ಥಳೀಯ ಕ್ಲಬ್‌ಗಳ ಅತ್ಯುತ್ತಮ ಡಿಫೆಂಡರ್‌ಗಳಲ್ಲಿ ಒಬ್ಬರಾಗಿದ್ದರು.



ಮಹಾಲಿಂಗಂ

ನಿವೃತ್ತರಾದ ನಂತರವೂ ಫುಟ್‌ಬಾಲ್ ಮೇಲಿನ ಪ್ರೀತಿ ಕಡಿಮೆಯಾಗಿರಲಿಲ್ಲ. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇತ್ತೀಚಿನ ಪಂದ್ಯಗಳಿಗೂ ವಾಕಿಂಗ್ ಸ್ಟಿಕ್ ಹಿಡಿದುಕೊಂಡು ಅವರು ಬರುತ್ತಿದ್ದರು ಎಂದು ರಾಜ್ಯ ಫುಟ್‌ಬಾಲ್ ಸಂಸ್ಥೆ ನೆನಪಿಸಿಕೊಂಡಿದೆ.

ಶಿಖರ್ ಧವನ್‌ಗೆ ಕೋವಿಡ್ ಲಸಿಕೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಶಿಖರ್ ಧವನ್ ಗುರುವಾರ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. 35 ವರ್ಷದ ಶಿಖರ್ ಐಪಿಎಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಪ್ರತಿನಿಧಿಸಿದ್ದರು.

'ನಾನು ಲಸಿಕೆ ತೆಗೆದುಕೊಂಡೆ. ಕೋವಿಡ್ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿರುವ ಆರೋಗ್ಯ ಕಾರ್ಯಕರ್ತರ ಸಮರ್ಪಣಾ ಭಾವಕ್ಕೆ ಸಾಟಿ ಇಲ್ಲ. ಲಸಿಕೆ ಪಡೆಯಲು ಯಾರೂ ಹಿಂಜರಿಯಬೇಡಿ. ಕೊರೊನಾ ಹಿಮ್ಮೆಟ್ಟಿಸುವ ಹೋರಾಟದಲ್ಲಿ ಇದು ಅಗತ್ಯ' ಎಂದು ಶಿಖರ್ ಟ್ವೀಟ್ ಮಾಡಿದ್ದಾರೆ.


ವೇದಾ ಸಹೋದರಿ ಸಾವು

ಬೀರೂರು: ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರ ಸಹೋದರಿ ವತ್ಸಲಾ ಶಿವಕುಮಾರ್ (42) ಕೋವಿಡ್–19ನಿಂದ ಮೃತಪಟ್ಟಿದ್ದಾರೆ. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬುಧವಾರ ಮನೆಗೆ ಮರಳಿದ್ದರು. ತಡರಾತ್ರಿ ಆರೋಗ್ಯ ಏರುಪೇರಾಗಿದ್ದು, ಮೃತಪಟ್ಟಿದ್ದಾರೆ. ಕೆಲದಿನಗಳ ಹಿಂದೆ ವೇದಾ ತಾಯಿ ಚೆಲುವಾಂಬ ಕೋವಿಡ್‌ನಿಂದ ಮೃತಪಟ್ಟಿದ್ದರು. ವತ್ಸಲಾ ಅವರ ಪತಿ ವರ್ಷಗಳ ಹಿಂದೆ ಅಪಘಾತದಲ್ಲಿ ನಿಧನರಾಗಿದ್ದಾರೆ/



ವತ್ಸಲಾ

ಷೇರುಪೇಟೆ ವಹಿವಾಟು 272



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,617
ಇಂದಿನ ಅಂತ್ಯ	14,724
▲	107
ದಿನದ ಗರಿಷ್ಠ	14,743

ವಿನಿಮಯ ದರ

$ ಡಾಲರ್	73.78
£ ಪೌಂಡ್	102.65
€ ಯುರೊ	88.87
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹427

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1440 (1425)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1360(1345)

ಕಚ್ಚಾತೈಲ ದರ ಏರಿಕೆ: ಮೂರನೇ ದಿನವೂ ಇಂಧನ ದರ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಾದ್ಯಂತ ಸತತ ಮೂರನೇ ದಿನವೂ ಪೆಟ್ರೋಲ್, ಡೀಸೆಲ್ ದರ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ 25 ಪೈಸೆ ಹೆಚ್ಚಾಗಿ ₹ 90.99ರಂತೆ ಹಾಗೂ ಡೀಸೆಲ್ ದರ 30 ಪೈಸೆ ಹೆಚ್ಚಾಗಿ ₹ 81.42ರಂತೆ ಮಾರಾಟವಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ 24 ಪೈಸೆ ಹೆಚ್ಚಾಗಿ ₹ 94.01ರಂತೆ ಹಾಗೂ ಡೀಸೆಲ್ ದರ 30 ಪೈಸೆ ಹೆಚ್ಚಾಗಿ 86.31ರಂತೆ ಮಾರಾಟವಾಗಿದೆ. ಮೂರು ದಿನಗಳಲ್ಲಿ ಪೆಟ್ರೋಲ್ ದರ 58 ಪೈಸೆ ಮತ್ತು ಡೀಸೆಲ್ ದರ 71 ಪೈಸೆ ಹೆಚ್ಚಾಗಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹97.34 ಮತ್ತು ಡೀಸೆಲ್ ದರ 88.49ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆ ಆಧಾರದ ಮೇಲೆ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ.

ಚಿನ್ನ ₹ 439, ಬೆಳ್ಳಿ ₹ 1,302ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರದಲ್ಲಿ ಏರಿಕೆ ಆಗಿದೆ.

ಚಿನ್ನದ ದರ10 ಗ್ರಾಂಗೆ ₹ 439ರಷ್ಟು ಹೆಚ್ಚಾಗಿ ₹ 46,680ರಂತೆ ಹಾಗೂ ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,302ರಷ್ಟು ಹೆಚ್ಚಾಗಿ ₹ 69,511ರಂತೆ ಮಾರಾಟ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಮಾಹಿತಿ ನೀಡಿದೆ.

ಎಲ್‌ಐಸಿ: ಸೋಮವಾರದಿಂದ ವಾರದಲ್ಲಿ 5 ದಿನ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಸೋಮವಾರದಿಂದ (ಮೇ 10) ಆರಂಭ ಆಗುವಂತೆ ತನ್ನ ನೌಕರರಿಗೆ ವಾರದಲ್ಲಿ ಐದು ದಿನಗಳ ಕೆಲಸದ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಕೇಂದ್ರ ಸರ್ಕಾರವು ಏಪ್ರಿಲ್ 15ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಎಲ್‌ಐಸಿಗೆ ಪ್ರತಿ ಶನಿವಾರ ಸರ್ಕಾರಿ ರಜಾ ದಿನ ಆಗಿರಲಿದೆ. ಹೀಗಾಗಿ ಎಲ್‌ಐಸಿಯ ಎಲ್ಲಾ ಕಚೇರಿಗಳು ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರವೇ ತೆರೆದಿರಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಚಾಲಕರು, ಕಟ್ಟಡ ನಿರ್ವಹಣೆ ಮಾಡುವ ಸಿಬ್ಬಂದಿಯನ್ನು ಹೊರತುಪಡಿಸಿ ಉಳಿದೆಲ್ಲ ನೌಕರರ ಕೆಲಸದ ಅವಧಿಯು ಬೆಳಗ್ಗೆ 10 ರಿಂದ ಸಂಜೆ 5.30ರವರೆಗೆ ಇರಲಿದೆ ಎಂದು ಹೇಳಿದೆ.

ಲಾಕ್‌ಡೌನ್ ಪರಿಣಾಮ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧ್ಯಯನ

23 ಕೋಟಿ ಜನ ಬಡತನದ ಕೂಪಕ್ಕೆ

ಮುಂಬೈ (ಎಎಫ್‌ಪಿ): ಕೋವಿಡ್–19 ಸಾಂಕ್ರಾಮಿಕದ ಪರಿಣಾಮವಾಗಿ ಕಳೆದ ವರ್ಷ ದೇಶದಲ್ಲಿ ಅಂದಾಜು 23 ಕೋಟಿ ಜನ ಬಡತನದ ಕೂಪಕ್ಕೆ ಬಿದ್ದಿದ್ದಾರೆ. ಯುವಕರು ಮತ್ತು ಮಹಿಳೆಯರು ಅತಿಹೆಚ್ಚು ತೊಂದರೆಗೆ ಒಳಗಾಗಿದ್ದಾರೆ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನವೊಂದು ಹೇಳಿದೆ.

ಕೋವಿಡ್‌ನ ಎರಡನೆಯ ಅಲೆಯು ಪರಿಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಲಿದೆ ಎಂದೂ ಅಧ್ಯಯನ ವರದಿಯಲ್ಲಿ ಎಚ್ಚರಿಸಲಾಗಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ ಜಾರಿಗೆ ತಂದ ಕಠಿಣ ಲಾಕ್‌ಡೌನ್ ನಿಯಮಗಳ ಪರಿಣಾಮವಾಗಿ 10 ಕೋಟಿ ಜನರಿಗೆ ಕೆಲಸ ಇಲ್ಲದಂತಾಯಿತು. ಇವರ ಪೈಕಿ ಶೇಕಡ 15ರಷ್ಟು ಜನರಿಗೆ ವರ್ಷದ ಅಂತ್ಯದವರೆಗೂ ಕೆಲಸ ಸಿಗಲಿಲ್ಲ ಎಂದು ವರದಿ ಹೇಳಿದೆ.

ಬುಧವಾರ ಪ್ರಕಟಿಸಲಾದ ಈ ವರದಿಯ ಪ್ರಕಾರ, ಉದ್ಯೋಗ ಕಳೆದುಕೊಂಡ ಮಹಿಳೆಯರ ಪೈಕಿ ಶೇ 47ರಷ್ಟು ಜನರಿಗೆ ಲಾಕ್‌ಡೌನ್ ನಿರ್ಬಂಧಗಳು ತೆರವಾದ ನಂತರವೂ ಹೊಸ ಉದ್ಯೋಗ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. ಪ್ರತಿದಿನದ ಆದಾಯ ₹ 375ಕ್ಕಿಂತ ಕಡಿಮೆ ಇರುವವರನ್ನು ಬಡವರು ಎಂದು ಈ ವರದಿ ಹೇಳಿದೆ.

ಹಲವು ಕುಟುಂಬಗಳು ಆದಾಯ ಕೊರತೆಯನ್ನು ಎದುರಿಸಲು ಆಹಾರ ವಸ್ತುಗಳ ಮೇಲೆ ಖರ್ಚು ಕಡಿಮೆ ಮಾಡಲು ಶುರು ಮಾಡಿದವು. ಈ ಕುಟುಂಬಗಳು ಖರ್ಚು ನಿಭಾಯಿಸಲು ಸಾಲ ಕೂಡ ಮಾಡಿವೆ. ಹಿಂದಿನ ವರ್ಷದ ಲಾಕ್‌ಡೌನ್ ವೇಳೆ ಕೆಲಸ ಕಳೆದುಕೊಂಡ, 25 ವರ್ಷ ವಯಸ್ಸಿನೊಳಗಿನ ಪ್ರತಿ ಮೂವರ ಪೈಕಿ ಒಬ್ಬರಿಗೆ ವರ್ಷಾಂತ್ಯದ ಹೊತ್ತಿನಲ್ಲಿಯೂ ಹೊಸ ಕೆಲಸ ಹುಡುಕಿಕೊಳ್ಳಲು ಆಗಿಲ್ಲ.

'₹ 5.5 ಲಕ್ಷ ಕೋಟಿ ಬೇಕು'

ಬೆಂಗಳೂರು (ಪಿಟಿಐ): ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟನ್ನು ನಿಭಾಯಿಸಲು ₹ 5.5 ಲಕ್ಷ ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್‌ನ ಅಗತ್ಯವಿದೆ ಎಂದು ವರದಿ ಹೇಳಿದೆ.

ಬಿಕ್ಕಟ್ಟಿನಿಂದ ಹೊರಬರಲು ದಿಟ್ಟ ಕ್ರಮಗಳ ಅಗತ್ಯ ಇದೆ. ಎರಡನೆಯ ಅಲೆಯ ಪರಿಣಾಮಗಳು ಮೊದಲ ಅಲೆಯ ಪರಿಣಾಮಗಳಿಗಿಂತ ಹೆಚ್ಚಿರುವ ಸಾಧ್ಯತೆಯೂ ಇದೆ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರಗಳ ಹಣಕಾಸು ಸ್ಥಿತಿ ಚೆನ್ನಾಗಿಲ್ಲ. ಹಾಗಾಗಿ, ಕೇಂದ್ರವು ಹೆಚ್ಚುವರಿಯಾಗಿ ವೆಚ್ಚ ಮಾಡಬೇಕಾದ ಅಗತ್ಯ ಇದೆ. ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆಯ (ಪಿಡಿಎಸ್) ಅಡಿಯಲ್ಲಿ ಉಚಿತವಾಗಿ ಆಹಾರ ಧಾನ್ಯ ನೀಡುವುದನ್ನು ಜೂನ್ ನಂತರವೂ ಮುಂದುವರಿಸಬೇಕು, ದುರ್ಬಲ ವರ್ಗಗಳಿಗೆ ಸೇರಿದ ಕುಟುಂಬಗಳಿಗೆ ತಿಂಗಳಿಗೆ ₹ 5 ಸಾವಿರ ಹಣವನ್ನು ಮೂರು ತಿಂಗಳು ನೀಡಬೇಕು ಎಂದು ವರದಿ ಹೇಳಿದೆ.

'ಎರಡು ಕಾರಣಗಳಿಂದಾಗಿ ಈಗ ಸರ್ಕಾರದ ಕಡೆಯಿಂದ ಹೆಚ್ಚುವರಿ ನೆರವಿನ ಅಗತ್ಯವಿದೆ. ಸಾಂಕ್ರಾಮಿಕದ ಮೊದಲ ವರ್ಷದಲ್ಲಿ ಆದ ನಷ್ಟಕ್ಕೆ ಪರಿಹಾರ ರೂಪದಲ್ಲಿ ಸರ್ಕಾರ ನೆರವು ನೀಡಬೇಕು. ಎರಡನೆಯ ಅಲೆಯ ಪರಿಣಾಮವನ್ನು ಅಂದಾಜಿಸಿ ಕೂಡ ನೆರವು ಒದಗಿಸಬೇಕು' ಎಂದು ವರದಿ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340
ಅಡಿಕೆ	
ಪುತ್ತೂರು	
ಹೊಸತು	28000-39500
ಹಳತು	39500-49500
ಸಿದ್ದಾಪುರ	
ಬಿಳಿಗೋಟು	28090-31999
ಕೋಕ	17609-29889
ಚಾಲಿ	34289-36639
ಕೆಂಪುಗೋಟು	28100-28600
ರಾಶಿ	37899-40809
ತಟ್ಟಿಬೆಟ್ಟೆ	29089-34999
ಶಿರಸಿ	
ಬೆಟ್ಟೆ	33898-37618
ಬಿಳಿಗೋಟು	17400-32426
ಚಾಲಿ	24296-37028
ರಾಶಿ	36699-41100
ಯಲ್ಲಾಪುರ	
ಬಿಳಿಗೋಟು	26899-30919
ಕೋಕ	17609-28899
ಚಾಲಿ	31412-36599
ಕೆಂಪುಗೋಟು	25168-31899
ರಾಶಿ	39880-42989
ತಟ್ಟಿಬೆಟ್ಟೆ	33299-38899
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	38722-43259
ಗೊರಬಲು	29109-31009
ರಾಶಿ	36599-41889
ಸರಕು	45099-72696
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	215-325
ದ್ವಿತಳಿ (ಬಿ.ವಿ)	266-390

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10250	10300	10450	149.85 ಸೆಂಟ್ಸ್
ಎಸಿ	4090	4000	4050	
ಆರ್‌ಪಿ	5100	5100	5200	ಲಂಡನ್
ಆರ್‌ಸಿ	3000	3000	3010	1538 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 6-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1420 (1420)
ಪಾಮ್ ವಾರದ ಡೆಲಿವರಿ	1358 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,800 (46,650)

ಬೆಳ್ಳಿ ಕೆ.ಜಿ 69,300 (69,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೈಬ್ರಿಡ್ ಕೆಲಸದ ವ್ಯವಸ್ಥೆಯತ್ತ ಗೂಗಲ್

ನವದೆಹಲಿ (ಪಿಟಿಐ): ವಾರದಲ್ಲಿ ಮೂರು ದಿನ ಕಚೇರಿಯಿಂದ ಕೆಲಸ, ಇನ್ನುಳಿದ ಎರಡು ದಿನ ಉದ್ಯೋಗಿಗೆ ಸೂಕ್ತ ಅನ್ನಿಸುವ ಜಾಗದಿಂದ ಕೆಲಸ ನಿಭಾಯಿಸುವ ಹೈಬ್ರಿಡ್ ವ್ಯವಸ್ಥೆಯನ್ನು ಜಾರಿಗೆ ತರಲು ಗೂಗಲ್ ಕಂಪನಿ ಮುಂದಾಗಿದೆ. ಗೂಗಲ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುಂದರ್ ಪಿಚೈ ಈ ಮಾಹಿತಿ ನೀಡಿದ್ದಾರೆ.

ಈ ವರ್ಷದ ಕೊನೆಯಲ್ಲಿ ಗೂಗಲ್ ಕಂಪನಿಯು ಕಚೇರಿಗಳು ಮತ್ತೆ ಆರಂಭವಾದ ಬಳಿಕ, ಶೇಕಡ 20ರಷ್ಟು ಉದ್ಯೋಗಿಗಳು ಕಚೇರಿಯಿಂದ ಹೊರಗಿದ್ದು ಕೆಲಸ ಮಾಡಲಿದ್ದಾರೆ. ಶೇ 60ರಷ್ಟು ಉದ್ಯೋಗಿಗಳು ವಾರದಲ್ಲಿ ಕೆಲವು ದಿನ ಕಚೇರಿಗೆ ಬಂದು ಕೆಲಸ ಮಾಡಲಿದ್ದಾರೆ ಎಂದು ಪಿಚೈ ತಿಳಿಸಿದ್ದಾರೆ.



ಸುಂದರ್ ಪಿಚೈ

ಉದ್ಯೋಗಿಗಳಿಗೆ ಅವರ ಕೆಲಸದ ಸ್ವರೂಪದ, ಅವರು ಕೆಲಸ ಮಾಡುವ ಗುಂಪಿನ ಅಗತ್ಯಗಳ ಆಧಾರದ ಮೇಲೆ ಕಚೇರಿಗೆ ಬಾರದೆಯೇ ಕೆಲಸ ಮಾಡಲು ಅರ್ಜಿ ಸಲ್ಲಿಸುವ ಅವಕಾಶವನ್ನೂ ಕಂಪನಿ ನೀಡುತ್ತದೆ ಎಂದೂ ಅವರು ಹೇಳಿದ್ದಾರೆ. 2021ರ ಮೊದಲ ತ್ರೈಮಾಸಿಕದ ಹಣಕಾಸು ವರದಿಯ ಪ್ರಕಾರ, ಗೂಗಲ್‌ನಲ್ಲಿ ಒಟ್ಟಾರೆ 1.39 ಲಕ್ಷ ಉದ್ಯೋಗಿಗಳಿದ್ದಾರೆ. ಭಾರತದಲ್ಲಿ ಕಂಪನಿಯ ನಾಲ್ಕು ಸಾವಿರ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ ಎಂಬ ಅಂದಾಜು ಇದೆ.

ಷೇರುಪೇಟೆಯಲ್ಲಿ ಉತ್ತಮ ಖರೀದಿ ವಹಿವಾಟು

ಮುಂಬೈ (ಪಿಟಿಐ): ಆಟೊಮೊಬೈಲ್, ಹಣಕಾಸು ಮತ್ತು ಐ.ಟಿ. ವಲಯಗಳ ಷೇರುಗಳ ಖರೀದಿಯು ಗುರುವಾರ ಬಿರುಸಿನಿಂದ ನಡೆಯಿತು. ಇದರಿಂದಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ದಿನವೂ ಏರಿಕೆ ದಾಖಲಿಸಿದವು.

ಕೋವಿಡ್–19 ಲಸಿಕೆಗಳ ಮೇಲಿನ ಬೌದ್ಧಿಕ ಆಸ್ತಿ ಹಕ್ಕುಗಳನ್ನು ತೆಗೆಯುವ ನಿಲುವಿಗೆ ಅಮೆರಿಕದ ಸರ್ಕಾರ ಬೆಂಬಲ ನೀಡಿದ್ದು ಮಾರುಕಟ್ಟೆಯಲ್ಲಿ ಉತ್ಸಾಹದ ವಾತಾವರಣ ನಿರ್ಮಾಣ ಆಗುವಂತೆ ಮಾಡಿತು. ಈ ಬೆಂಬಲವು ಕಾರ್ಯರೂಪಕ್ಕೆ ಬಂದರೆ ಭಾರತ ಹಾಗೂ ಇತರ ಕೆಲವು ದೇಶಗಳಲ್ಲಿ ಲಸಿಕೆ ನೀಡುವ ಪ್ರಕ್ರಿಯೆಗೆ ವೇಗ ಸಿಗಬಹುದು ಎಂಬ ಆಶಾವಾದ ಹೂಡಿಕೆದಾರರಲ್ಲಿ ಮೂಡಿದೆ ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು 272 ಅಂಶ ಏರಿಕೆ ಕಂಡಿತು, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 106 ಅಂಶ ಏರಿಕೆ ಕಂಡಿತು. ಅಮೆರಿಕದ ಡಾಲರ್ ಎದುರು 13 ಪೈಸೆ ಚೇತರಿಕೆ ಕಂಡ ರೂಪಾಯಿ ಮೌಲ್ಯ, ದಿನದ ವಹಿವಾಟಿನ ಅಂತ್ಯಕ್ಕೆ 73.78ಕ್ಕೆ ತಲುಪಿತು.

ರೇರಾ ಅಧ್ಯಕ್ಷರಾಗಿ ಕಿಶೋರ್ ಚಂದ್ರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಅಧ್ಯಕ್ಷರನ್ನಾಗಿ ನಿವೃತ್ತ ಡಿಜಿಪಿ ಎಚ್.ಸಿ.ಕಿಶೋರ್‌ಚಂದ್ರ ಅವರನ್ನು ನೇಮಕ ಮಾಡಲಾಗಿದೆ.

ಈ ಬಗ್ಗೆ ಗುರುವಾರ ಆದೇಶ ಹೊರಡಿಸಲಾಗಿದೆ, ಹಾಲಿ ಅಧ್ಯಕ್ಷ ಎಂ.ಆರ್.ಕಾಂಬ್ಳೆ ಅವರ ಅಧಿಕಾರ ಅವಧಿ ಇದೇ ತಿಂಗಳ 31ಕ್ಕೆ ಕೊನೆಗೊಳ್ಳಲಿದೆ. ನಿವೃತ್ತ ಡಿಜಿಪಿ ನೀಲಮಣಿ ರಾಜು ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ನಿವೃತ್ತ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಮಧ್ಯೆ ತೀವ್ರ ಪೈಪೋಟಿ ಇತ್ತು. ಟಿ.ಎಂ. ವಿಜಯಭಾಸ್ಕರ್ ಮುಂತಾದವರ ಹೆಸರೂ ಈ ಹುದ್ದೆಗೆ ಕೇಳಿ ಬಂದಿತ್ತು. ಕಿಶೋರ್‌ಚಂದ್ರ ಅವರ ಅಧಿಕಾರವಧಿ ಐದು ವರ್ಷಗಳು.

'ಇವರಿಬ್ಬರ ನೇಮಕ ಸ್ವಾಗತಾರ್ಹ. ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ನೇಮಿಸಿರುವುದು ಒಳ್ಳೆಯದು. ಖರೀದಿದಾರರಿಗೂ ವಿಶ್ವಾಸ ಮೂಡುತ್ತದೆ. ಮನೆಯನ್ನು ಸಕಾಲದಲ್ಲಿ ಪಡೆಯಲು ಗ್ರಾಹಕರಿಗೆ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ರೇರಾಗೆ ಸಹಾಯವಾಗುತ್ತದೆ' ಎಂದು ಫೋರಂ ಫಾರ್ ಪೀಪಲ್ಸ್ ಕಲೆಕ್ಟಿವ್ ಎಫರ್ಟ್ಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶಂಕರ್ ಪ್ರತಿಕ್ರಿಯಿಸಿದ್ದಾರೆ.



ಕಿಶೋರ್ ಚಂದ್ರ

'ಹೊಸ ಅಧ್ಯಕ್ಷರಿಗೆ ಹಲವು ಸವಾಲುಗಳಿವೆ. ಸುಮಾರು 565 ಗೃಹ ಯೋಜನೆಗಳ ನೋಂದಣಿಗೆ ಅನುಮತಿ ದೊರಕಿಲ್ಲ. 942 ಗೃಹ ಯೋಜನೆಗಳಲ್ಲಿ 2000 ಕ್ಕೂ ಹೆಚ್ಚು ದೂರುಗಳು ಖರೀದಿದಾರರಿಂದ ಬಂದಿವೆ. 1000 ಕ್ಕೂ ಹೆಚ್ಚು ಯೋಜನೆಗಳು ರೇರಾದಲ್ಲಿ ನೋಂದಣಿ ಆಗಿಲ್ಲ' ಎಂದು ತಿಳಿಸಿದ್ದಾರೆ.